# ಒಳಪುಟಗಳಲ್ಲಿ.....!!


| ವಿವರ | | ಕ್ರಮ ಸಂಖ್ಯೆ |
|---|---|---|
| ಸಂಪಾದಕೀಯ | ವಂ. ಡೇವಿಡ್ ಪ್ರಕಾಶ್ | 4 |
| ವಿಶ್ವಾಸದ ವರ್ಷ ಏನು ? ಯಾಕೆ ? ಯಾವಾಗ ? ಹೇಗೆ ? | | 5 |
| ಬೈಬಲ್ ಜ್ಯೋತಿ | ಫಾ. ರೋಮನ್ ಪಿಂಟೊ | 8 |
| ಪ್ರೇರಣಾ ಜ್ಯೋತಿ | ವಂ. ಅಲೆಕ್ಸಾಂಡರ್ ಕಪುಚಿನ್ | 10 |
| ಬೋಧನಾ ಜ್ಯೋತಿ | | 11 |
| ವಿಜ್ಞಾನ ಜ್ಯೋತಿ | ಆರ್. ಜ್ಞಾನಪ್ರಕಾಶ್ | 13 |
| ಯುವ ಜ್ಯೋತಿ | ಆನಂದ್ ಎಸ್.ಡಿ.ಬಿ. | 15 |
| ಆರೋಗ್ಯ ಜ್ಯೋತಿ | ಡಾ. ಸಿ. ಎನ್. ಜಗದೀಶ್ | 17 |
| ನಶ್ವರ ಲೋಕ | ಜಾ. ಡಿಸೋಜ | 19 |
| ಅರಳುವ ಹೂಗಳೆ ಆಲಿಸಿರಿ... | ಸಹೋ. ಅನಿಲ್‌ಕುಮಾರ್ | 20 |
| ಮೃತರಾದ ಭಕ್ತವಿಶ್ವಾಸಿಗಳ ಸ್ಮರಣೆಯ ಹಬ್ಬ | ಮಥಿಯಾಸ್ ಕುಮಾರ್ | 21 |
| ಕನ್ನಡಾಂಭೆಯ ಜನ್ಮದಿನಕ್ಕೆ ಕ್ರೈಸ್ತ ವಿದ್ವಾಂಸರ ಕಾಣಿಕೆ | ಮಥಿಯಾಸ್ ಕುಮಾರ್ | 23 |
| ಚಿಕ್ಕಮಗಳೂರು ಧರ್ಮ ಕ್ಷೇತ್ರ ನಡೆದು ಬಂದ ದಾರಿ | ಬಿ. ಎಸ್. ತಲ್ವಾಡಿ | 25 |
| ಬೈಬಲ್ಲಿನ ವಿಶಿಷ್ಟ ವ್ಯಕ್ತಿಗಳು | ಡಾ. ಲೀಲಾವತಿ ದೇವದಾಸ್ | 27 |
| ಜೀವನ ಮತ್ತದರ ಅರ್ಥ | ಹೇಮಾ | 28 |
| ಪ್ರದೇಶ ವಿಶೇಷ | ವಂ. ಚಾರ್ಲ್ಸ್ ಪಿರೇರಾ | 29 |
| ವಿದೇಶ ವಿಶೇಷ | | 30 |
| ಕಾವ್ಯ ಜ್ಯೋತಿ | ದೋನಾತ್ ಡಿ ಅಲ್ಮೇಡಾ | |


## ನವೆಂಬರ್ ತಿಂಗಳ ಧರ್ಮಾಧ್ಯಕ್ಷರ ಕಾರ್ಯಕ್ರಮಗಳು

| ದಿನಾಂಕ | ದಿನ | ಸಮಯ | ವಿವರ |
|---|---|---|---|
| 1-11-2012 | ಗುರುವಾರ | ಸಂಜೆ 6ಕ್ಕೆ | ಸಕಲ ಸಂತರ ಹಬ್ಬ, ದಿವ್ಯ ಬಲಿಪೂಜೆ, ಯೇಸು ಬಾಲರ ಪುಣ್ಯಕ್ಷೇತ್ರ, ಪಾರ್ವತಿಪುರ, ಚಿಕ್ಕಮಗಳೂರು |
| 2-11-2012 | ಶುಕ್ರವಾರ | ಬೆಳಿಗ್ಗೆ 7ಕ್ಕೆ | ಮೃತ ವಿಶ್ವಾಸಿಗಳ ಸ್ಮರಣೆ, ದಿವ್ಯ ಬಲಿಪೂಜೆ, ಪ್ರಧಾನಾಲಯ (ಸಮಾಧಿಯ ಬಳಿ |
| 3-11-2012 | ಶನಿವಾರ | ಬೆಳಿಗ್ಗೆ 6.45ಕ್ಕೆ | ದಿವ್ಯ ಬಲಿಪೂಜೆ, ಸಂತ ಜೋಸೆಫರ ಗುರುಮಂದಿರ, ಚಿಕ್ಕಮಗಳೂರು. |
| 4-11-2012 | ಭಾನುವಾರ | ಬೆಳಿಗ್ಗೆ 10.30ಕ್ಕೆ | ವಾರ್ಷಿಕೋತ್ಸವ, ಸಂತ ಅಂತೋಣಿಯವರ ದೇವಾಲಯ, ಬಾವಿಕೆರೆ (ಲಕ್ಕವಳ್ಳಿ ಧರ್ಮಕೇಂದ್ರ) |
| 5-11-2012 13-11-2012 | ರಿಂದ ರವರೆಗೆ | | ಧರ್ಮಾಧ್ಯಕ್ಷರುಗಳ ಧರ್ಮೋಪದೇಶ ಕೂಟ, ಇಸ್ರಾಯೇಲ್ |
| 18-11-2012 | ಭಾನುವಾರ | ಬೆಳಿಗ್ಗೆ10ಕ್ಕೆ | ದಿವ್ಯ ಬಲಿಪೂಜೆ, ಯುವ ಜನರ ಧ್ಯಾನಕೂಟ, ಆರ್.ಆರ್.ಸಿ. ಬೆಂಗಳೂರು. |
| 20-11-2012 | ಮಂಗಳವಾರ | ಬೆಳಿಗ್ಗೆ10ಕ್ಕೆ | ವಿಶ್ವಾಸದ ವರ್ಷದ ಪ್ರಯುಕ್ತ ಧರ್ಮಕ್ಷೇತ್ರದ ಗುರುಗಳಿಗೆ ಕಾರ್ಯಾಗಾರ, ಸಂತ ಜೋಸೆಫರ ಗುರುಮಂದಿರ, ಚಿಕ್ಕಮಗಳೂರು. |
| 21-11-2012 | ಬುಧವಾರ | ಬೆಳಿಗ್ಗೆ10ಕ್ಕೆ | ಸೆನೆಟ್ ಗುರುಗಳ ಸಭೆ, ಜ್ಯೋತಿ ನಿಲಯ, ಚಿಕ್ಕಮಗಳೂರು. |
| 22-11-2012 | ಗುರುವಾರ | | ಪ್ರಾಂತೀಯ ಬೈಬಲ್ ಹಾಗೂ ಧರ್ಮೋಪದೇಶ ಆಯೋಗದ ಸಭೆ, ಕ್ರಾಸ್, ಬೆಂಗಳೂರು |
| 25-11-2012 | ಭಾನುವಾರ, | ಸಂಜೆ 5ಕ್ಕೆ | ವಾರ್ಷಿಕೋತ್ಸವ, ದಿವ್ಯಬಲಿಪೂಜೆ, ಕ್ರಿಸ್ತೆ ರಾಜರ ದೇವಾಲಯ, ಜ್ಯೋತಿನಗರ, |
| 27-11-2012 30-11-2012 | ರಿಂದ ರವರೆಗೆ | | ಅಖಿಲ ಭಾರತೀಯ ಬೈಬಲ್ ಕಾರ್ಯಾಗಾರ, ಪ್ರಾಂತೀಯ ಆಯೋಗದ ಅಧ್ಯಕ್ಷರುಗಳಿಗೆ, ಪ್ರಬೋಧನಾ, ಮೈಸೂರು |



# ಸುವರ್ಣ ಸಂವತ್ಸರದ ಸಂಭ್ರಮದಲ್ಲಿ...




"ನೀನು ನಿನ್ನ ಮನೆಗೂ ನಿನ್ನ ಸ್ವಜನರ ಬಳಿಗೂ ಹೋಗು. ಸರ್ವೇಶ್ವರ ನಿನಗೆ ಎಂಥಾ ಉಪಕಾರ ಮಾಡಿದ್ದಾರೆ, ಎಷ್ಟು ಕರುಣೆ ತೋರಿಸಿದ್ದಾರೆ ಎಂದು ಅವರಿಗೆ ವಿವರಿಸು'' (ಮಾರ್ಕ 5:19) ಗಲಿಲೇಯ ಸರೋವರದಾಚೆಗಿದ್ದ ಗೆರಸೇನರ ಪ್ರಾಂತ್ಯದ ದೆವ್ವ ಪೀಡಿತನನ್ನು ಯೇಸು ಗುಣಪಡಿಸಿದ ನಂತರ ಯೇಸು ಬಿಡುಗಡೆ ಹೊಂದಿದ ವ್ಯಕ್ತಿಗೆ ನೀಡುವ ಆದೇಶವಿದು. "ಸ್ವಾಮಿ ನನ್ನನ್ನು ನಿಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ'' ಎಂದು ಬಿನ್ನವಿಸಿಕೊಂಡಾಗ ಯೇಸು ಆತ ಮಾಡಬೇಕಾದ ಎಲ್ಲಕ್ಕೂ ಮಿಗಿಲಾದ ಮಹತ್ಕಾರ್ಯದ ಬಗ್ಗೆ, ಜವಬ್ದಾರಿಯ ಬಗ್ಗೆ, ಋಣ ಬದ್ಧತೆಯ ಬಗ್ಗೆ ತಿಳಿಸಿಕೊಡುವ ಮಾತುಗಳಿವು. ಸಂತೋಷದ ಸಂದೇಶದೊಂದಿಗೆ ಸಂಭ್ರಮಿಸಲು, ಸಂತೃಪ್ತರಾಗಲು, ಸ್ತುತಿಸಲು ಹಾಗೂ ಸಾರಲು ಯೇಸು ನೀಡಿದ ಕರೆಯಿದು. ಇದುವೆ ದೆವ್ವ ಪೀಡಿತನ ಬದುಕಿಗೆ ಜ್ಯೂಬಿಲಿ ಸಂವತ್ಸರದ ಸಂಭ್ರಮವಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು.

ಯೇಸು ದೆವ್ವ ಪೀಡಿತನಿಗೆ ನುಡಿದ ಮಾತುಗಳನ್ನು ನಾವು ಹೀಗೆಂದು ಅರ್ಥೈಸಿಕೊಳ್ಳಬಹುದು. ದೇವರು ನಿನಗೆ ಎಂಥಾ ಉಪಕಾರ ಮಾಡಿದ್ದಾರೆ, ಎಷ್ಟು ಕರುಣೆ ತೋರಿಸಿದ್ದಾರೆ ಎಂಬುದು ಮೊದಲು ನಿನ್ನ ಮನೆಗೆ , ಮನೆಯವರಿಗೆ ಗೊತ್ತಾಗಲಿ. ನಿನ್ನನ್ನು ಅತೀ ಹತ್ತಿರದಿಂದ ಗಮನಿಸುವ ನಿನ್ನೊಂದಿಗೇ ಜೀವಿಸುವ ವ್ಯಕ್ತಿಗಳಿಗೆ ಮೊದಲು ತಿಳಿಯಲಿ. ಏಕೆಂದರೆ ನೀನು ಎಂಥಾ ದುಷ್ಟ ಶಕ್ತಿಯ. ಬಂಧನದಲ್ಲಿದ್ದೆ, ಎಂಥಾ ದುಸ್ಥಿತಿಯಲ್ಲಿದೆ ಎಂದು ಅತೀ ಹೆಚ್ಚಾಗಿ ಅವರು ತಿಳಿದಿದ್ದರು. ಇದು ಅವರಿಗೆ ದುಃಖದ, ಬೇಸರದ ಕೆಲವೊಮ್ಮೆ ಅತೀ ಭಾರವಾದ ವಿಚಾರವಾಗಿದ್ದಿರಬಹುದು. ಆದರೆ ದೇವರು ಈಗ ಎಂಥಾ ಸೌಭಾಗ್ಯಕ್ಕೆ ನಿನ್ನನ್ನು ಮುನ್ನಡೆಸಿದ್ದಾರೆ. ಬಿಡುಗಡೆ, ಆನಂದ ವನ್ನು ಅನುಗ್ರಹಿಸಿದ್ದಾರೆ ಎಂಬುದನ್ನು ಮೊದಲು ಅವರು ಕಾಣುವಂತಾಗಲಿ. ಹೊರಗಿನವರಿಗಿಂತ ಮೊದಲು ನಿನ್ನವರು, ನಿನ್ನ ಒಳಗಿನವರು, ನಿನ್ನೊಂದಿಗಿರುವವರು ಅರಿಯುವಂತಾಗಲಿ ನಿನ್ನೊಂದಿಗೆ ಅವರು, ಅವರೊಂದಿಗೆ ನೀನು ಸಂತೋಷಿಸಿ, ಸಂಭ್ರಮಿಸುವಂತಾಗಲಿ, ಸಂತೃಪ್ತನಾಗಿ ಅವರಿಗೆ, ಅವರ ಮೂಲಕ ಇತರರಿಗೆ ಇವನ್ನು ಸಾರುವಂತಾಗಲಿ. ದೇವರನ್ನು ಹೊಗಳಿ, ಕೊಂಡಾಡಿ, ಸ್ತುತಿಸಿ ಉಪಾಕ ಸ್ಮರಣೆ ಮಾಡುವಂತಾಗಲಿ. ಇದಲ್ಲವೆ ಮೊದಲು ಮಾಡ ಬೇಕಾದ ಕಾರ್ಯ?

ಅಂತೆಯೇ ದೇವರ ಎಂಥಾ ಉಪಕಾರ ಮಾಡಿ ಕರುಣೆ ತೋರಿದ್ದಾರೆ ಎಂಬುದು ಮೊದಲು ನಿನ್ನ ಸ್ವಜನರಿಗೂ ಗೊತ್ತಾಗಲಿ ನೀನು ನಿನ್ನ ಸ್ವಗೃಹ, ಸ್ವಗ್ರಾಮ, ಸ್ವಂತ ಜನರು, ಬಂಧು ಬಳಗ ಮೊದಲಾದವರ ಬಳಿಗೆ ಹೋಗು. ಅವರಿಗೂ ಈ ಸಂತೋಷ ವಿಚಾರ ತಿಳಿಯಲಿ. ಸಂಭ್ರಮದ ಕ್ಷಣಗಳಲ್ಲಿ ಅವರೂ ಭಾಗಿಯಾಗಲಿ. ಸರ್ವರಿಗೂ ಸಂತೃಪ್ತಿಯಾಗಲಿ. ಸ್ವಜನರೊಂದಿಗೆ ಸೇರಿ ಸರ್ವೇಶ್ವರ ದೇವರನ್ನು ಸ್ತುತಿಸುವಂತಾಗಲಿ. ನಿನಗೆ ಮಾಡಿದ್ದು ನಿಮ್ಮವರೆಲ್ಲರಿಗೂ ಸಾರಲ್ಪಡಲಿ, ನಿನ್ನವರೊಂದಿಗೆ ದೇವರಿಗೆ ಉಪಕಾರ ಸ್ಮರಣೆ ಮಾಡುವಂತಾಗಲಿ. ನಿನ್ನನ್ನು ಅಪಾರವಾಗಿ ಪ್ರೀತಿಸುವ ಅಥವಾ ನಿನ್ನ ದುಸ್ಥಿತಿಯಲ್ಲಿ ನಿನ್ನನ್ನು ಅಪಾರವಾಗಿ ದ್ವೇಷಿಸುತ್ತಿದ್ದ ನಿನ್ನವರಿಗೆ ದೇವರು ತೋರಿದ ಕರುಣೆ ಕಣ್ಣಿಗೆ ಕಟ್ಟಿದಂತಾಗಲಿ. ಇದಲ್ಲದೆ ನೀನು ಮಾಡಬೇಕಾದ ಶೇಷ ಕಾರ್ಯ ? ಇದನ್ನೆ ಆ ದೆವ್ವ ಪೀಡಿತ ವ್ಯಕ್ತಿ ದೆಕಪೋಲಿ ನಾಡಿನಲ್ಲೆಲ್ಲಾ ಪ್ರಕಟಿಸುತ್ತಾನೆ.

ಹೌದು ದೇವರು ನಮಗೆಲ್ಲರಿಗೆ ನೀಡಿದ ಸಂತೋಷದ ಸಂದೇಶಕ್ಕಾಗಿ ಸಂಭ್ರಮ ಸಡಗರಕ್ಕಾಗಿ, ಸಂತೃಪ್ತಿ ಸಮಾಧಾನಕ್ಕಾಗಿ ನಾವು ಸದಾಕಾಲ ದೇವರನ್ನು ಸ್ತುತಿಸಿ ಕೊಂಡಾಡಿ, ಅವರ ನಾಮ ಸ್ಮರಣೆ, ಉಪಕಾರ ಸ್ಮರಣೆ ಮಾಡಿದಾಗ, ಈ ಸಂತೋಷದ ಕ್ಷಣಗಳನ್ನು ಇತರರಿಗೆ ಸಾರಿ, ಹಂಚಿಕೊಂಡು, ಸಂತಸಪಟ್ಟಾಗ ಇದುವೆ ನಿಜವಾದ ಜ್ಯೂಬಿಲಿಯಲ್ಲವೇ ? ಹೌದು ನಮ್ಮ ಚಿಕ್ಕಮಗಳೂರು ಧರ್ಮಕ್ಷೇತ್ರ ಈ ವಿಶ್ವಾಸದ ವರ್ಷದಲ್ಲಿ ತನ್ನ ಅಸ್ತಿತ್ವದ 50ನೇ ವರ್ಷಕ್ಕೆ ಕಾಲಿಡುತ್ತಿರುವಾಗ, ತನ್ನ ಸುವರ್ಣ ಸಂವತ್ಸರದ ಸಂಭ್ರಮದಲ್ಲಿರುವಾಗ ನಾವೆಲ್ಲರು ಮಾಡಬೇಕಾದ ಕಾರ್ಯವಿದು. ದೇವರು ನಮಗೆ ನೀಡುತ್ತಿರುವ ಕರೆಯಿದು. ಕರ್ನಾಟಕದಾದ್ಯಂತ ಭಕ್ತಿ ವಿಶ್ವಾಸಕ್ಕೆ, ಆತ್ಮಿಕ ಆಚರಣೆಗಳಿಗೆ ಪಾಲನಾ ಕಾರ್ಯಗಳಿಗೆ ಹೆಸರುವಾಸಿಯಾಗಿರುವ ನಿನ್ನ ಧರ್ಮಕ್ಷೇತ್ರದ ಈ ಸಂಭ್ರಮವನ್ನು ನಿನ್ನವರೊಂದಿಗೆ ಆಚರಿಸು. ನಿನ್ನ ಧರ್ಮಕ್ಷೇತ್ರದಲ್ಲಿ ನಿನ್ನ ಧರ್ಮಕೇಂದ್ರದಲ್ಲಿ, ಕುಟುಂಬದಲ್ಲಿ, ನಿನ್ನ ಧರ್ಮಾಧ್ಯಕ್ಷರೊಂದಿಗೆ, ಗುರು - ಕನ್ಯಾ ಸ್ತ್ರೀ, ಭಕ್ತಾಧಿಗಳೊಂದಿಗೆ ನಿನ್ನ ಸ್ವಗ್ರಾಮದಲ್ಲಿ, ಸ್ವಜನರಲ್ಲಿ ನಿನ್ನ ಸಹೋದರ, ಸಹೋದರಿಯರೊಂದಿಗೆ ಈ ಸಂತೋಷದ ಸಂದೇಶವನ್ನು ಹಂಚಿಕೋ. ನಿನಗೆ ದೇವರು ಎಂಥಾ ವಿಶ್ವಾಸ ನೀಡಿದ್ದಾರೆ, ಉಪಕಾರ ಮಾಡಿದ್ದಾರೆ, ಕರುಣೆ ತೋರಿಸಿದ್ದಾರೆ ಎಂಬುದನ್ನು ಹೊರಗಿನವರಿಗಿಂತ ಮೊದಲು ಈ ನಿನ್ನ ಜನತೆಯೊಂದಿಗೆ, ನಿನ್ನವರೊಂದಿಗೆ ಪ್ರಕಟಿಸು. ಈ ವರುಷಕ್ಕಾಗಿ, ದಿನ ಕ್ಷಣಕ್ಕಾಗಿ ಸಂತೋಷಿಸು, ಸಂಭ್ರಮಿಸು, ಇದಕ್ಕಾಗಿ ತುಂಬು ಹೃದಯದಿಂದ ಮನಪೂರ್ವಕವಾಗಿ ಸ್ತುತಿಸು. ಇದನ್ನೆ ಸಡಗರದಿಂದ ಸರ್ವರಿಗೂ ಸಾರು, ಪ್ರಭು ಕ್ರಿಸ್ತರ ಕರೆಯಿದು. ಕೃತಜ್ಞತೆಯೊಂದಿಗೆ ಕಾರ್ಯ ಪ್ರವರ್ತನಾಗು. ಸುವರ್ಣ ಸಂವತ್ಸರದ ಸಂಭ್ರಮದಲ್ಲಿ ಇದಲ್ಲವೇ ನಿಜವಾದ ಜ್ಯೂಬಿಲಿ ಕಾರ್ಯ ?

**- ವಂ. ಡೇವಿಡ್ ಪ್ರಕಾಶ್, ಚಿಕ್ಕಮಗಳೂರು.**



ಇಂದ್ರಿಯಗಳ ಸೇನೆಗೆ ಮನಸ್ಸೇ ನಾಯಕ, ಆದ್ದರಿಂದ ಮನಸ್ಸನ್ನು ಜಯಸಿದ್ದಲ್ಲಿ ಅದು ನಿಜವಾದ ವಿಜಯ

# ವಿಶ್ವಾಸದ ವರ್ಷ-ಏನು? ಯಾಕೆ? ಯಾವಾಗ ? ಹೇಗೆ ?

ಜಗದ್ಗುರು ಹದಿನಾರನೇ ಬೆನೆಡಿಕ್ಟ್ ಅಕ್ಟೋಬರ್ 11, 2012-ನವೆಂಬರ್ 24, 2013ರ ಅವಧಿಯನ್ನು ''ವಿಶ್ವಾಸದ ವರ್ಷವೆಂದು ಘೋಷಿರುವಾಗ ಧರ್ಮಸಭೆಯಲ್ಲಿ ಇನ್ನೊಂದು ವಿಶೇಷ ಏಕೆ ಎಂಬ ಪ್ರಶ್ನೆ ಅನೇಕ ಜನರನ್ನು ಕಾಡುತ್ತಿದೆ. ಹಿಂದಿನ ದಶಕದಲ್ಲಿ ನಾಲ್ಕು ವಿಶೇಷ ಸಂವತ್ಸರಗಳನ್ನು ಧರ್ಮಸಭೆ ಆಚರಿಸಿತು. ಅವು ಯಾವುವೆಂದರೆ : ಜಪಮಾಲೆಯ ವರ್ಷ (ಅಕ್ಟೋಬರ್ 2002 ರಿಂದ ಆಕ್ಟೋಬರ್ 2003), ಪರಮಪ್ರಸಾದ ದ ವರ್ಷ (ಅಕ್ಟೋಬರ್ 2004 ರಿಂದ ಅಕ್ಟೋಬರ್ 2005, ಸಂತ ಪೌಲರ ವರ್ಷ (28 ಜೂನ್ 2008 ರಿಂದ 29 ಜೂನ್ 2009) ಮತ್ತು ಯಾಜಕರ ವರ್ಷ (19 ಜೂನ್ 2009 ರಿಂದ 11 ಜೂನ್ 2010). ಈ ಎಲ್ಲಾ ವಾರ್ಷಿಕಗಳು ಭಾರತದ ಧರ್ಮ ಸಭೆಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದರೂ ಪರಮಪ್ರಸಾದದ ವರ್ಷ ಮಾತ್ರ ನಿರಿಕ್ಷಿಸಿದಷ್ಟು ಪರಿಣಾಮ ಕಾರಿಯಾಗಲಿಲ್ಲ. ಭಾರತದ ಬಹುಭಾಗಗಳಲ್ಲಿ ಈ ವರ್ಷ ಕೇವಲ ಪರಮಪ್ರಸಾದ ಆರಾಧನೆಗೆ ಸೀಮಿತವಾಗಿ ಈ ವರ್ಷದ ಆದ್ಯ ಗುರಿಯನ್ನು ಸೇರುವಲ್ಲಿ ವಿಫಲವಾಯಿತು. ಆದುದರಿಂದ ವಿಶ್ವಾಸದ ವರ್ಷವನ್ನು ಆರಂಭಿಸಿರುವಂತೆಯೇ ಪವಿತ್ರ ಪೀಠ ದ ಮಾರ್ಗದರ್ಶನವನ್ನು ಗಮನಿಸಿ ಅದರ ಗುರಿ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ನಾವು ಮಾಡಬೇಕಾದಿದೆ. ಹೀಗಾದರೆ ಮಾತ್ರ ನಾವು ಸಂಪೂರ್ಣವಾಗಿ ಈ ವರ್ಷದ ಫಲಗಳನ್ನು ಗಳಿಸಲು ಸಾಧ್ಯವಾಗುತ್ತದೆ. ಈ ಸಂವತ್ಸರ ಕೇವಲ ವಿಶ್ವಾಸದೊಂದಿಗೆ ಮಾತ್ರವಲ್ಲ, ಜೊತೆಗೆ ದ್ವಿತೀಯ ವ್ಯಾಟಿಕನ್ ಸಮ್ಮೇಳನ, ಕಥೋಲಿಕ ಧರ್ಮಸಭೆಯ ಧರ್ಮೋಪದೇಶ, ನವ ಶುಭಸಂದೇಶಪ್ರಸಾರ, ಪ್ರೇಷಿತ ಪರಿಪತ್ರ "ವಿಶ್ವಾಸದ ದ್ವಾರ'' ಮತ್ತು ಧರ್ಮಾಧ್ಯಕ್ಷರುಗಳ 13ನೇ ಸಿನೋಡ್ ಸಭೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಆದ್ದರಿಂದ 'ವಿಶ್ವಾಸದ ವರ್ಷ'ದ ಸ್ಪಷ್ಟ ಚಿತ್ರಣ ನಮಗೆ ಸಿಗಬೇಕಾದರೆ ಈ ಮೇಲಿನ ವಿಷಯಗಳ ಬಗ್ಗೆ ನಿರೂಪಣೆ ಅಗತ್ಯ.

**1. "ವಿಶ್ವಾಸದ ವರ್ಷ" ಎಂದರೇನು ?**

ಧರ್ಮಸಭೆಯ ಚರಿತ್ರೆಯಲ್ಲಿ ಕೆಲವು ಸಂದರ್ಭಗಳಲ್ಲಿ ಜಗದ್ಗುರುಗಳು ತಾವು ಬೋಧಿಸುತ್ತಿರುವ ವಿಶ್ವಾಸದ ಕೆಲವು ನಿರ್ದಿಷ್ಟ ಅಂಶಗಳಲ್ಲಿ ನಂಬಿಕೆಯನ್ನು ಕೇಂದ್ರೀಕರಿಸಲು ಭಕ್ತವಿಶ್ವಾಸಿಗಳಿಗೆ ಕರೆಯನ್ನೀಯುತ್ತಾ ಬಂದಿದ್ದಾರೆ. 1967ರಲ್ಲಿ ಜಗದ್ಗುರು ಆರನೇ ಪೌಲರು ಧರ್ಮಬಲಿಗಳಾದ ಸಂತ ಪೇತ್ರ ಮತ್ತು ಪೌಲರ ತ್ಯಾಗದ 19ನೇ ಶತಮಾನವನ್ನು ಸ್ಮರಿಸುತ್ತಾ ವಿಶ್ವಾಸದ ವರ್ಷವನ್ನು ಸಾರಿದರು. ಈ ಸಂದರ್ಭದಲ್ಲಿ ಈ ಇಬ್ಬರು ಹುತಾತ್ಮರ ಅಪ್ರತಿಮ ಸಾಕ್ಷ್ಯವನ್ನು ಮುಂದಿಟ್ಟು ಅವರ ನಿಸ್ವಾರ್ಥ ತ್ಯಾಗಕ್ಕೆ ಒತ್ತು ಕೊಟ್ಟರು. ಈ ಬಲಿದಾನದ ನಿದರ್ಶನ ವೈಯುಕ್ತಿಕವಾಗಿ ಮತ್ತು ಸಾಮೂಹಿಕವಾಗಿ ವಿಶ್ವಾಸವನ್ನು ನಿವೇದಿಸಲು ಧರ್ಮಸಭೆಗೆ ವೇದಿಕೆಯನ್ನು ಕಲ್ಪಿಸಿಕೊಟ್ಟಿತು.

ಪ್ರಸ್ತುತ ''ವಿಶ್ವಾಸದ ವರ್ಷ''ವನ್ನು ಜಗದ್ಗುರುಗಳು ಅಧಿಕೃತವಾಗಿ ತಮ್ಮ ಪ್ರೇಷಿತ ಪತ್ರ ''ವಿಶ್ವಾಸದ ದ್ವಾರ''ವನ್ನು 11 ಅಕ್ಟೋಬರ್ 2011ರಂದು ಬಿಡುಗಡೆ ಮಾಡುವುದರ ಮೂಖಾಂತರ ಸಾರಿದರು. ಈ ವಿಶ್ವಾಸದ ವರ್ಷದ ಮೂಲ ಉದ್ದೇಶ : ಮೂರನೆಯ ಸಹಸ್ರಮಾನದಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ವಿಶ್ವಾಸವನ್ನು ಪುನಃ ಅವಲೋಕಿಸುವುದು ಮತ್ತು ಪುನರೀಕರಿಸುವುದು, ಜೊತೆಗೆ ತನ್ನ ವಿಶ್ವಾಸವನ್ನು ನವೀಕೃತ ವಿಧಾನದಲ್ಲಿ (ಹೊಸ ಸುವಾರ್ತಾ ಪ್ರಸಾರ) ಸಾರುವುದು. ಆಧುನಿಕ ವಿಶ್ವದಲ್ಲಿ ವಿಶ್ವಾಸದ ಬಗ್ಗೆ ಬಿಕ್ಕಟ್ಟು ಏರ್ಪಟ್ಟಿದೆ. ವಿಶ್ವಾಸದ ವರ್ಷ ಕಥೋಲಿಕರಿಗೆ ಮನಪರಿವರ್ತನೆಯ ಅನುಭವವನ್ನು ಪಡೆಯಲು, ಅಂದರೆ ಪ್ರಭು ಕ್ರಿಸ್ತರಿಗೆ ಅಭಿಮುಖರಾಗಿ ಅವರೊಡನೆ ಗಾಢ ವಾದ ಸಂಬಂಧವನ್ನು ಹೊಂದಲು ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಜಗದ್ಗುರುಗಳು ಈ ಪ್ರಕ್ರಿಯೆಯನ್ನು ''ವಿಶ್ವಾಸದ ದ್ವಾರ''ವನ್ನು ತೆರೆಯುವುದು ಎಂದು ವಿವರಿಸಿದ್ದಾರೆ (ಪ್ರೇ.ಕಾ. 14:27). ಪ್ರತಿಯೋರ್ವನ ದೀಕ್ಷಾಸ್ನಾನದ ಸಂದರ್ಭದಲ್ಲಿ ಈ "ವಿಶ್ವಾಸದ ದ್ವಾರ'' ವನ್ನು ತೆರೆಯಲಾಗಿದೆ. ಆದರೆ ಪ್ರಸ್ತುತ ವಿಶ್ವಾಸದ ವರ್ಷದಲ್ಲಿ ಕಥೋಲಿಕರು ಪುನಃ ಅದನ್ನು ತೆರೆಯಲು, ಅದರಲ್ಲಿ ನಡೆಯಲು, ಕ್ರಿಸ್ತರೊಂದಿಗೆ ಮತ್ತು ಧರ್ಮಸಭೆಯೊಂದಿಗೆ ಇರುವ ಸಂಬಂಧವನ್ನು ಪುನಃ ನವೀಕರಿಸಲು ಕರೆ ನೀಡಲಾಗಿದೆ.

**2. ಈ ವರ್ಷದಲ್ಲೇ ಏಕೆ ವಿಶ್ವಾಸದ ವರ್ಷದ ಆಚರಣೆ ?**

ತಮ್ಮ ಪ್ರೇಷಿತ ಪರಿಪತ್ರ ''ವಿಶ್ವಾಸದ ದ್ವಾರ''ದಲ್ಲಿ ಜಗದ್ಗುರುಗಳು ವಿಶ್ವಾಸದ ವರ್ಷವು ಅಕ್ಟೋಬರ್ 1, 2012 ರಂದು ಪ್ರಾರಂಭಗೊಂಡು ಅಖಿಲ ವಿಶ್ವದ ಅರಸ ನಮ್ಮ ಪ್ರಭು ಯೇಸುಕ್ರಿಸ್ತರ ಮಹೋತ್ಸವ, ನವೆಂಬರ್ 24, 2013 ರಂದು ಸಮಾಪ್ತಿಗೊಳ್ಳುತ್ತದೆ ಯೆಂದು ಸಾರಿದ್ದಾರೆ. ಅಕ್ಟೋಬರ್ 11 - ಒಂದು ವಿಶಿಷ್ಟ ದಿನ. 50 ವರ್ಷದ ಹಿಂದೆ ಆ ದಿನದಂದು ದ್ವಿತೀಯ ವ್ಯಾಟಿಕನ್ ಸಮ್ಮೇಳನ ಉದ್ಘಾಟನೆಯಾಯಿತು. 20 ವರ್ಷಗಳ ಹಿಂದೆ ಆ ದಿನದಂದೇ ಕಥೋಲಿಕ ಧರ್ಮಸಭೆಯ ಧರ್ಮೋಪದೇಶ ಗ್ರಂಥದ ಬಿಡುಗಡೆಯಾಯಿತು. ವಿಶ್ವಾಸದ ವರ್ಷದ ಅವಧಿಯಲ್ಲಿ ಕಥೋಲಿಕ ಕ್ರೈಸ್ತರು ದ್ವಿತೀಯ ವ್ಯಾಟಿಕನ್ ಸಮ್ಮೇಳನದ ಪತ್ರಗಳನ್ನು ಮತ್ತು ಕಥೋಲಿಕ ಧರ್ಮಸಭೆಯ ಧರ್ಮೋಪದೇಶವನ್ನು ಅಧ್ಯಯನ ಮಾಡಲೂ, ಧ್ಯಾನಿಸಲೂ, ಹೀಗೆ ಅವರು ತಮ್ಮ ವಿಶ್ವಾಸವನ್ನು ಬಲಪಡಿಸಲು ಆದೇಶಿಸಲಾಗಿದೆ. ಜಗದ್ಗುರುಗಳು ಈ ವರ್ಷವನ್ನು ನಿಯೋಜಿಸಿದ ಉದ್ದೇಶ : ದ್ವಿತೀಯ ವ್ಯಾಟಿಕನ್ ಮತ್ತು ಕಥೋಲಿಕ ಧರ್ಮಸಭೆಯ ಧರ್ಮೋಪದೇಶದ ಆಧಾರದ ಮೇಲೆ ಕಥೋಲಿಕರು ಕ್ರೈಸ್ತ ಬಾಳ್ವೆಯಲ್ಲಿ ಸಮರ್ಪಣಾ ಭಾವವನ್ನು ಪುನಃ ಕಂಡುಕೊಳ್ಳುವುದಾಗಿದೆ.

**3. ವಿಶ್ವಾಸವೆಂದರೆ ಏನು ?**

ವಿಶ್ವಾಸದ ಬಗ್ಗೆ ಅತ್ಯುತ್ತಮ ವ್ಯಾಖ್ಯೆಯನ್ನು ನಾವು ಬೈಬಲ್ ಗ್ರಂಥದಲ್ಲಿ ಕಾಣಬಹುದು. ಇಬ್ರಿಯ 4:1 ಹೀಗೆನ್ನುತ್ತದೆ : "ವಿಶ್ವಾಸವೆಂಬುದು ನಾವು ನಿರೀಕ್ಷಿಸುವಂಥವುಗಳು ನಮಗೆ ದೊರಕುತ್ತವೆ ಎಂಬ ದೃಢ ನಂಬಿಕೆ ಹಾಗೂ ಕಣ್ಣಿಗೆ ಕಾಣದಂಥವುಗಳು ನಿಶ್ಚಯವಾದವು ಎಂಬ ನಿಲುವು ಆಗಿದೆ''. ದೀಕ್ಷಾಸ್ನಾನದೊಂದಿಗೆ ಪ್ರಾರಂಭವಾದ ಈ ವಿಶ್ವಾಸ ನಮ್ಮ ಜೀವನದ ಸಂಗಾತಿಯಾಗಿದೆ, ದೇವರ ಕೊಡುಗೆಯಾಗಿದೆ ಹಾಗೂ ವೈಯಕ್ತಿಕ ಮತ್ತು ಸಾಮೂಹಿಕ ಕ್ರಿಯೆಯಾಗಿದೆ. ದ್ವಿತೀಯ ವ್ಯಾಟಿಕನ್ ಹೀಗೆನ್ನುತ್ತದೆ; ''ವಿಶ್ವಾಸವು ಜೀವಂತ, ಪ್ರಜ್ಞಾಪೂರ್ವಕ ಮತ್ತು ಕ್ರಿಯಾತ್ಮಕವಾದುದು''. ಸಂಕ್ಷಿಪ್ತವಾಗಿ ಹೇಳುವುದಾದರೆ ಕ್ರಿಸ್ತರೆಂತೆ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ತನ್ನನ್ನೇ ಕಾಯಾ-ವಾಚಾ-ಮನಸಾ ತೊಡಗಿಸಿಕೊಳ್ಳುವುದು,

[illegible]

(ಅಕ್ಟೋಬರ್ 7 ರಿಂದ 28, 2012)

[illegible]

7. [illegible]

[illegible] 1979 [illegible] 1983 [illegible] (Redemptoris Missio) [illegible] (1991). [illegible]

8. [illegible]

[illegible]

6. [illegible] 50 [illegible] 1965 [illegible] 11) [illegible]

4. [illegible]

5. [illegible]

[illegible]

ಎದುರಿಸುತ್ತಿದ್ದಾರೆ. ಇಂಥವರಿಗೆ ಶುಭಸಂದೇಶವನ್ನು ಸ್ವೀಕರಿಸಿದ್ದರೂ ತಮ್ಮ ವಿಶ್ವಾಸದಲ್ಲಿ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಇಂಥವರಿಗೆ ಶುಭಸಂದೇಶವನ್ನು ಪುನಃ ಪ್ರಸ್ತಾಪಮಾಡುವ ಅಗತ್ಯವಿದೆ. ಜಗದ್ಗುರು ಬೆನೆಡಿಕ್ಟರು ಶುಭಸಂದೇಶದ ಪುನಃ ಪ್ರಸ್ತಾಪದ ಬಗ್ಗೆ ಹೀಗೆಂದಿದ್ದರು: "ಅನೇಕ ಪ್ರದೇಶಗಳು ಆತುರಕಾತುರಗಳಿಂದ ಶುಭಸಂದೇಶವನ್ನು ಎದುರುನೋಡುತ್ತಿದ್ದರೆ, ಕೆಲವು ಪ್ರದೇಶಗಳಲ್ಲಿ ಕ್ರೈಸ್ತತ್ವ ಆಳವಾದ ಬೇರುಗಳನ್ನು ಹೊಂದಿದ್ದರೂ ಪ್ರಸ್ತುತ ಲೌಕಿಕತೆಯ ದೆಸೆಯಿಂದ ಅವರಲ್ಲಿ ವಿಶ್ವಾಸದ ಗೊಂದಲ ಏರ್ಪಟ್ಟಿದೆ.

ಹೊಸ ಸುವಾರ್ತಾ ಪ್ರಸಾರವನ್ನು ವಿಳಂಬ ಮಾಡದೆ ತಕ್ಷಣ ಕೈಗೊಳ್ಳಬೇಕಾದ ಅನಿವಾರ್ಯತೆಯಿದೆ. ಕಾರಣ ಇಂದಿನ ಸಾಂಸ್ಕೃತಿಕ ಮಾರ್ಪಾಟು ವ್ಯಕ್ತಿಯ ವಿಶ್ವಾಸದ ಮೇಲೆ ಅಪಾರ ದುಷ್ಪರಿಣಾಮವನ್ನು ಬೀರಿದೆ. ಹಿಂದೆ ಅನುವಂಶೀಯವಾಗಿ ಕುಟುಂಬದ ಪರಿಸರದಲ್ಲಿ ಧಾರ್ಮಿಕ ಆಚರಣೆಗಳ ಮುಖಾಂತರ ವಿಶ್ವಾಸವು ಬೆಳೆಯುತ್ತಿತ್ತು ಮತ್ತು ಸಫಲವಾಗುತ್ತಿತ್ತು. ಆದುದರಿಂದ ಇಂದಿನ ಹೊಸ ಸಂಪರ್ಕ ಮಾಧ್ಯಮಗಳ ಮೂಲಕ ಅದನ್ನು ನವೀಕರಿಸು ವುದು ಅಗತ್ಯವಾಗಿದೆ.

**9. ವಿಶ್ವಾಸದ ವರ್ಷ ಮತ್ತು ಹೊಸ ಸುವಾರ್ತಾ ಪ್ರಸಾರಕ್ಕಿರುವ ಸಂಬಂಧವೇನು?**
ಹಂಚಿಕೊಳ್ಳುವುದರ ಮುಖಾಂತರ ವಿಶ್ವಾಸವು ಬಲಗೊಳ್ಳುತ್ತದೆ. ನಮ್ಮ ಮುಂದಿರುವ ಸಿನೋಡ್ ಸಭೆಯ ನಂತರದ ಸಂವತ್ಸರವನ್ನು ಜಗದ್ಗುರುಗಳು ಸೂಕ್ತವಾಗಿ "ವಿಶ್ವಾಸದ ವರ್ಷ"ವೆಂದು ಹೆಸರಿಸಿದ್ದಾರೆ. ಈ ಅವಧಿಯಲ್ಲಿ ನಾವು ಸಮರ್ಪಣಾಭಾವದಿಂದ ಕ್ರೈಸ್ತ ವಿಶ್ವಾಸ ವನ್ನು ಪ್ರಕಟಿಸಲು ಸರ್ವ ಪ್ರಯತ್ನ ಮಾಡಬೇಕು. ಹೊಸ ಸುವಾರ್ತಾಪ್ರಸಾರ ಎಲ್ಲಾ ಕ್ರೈಸ್ತರಿಗೆ ಕೊಟ್ಟ ಕರೆಯಾಗಿದೆ. ನಮ್ಮ ವಿಶ್ವಾಸವನ್ನು ನಾವು ಬಲಪಡಿಸಿಕೊಳ್ಳಬೇಕು, ಶುಭಸಂದೇಶದಲ್ಲಿ ವಿಶ್ವಾಸವಿಡಬೇಕು, ಅದನ್ನು ನವಚೇತನದಿಂದ ಹೊಸ ವಿಧಾನಗಳನ್ನು ಅಳವಡಿಸಿಕೊಂಡು ಹೊಸ ಭಾಷೆಯಲ್ಲಿ ಪ್ರಕಟಗೊಳ್ಳಬೇಕು. ಎಲ್ಲಾ ಭಕ್ತರು ಅದನ್ನು ಪರರಿಗೆ ಕೊಡುವ ಕರ್ತವ್ಯವನ್ನು ಹೊಂದಿದ್ದಾರೆ. ವಿಶ್ವಾಸದ ವರ್ಷ ನವ ಸುವಾರ್ತಾಪ್ರಸಾರದಂತೆ ಕಥೋಲಿಕರಿಗೆ ಮನಪರಿವರ್ತನೆಗೆ ಆಹ್ವಾನವನ್ನು ಕೊಡುವುದರ ಜೊತೆಗೆ ಕ್ರಿಸ್ತರೊಂದಿಗೆ ನಮ್ಮ ಬಾಂಧವ್ಯವನ್ನು ಭದ್ರಪಡಿಸಿಕೊಳ್ಳಲು ನಿರ್ದೇಶಿಸುತ್ತದೆ. ಇಂದಿನ ಸಾಮಾಜಿಕ-ಪ್ರಸಾರ ಮಾಧ್ಯಮ-ಸಾಂಸ್ಕೃತಿಕ ಮತ್ತು ಧಾರ್ಮಿಕ ಆಯಾಮದಲ್ಲಿ ಈ ಪ್ರಕ್ರಿಯೆ ಕ್ರಿಯಾತ್ಮಕವಾಗಬೇಕು.

**10.ಅಕ್ಟೋಬರ್ 11ರ ವಿಶೇಷತೆ ಏನು?**

ಅಕ್ಟೋಬರ್ 11ನೇ ದಿನಾಂಕದಂದು ವಿಶ್ವಾಸದ ವರ್ಷವು ಅನಾವರಣಗೊಳ್ಳುವುದರ ಬಗ್ಗೆ ಕೆಲವರು ಆಶ್ಚರ್ಯಪಡಬಹುದು. ಆ ದಿನದಲ್ಲಿ ಯಾವ ಸಂತ ಭಕ್ತರ ಹಬ್ಬವಿಲ್ಲ. ಕಥೋಲಿಕ ಧರ್ಮಸಭೆಯ ಧರ್ಮೋಪದೇಶವೂ ಕೂಡ ಅಕ್ಟೋಬರ್ 11, 1992ರಲ್ಲಿ ಬಿಡುಗಡೆ ಮಾಡಲಾಯಿತು. ದ್ವಿತೀಯ ವ್ಯಾಟಿಕನ್ ಸಮ್ಮೇಳನವೂ ಕೂಡ ಆರಂಭಗೊಂಡದ್ದು ಅಕ್ಟೋಬರ್ 11, 1962ರಲ್ಲಿ ವ್ಯಾಟಿಕನ್ ಸಮ್ಮೇಳನ ಈ ದಿನ ಪ್ರಾರಂಭಗೊಂಡ ಔಚಿತ್ಯವೇನು? ಆಗ ಅದು "ಕನ್ಯಾಮರಿಯಮ್ಮನವರ ಮಾತೃತ್ವ"ದ ಹಬ್ಬದ ದಿನವಾಗಿತ್ತು. ಹಿಂದೆ ಈ ಹಬ್ಬವನ್ನು ಅಕ್ಟೋಬರ್ 11ರಂದು ಪೋರ್ಚುಗಲ್‌ನಲ್ಲಿ ಆಚರಿಸಲಾಗುತ್ತಿತ್ತು. ಕ್ರಿ.ಶ. 1931ರಲ್ಲಿ (ಮಾತೆ ಮರಿಯಮ್ಮನವರನ್ನು "ಥೆಯತೋಕೋಸ್" ಅಂದರೆ "ದೈವಧಾರಿಣಿ ಅಥವಾ ದೇವರ ತಾಯಿ" ಎಂದು ಘೋಷಿಸಿದ ಎಫೆಸಸ್ ವಿಶ್ವ ಸಮ್ಮೇಳನ ಜರುಗಿ (431) 15 ಶತಮಾನ ಕಳೆದ ವರ್ಷ) ಜಗದ್ಗುರು ಹನ್ನೊಂದನೇ ಪಿಯುಸರು ಈ ಹಬ್ಬವನ್ನು ಅಖಿಲ ರೋಮನ್ ಕಥೋಲಿಕ ಧರ್ಮಸಭೆಗೆ ವಿಸ್ತರಿಸಿ, ಅದನ್ನು ಅಕ್ಟೋಬರ್ 11ರಂದೇ ಆಚರಿಸಲು ಆದೇಶಿಸಿದರು. ದ್ವಿತೀಯ ನಂತರ 1974ರಲ್ಲಿ ಜಗದ್ಗುರು ಆರನೇ ಪೌಲರು ಈ ಹಬ್ಬವನ್ನು "ದೇವರ ತಾಯಿ ಮರಿಯಮ್ಮನವರ ಮಹೋತ್ಸವ " ಎಂದು ಪುನರ್ ನಾಮಕರಣ ಮಾಡಿ ಜನವರಿ 1ಕ್ಕೆ ವರ್ಗಾಯಿಸಿದರು. ಇದನ್ನು ನಾವು ಕ್ರಿಸ್ತ ಜಯಂತಿಯ ಅಷ್ಟಮ ದಿನದಂದು ಆಚರಿಸಿ ಸಂಭ್ರಮಿಸುತ್ತೇವೆ.

11. ವಿಶ್ವಾಸದ ವರ್ಷದ ಆಚರಣೆಗೆ ಧರ್ಮಸಭೆಯ ಮಾರ್ಗಸೂಚಿಗಳು ಯಾವುವು?

ವಿಶ್ವಾಸದ ವರ್ಷದ ಗುರಿ ಉದ್ದೇಶಗಳನ್ನು ಸಾಧಿಸಲು ರೋಮಿನ ವಿಶ್ವಾಸದ ಧರ್ಮತತ್ವ ಸಮಿತಿ ಕೆಲವು ಮಾರ್ಗಸೂಚಿಗಳನ್ನು ನೀಡಿದೆ:

1) ವ್ಯಾಟಿಕನ್ ಸಮ್ಮೇಳನದ ಪಠ್ಯ ಮತ್ತು ಕಥೋಲಿಕ ಧರ್ಮಸಭೆಯ ಧರ್ಮೋಪದೇಶವನ್ನು ಸೂಕ್ತವಾಗಿ ಓದಿ ಅವುಗಳ ಅಧ್ಯಯನ ಮಾಡುವುದು.

2) ನಮ್ಮ 'ವಿಶ್ವಾಸ'ವನ್ನು ನಮ್ಮ ಧರ್ಮ ಕೇಂದ್ರ ಮತ್ತು ಕುಟುಂಬಗಳಲ್ಲಿ ನಿವೇದಿಸುವುದರ ಮೂಲಕ ಎಲ್ಲಾ ಕಾಲದ ಸತ್ಯವಾಗಿರುವ ಈ ವಿಶ್ವಾಸವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ಹಾಗೂ ಅಗತ್ಯತೆ ನಮಗಿದೆ ಎಂಬುದನ್ನು ಮನಗಾಣು ವುದು.

3) ಸಂಸ್ಕಾರಗಳ ಅರ್ಥಭರಿತ ಹಾಗೂ ಸಕ್ರಿಯ ಆಚರಣೆಯ ಮೂಲಕ ವಿಶ್ವಾಸದಲ್ಲಿ ಬೆಳೆಯುವುದು.

4)ಈಗ ನಿವೇದಿಸುತ್ತಿರುವ, ಆಚರಿಸುತ್ತ, ಜೀವಿಸುತ್ತಿರುವ ಮತ್ತು ಪ್ರಾರ್ಥಿಸುತ್ತಿರುವ ವಿಶ್ವಾಸದ ಸಾರವನ್ನು ಪುನಃ ಕಂಡುಕೊಳ್ಳುವುದು ಹಾಗೂ 'ವಿಶ್ವಾಸ ವಿಧಾನ'ದ ಪ್ರಾರ್ಥನೆಯ ತಾತ್ಪರ್ಯವನ್ನು ಇನ್ನೂ ಆಳವಾಗಿ ಧ್ಯಾನಿಸುವುದು.

5) ಧರ್ಮಸಭೆಯ ಇತಿಹಾಸದಲ್ಲಿ ವಿಶ್ವಾಸವನ್ನು ನಿವೇದಿಸಿ ಆದರ್ಶ ತೋರಿರುವ ಮಾತೆ ಮರಿಯ, ಪ್ರೇಷಿತರು, ಸಂತ ಭಕ್ತರು ಅದರಲ್ಲೂ ವಿಶೇಷವಾಗಿ ಸ್ಥಳೀಯ ಸಂತರ ಪರಿಚಯ ಮಾಡಿಕೊಳ್ಳುವುದು (ವಿ. ದ್ವಾ. ಸಂಖ್ಯೆ 13)

6) ವಿಶ್ವಾಸವನ್ನು ಕ್ರಿಯಾತ್ಮಕಗೊಳಿಸುವ ದಾನಧರ್ಮ, ಜನಪರಕಾಳಜಿಗಳಂತಹ ಮಾನವೀಯ ಕಾರ್ಯಗಳಲ್ಲಿ ನಮ್ಮನ್ನು ಹೆಚ್ಚಾಗಿ ತೊಡಗಿಸಿಕೊಳ್ಳುವುದು

7) ಸತ್ಯದ ಅನ್ವೇಷಣೆಯಲ್ಲಿರುವ ವ್ಯಕ್ತಿಗಳೊಂದಿಗೆ ನಿಕಟ ಸಂಪರ್ಕವಿಟ್ಟು ಕೊಳ್ಳುವುದು

8)ಯುವಜನರ ಧರ್ಮೋಪದೇಶ - 'ಯ್ಯೂಕ್ಯಾಟ್' ಮತ್ತು ಧರ್ಮೋಪದೇಶ ಸಂಕ್ಷೇಪಗಳ ಅಧ್ಯಯನದ ಮೂಲಕ ಕುಟುಂಬ, ಹಾಗೂ ಧರ್ಮಕೇಂದ್ರಗಳಲ್ಲಿ ವಿಶ್ವಾಸವನ್ನು ಪೋಷಿಸುವುದು.

9)ಧರ್ಮಕ್ಷೇತ್ರ / ಧರ್ಮಕೇಂದ್ರ ಮಟ್ಟದಲ್ಲಿ ಯುವಜನರಿಗೆ ಹಾಗೂ ಹಿರಿಯರಿಗೆ ವಿಶ್ವಾಸದ ಮಾಧುರ್ಯತೆ ಮತ್ತು ಜೀವನದ ಅರ್ಥವನ್ನು ಕಂಡುಕೊಳ್ಳಲು ನೆರವಾಗುವ ಸಲುವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**ಮೂಲ : ದಿ ನೂ ಲೀಡರ್**
**ಅನುವಾದ : ಅತಿ. ವಂ. ಜಾರ್ಜ್ ಡಿಸೋಜಾ**
**ಚಿಕ್ಕಮಗಳೂರು**

# ವಿಶ್ವಾಸದ ಮೂಲಪಿತ - "ಅಬ್ರಹಾಮ"

'ಅಬ್ರಹಾಮ' ವಿಶ್ವಾಸದ ಪರ್ಯಾಯ ಪದವೆಂದರೆ ತಪ್ಪಾಗಲಾರದು. ಕ್ರಿ.ಪೂ. 2100 ವರ್ಷಗಳ ಹಿಂದೆ ಜೀವಿಸಿದ ಮಹಾನ್ ವ್ಯಕ್ತಿ. ಯಹೋದ್ಯ, ಕ್ರೈಸ್ತ, ಮುಸ್ಲಿಂ ಜನಾಂಗಗಳು ಇವರನ್ನು ತಮ್ಮ 'ಪಿತಾಮಹ ತಂದೆ' ಎಂದು ಕರೆಯುತ್ತಾರೆ. ಅದರಲ್ಲೂ ಕ್ರೈಸ್ತರಾದ ನಾವು ವಿಶ್ವಾಸದ ಮೂಲಪಿತ, ವಿಶ್ವಾಸದ ಪಿತಾಮಹ ಎಂದು ಗೌರವಿಸುತ್ತೇವೆ. ಹೀಗೆ ಅವರನ್ನು ಗೌರವಿಸಬೇಕಾದರೆ ಆತನಲ್ಲಿ ಉಲ್ಲೇಖಿಸುವ, ಎದ್ದು ಕಾಣುವ ಮಹಾ ಗುಣವೇ "ವಿಶ್ವಾಸ''.

ವಿಶ್ವಾಸದ ಮೂಲ ಪಿತ

ಪಿತ, ತಂದೆ, ಪಿತಾಮಹ ನಮಗೆ ಪರಿಚಯದ ಪದಗಳು, "ತಂದೆ'' ಎಂಬ ಪದ ಜೀವದಾತನಿಗೆ ಉಪಯೋಗಿಸುವ ಸರ್ವ ಸಾಮಾನ್ಯ ಪದ. ಆದರೆ ಇದನ್ನು ಕೇವಲ ದೈಹಿಕ ದೇಹಕ್ಕೆ ಕಾರಣವಾದ ವ್ಯಕ್ತಿಗೆ ಮಾತ್ರ ಉಪಯೋಗಿಸುವುದಿಲ್ಲ ಬದಲಿಗೆ ಒಂದು ಶಾಸ್ತ್ರಕ್ಕೆ, ತತ್ವಕ್ಕೆ, ಸಂಘಟನೆಗೆ, ಚಳುವಳಿಗೆ ರಾಷ್ಟ್ರದ ಉದಯಕ್ಕೆ ಕಾರಣವಾದ ವ್ಯಕ್ತಿಗೆ ನೀಡಲಾಗುವ ಶ್ರೇಷ್ಠ ಗೌರವ. ಭಾರತ ದೇಶಕ್ಕೆ ಸ್ವಾತಂತ್ರವನ್ನು ಪಡೆಯಲು ಮುಂದೆ ನಿಂತು ಚಳುವಳಿಯನ್ನು ಹುಟ್ಟುಹಾಕಿ ಹೋರಾಟ ನಡೆಸಿದ ಮಹಾತ್ಮಗಾಂಧೀಜಿಯನ್ನು ರಾಷ್ಟ್ರಪಿತ ಎಂದು ಕರೆಯುವುದು. ಹೀಗೆ 'ತಂದೆ' ಎಂಬ ಪದ ವಿಸ್ತಾರ ಅರ್ಥವುಳ್ಳ ಪದ. ಯಾವುದೇ ಹೊಸ ವಿಚಾರವನ್ನು ಜಾರಿಗೆ ತರಲು ಶ್ರಮಿಸಿದವರಿಗೆ ಗೌರವ ಪೂರಕವಾಗಿ ನೀಡಲಾಗುವ ಪದ.

ಹಾಗಾದರೆ ಅಬ್ರಹಾಮನನ್ನು ನಾವು ಯಾಕೆ 'ವಿಶ್ವಾಸದ ಪಿತಾಮಹ' ವಿಶ್ವಾಸದ ಮೂಲಪಿತ ಎಂದು ಕರೆಯುತ್ತೇವೆ ಎಂಬ ಪ್ರಶ್ನೆ ಬಂದಾಗ ಅವರ ಜೀವನ ಚರಿತ್ರೆ ಮತ್ತು ದೇವರ ವಾಗ್ದಾನವನ್ನು ಅನುಸರಿಸುವುದರಲ್ಲಿ ಆತ ಪಟ್ಟ ಶ್ರಮ ಧ್ಯಾನಿಸಿದಾಗ ಅದರ ಅರಿವು ಖಂಡಿತವಾಗಿ ನಮಗೆ ಸಾಹಸವಾಗಿ ಅರ್ಥವಾಗುತ್ತದೆ.

ಅಬ್ರಹಾಮ ಬಾಬಿಲೋನಿನ (ಕಲ್ದೀಯ) 'ಊರ್' ಪಟ್ಟಣದ ಮೂಲವಾಸಿ. ಮುಂದೆ ತನ್ನ ತಂದೆ ತೆರಹ, ಹೆಂಡತಿ ಸಾರಾ, ಆರೋನನ ಮಗ ಲೋಟನ ಸಂಗಡ 'ಹಾರಾನ್' ಎಂಬ ಪಟ್ಟಣದಲ್ಲಿ ವಾಸಮಾಡಿದ. ಒಂದು ರೀತಿಯಲ್ಲಿ ಭದ್ರ ಆಸರೆಯ ಜೊತೆಗೆ ತನ್ನ ಕುಟುಂಬದ ಜೊತೆಗೆ ವಾಸ ಮಾಡುತ್ತಿದ್ದ. ಸರ್ವೇಶ್ವರ ದೇವರು ಆತನಿಗೆ ವಿಚಿತ್ರ ಆಜ್ಞೆ ನೀಡುತ್ತಾರೆ. "ನೀನು ನಿನ್ನ ಸ್ವಂತ ನಾಡನ್ನು ಬಂಧು ಬಳಗದವರನ್ನು ತವರು ಮನೆಯನ್ನು ಬಿಟ್ಟು ನಾನು ತೋರಿಸುವ ನಾಡಿಗೆ ಹೊರಟು ಹೋಗು'' ನಾನು ನಿನ್ನನ್ನು ದೊಡ್ಡ ಜನಾಂಗವಾಗಿ ಮಾಡುತ್ತೇನೆ.....(ಆದಿಕಾಂಡ 12:1-2) ಹೀಗೆ ದೇವರು ನೀಡಿದ ಆದೇಶವನ್ನು ಅಬ್ರಹಾಮ ಪಾಲಿಸಿದ. ಒಂದು ರೀತಿಯಲ್ಲಿ ಕತ್ತಲೆಯಲ್ಲಿ ಅಬ್ರಹಾಮ ತನ್ನ ಹೆಜ್ಜೆ ಇಟ್ಟ. ಏಕೆಂದರೆ ಆದೇಶ ನೀಡಿದ ದೇವರ ಪರಿಚಯ ಆತನಿಗೆ ಇರಲಿಲ್ಲ. ಸ್ಪಷ್ಟತೆ ಮತ್ತು ಭದ್ರತೆ ಇಲ್ಲದೇ ಯಾರೂ ಯೋಜನೆಗಳನ್ನು ಹಾಕುವುದಿಲ್ಲ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ ಅಲ್ಲಿನ ವಾತಾವರಣ, ಜನರ ನಡವಳಿಕೆ, ನೀರು, ಆಹಾರ ವಸ್ತುಗಳ ಲಭ್ಯತೆ ಮುಂತಾದ ವಿಚಾರಗಳ ಬಗ್ಗೆ ತಲೆಕೆಡಿಸಿ ಹೆಜ್ಜೆ ಇಡುವುದು ಸಾಮಾನ್ಯ ಆದರೆ ವಿಶ್ವಾಸದ ಪಿತಾಮಹ ಅಬ್ರಹಾಮ ಇದಕ್ಕೆ ಹೊರತಾಗಿದ್ದ ಕಾರಣ ಅಬ್ರಹಾಮ ದೇವರ ನುಡಿಯನ್ನು ಪ್ರಶ್ನಿಸದೇ ತೂಗಿ ನೋಡದೇ ಪರಿಚಯವಿಲ್ಲದ ದೇವ ನುಡಿಯ ಪಾಲಿಸಿ "ವಿಶ್ವಾಸದ ಜನಕ'' ನಾದ.

ವಿಶ್ವಾಸದ ಮೂಲಪಿತ. ವಿಶ್ವಾಸದ ಜನಕ. ವಿಶ್ವಾಸದ ಪಿತಾಮಹ ಎಂದು ಅಬ್ರಹಾಮ ತನ್ನನ್ನು ಎಂದಿಗೂ ಕರೆಯಲಿಲ್ಲ. ಬದಲಿಗೆ ದೇವರು ಆತನನ್ನು ವಿಶ್ವಾಸದ ಜನಕ ಎಂದು ಕರೆಯುತ್ತಾರೆ (ರೋಮ 4:17) "ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತನನ್ನಾಗಿ ನೇಮಿಸಿದ್ದೇನೆ'' ದೇವರ ವಾಕ್ಯವಾದ ಪವಿತ್ರ ಗ್ರಂಥ ರೋಮ 4: 9-17ರಲ್ಲಿ ಉಲ್ಲೇಖಿಸಿದಂತೆ, "ಅಬ್ರಹಾಮ ದೇವರಲ್ಲಿ ವಿಶ್ವಾಸವಿಟ್ಟನು, ದೇವರು ಆತನನ್ನು ತಮ್ಮ ಸತ್ಸಂಬಂಧದಲ್ಲಿ ಇರಿಸಿಕೊಳ್ಳಿರುವುದಾಗಿ ಪರಿಗಣಿಸಿದರು'' ಅದೇ ರೀತಿ ಪವಿತ್ರ ಧರ್ಮಸಭೆ ತನ್ನ ಧರ್ಮೋಪದೇಶದಲ್ಲಿ ವಿಶ್ವಾಸದ ತಂದೆ ಎಂದು ಕರೆಯುತ್ತದೆ. ದೇವರು, ಧರ್ಮಸಭೆ ಆತನನ್ನು ವಿಶ್ವಾಸದ ಪಿತಾಮಹ ಎಂದು ಕರೆದಿರುವುದು ಆತನಲ್ಲಿ ಅವರು ಕಂಡುಕೊಂಡ ಆದರ್ಶಕ್ಕಾಗಿ. ಈ ಆದರ್ಶ ನಮ್ಮ ವಿಶ್ವಾಸದ ಬಾಳಿಗೂ ಅವಶ್ಯಕ.

**ವಿಶ್ವಾಸದ ಪಿತಾಮಹನ ವಿಶ್ವಾಸದ ಪಂಚ ಆದರ್ಶಗಳು**

ರಕ್ಷಣೆಗೆ ವಿಶ್ವಾಸ ಬಹಳ ಮುಖ್ಯ. ಅದನ್ನು ಅಬ್ರಹಾಮ ಸಿದ್ಧಿಗೆ ತಂದರು. ಅಬ್ರಹಾಮ ನಮಗೆಲ್ಲರಿಗೂ ಆದರ್ಶ ಕಾರಣ ನಮಗೆ ಈಗ ಸಿಗುವ ವಿಶ್ವಾಸದ ಸತ್ಯಗಳು, ತರಬೇತಿಗಳು, ಧ್ಯಾನ, ಪ್ರಬೋಧನೆ ಆತನಿಗೆ ಇರಲಿಲ್ಲ. ಆತನಿಗೆ ಎಲ್ಲವೂ ಹೊಸತು. ನಿಜವಾದ ಏಕ

**ಫಾ. ರೋಮನ್ ಪಿಂಟೊ,**
**ಹೊಳಲ್ಕೆರೆ**

ದೇವರ ಪರಿಚಯ ಇಲ್ಲದೆ ಆ ದೇವರನ್ನು ನಂಬಲು ಶಕ್ತನಾದನು. ದೇವರ ವಾಗ್ದಾನ ಕಣ್ಣಿಗೆ ಕಾಣದಿದ್ದರೂ ಅದನ್ನು ಅನುಷ್ಠಾನಕ್ಕೆ ತರಲು ಶ್ರಮಿಸಿದ. ಹೀಗೆ ಎಲ್ಲದರಲ್ಲೂ ಅಬ್ರಹಾಮ ಪ್ರಥಮ ಹೆಜ್ಜೆ ಇಟ್ಟ. ವಿಶ್ವಾಸದ ಹಾದಿಯಲ್ಲಿ ಆತ ಇಟ್ಟ ಧೀರ ಹೆಜ್ಜೆಗಳಿಂದ ನಮಗೆಲ್ಲರಿಗೂ ಆತನ ಬಾಳು ಆದರ್ಶ ಮಾತ್ರವಲ್ಲ ಅನುಸರಿಸಲು ಯೋಗ್ಯ.

**ವಿಶ್ವಾಸದ ಹಾದಿಯ ಧೀರ ಹೆಜ್ಜೆಗಳು**

1. ವಿಶ್ವಾಸಕ್ಕಾಗಿ ದೇಶ, ಕುಲ ಗೋತ್ರ ತ್ಯಜಿಸಿದ:

ದೇಶ, ಸಂಬಂಧಿಕರು, ನೆಲ, ಜಲ, ಮಾನವನ ಲೌಕಿಕ ಜೀವನಕ್ಕೆ ಬಹಳ ಅಗತ್ಯ ಅವಶ್ಯಕ. ಅವುಗಳಿಗಾಗಿ ಶ್ರಮಿಸುವಾಗ, ಹಾತೊರೆಯುವಾಗ ದೇವರ ನೆನಪು ಮಾಸಿ



ಶಾಂತನೂ ಸುಖಿಯೂ ಆದವನು ವಯಸ್ಸಿನ ಭಾರ ಕಾಣನು ಹಾಗಿಲ್ಲದವನಿಗೆ ಯೌವನ, ಮುಪ್ಪು ಎರಡು ಭಾರವೇ.

ಹೋಗುವುದು ಸಹಜ. ದೇವರ ವಾಕ್ಯ ಮತ್ತಾಯ 19:24 ನುಡಿದಿರುವಂತೆ "ಶ್ರೀಮಂತರಿಗೆ ಸ್ವರ್ಗ ಸಾಮ್ರಾಜ್ಯ ಸೇರಲು ಬಹಳ ಕಷ್ಟ, ಯಾರೂ ಇಬ್ಬರು ಧನಿಕರ ಸೇವೆ ಮಾಡಲಾಗದು''. ಆದ್ದರಿಂದ ದೇವರಿಗಿಂತ ಕಡಿಮೆ ಬೆಲೆಯುಳ್ಳ ವಸ್ತುಗಳನ್ನು ತ್ಯಜಿಸುವುದು ಅನಿವಾರ್ಯ. "ಎಲ್ಲಿ ನಿನ್ನ ನಿಧಿ ಇದೆಯೋ, ಅಲ್ಲೇ ಇರುವುದು ನಿನ್ನ ಹೃದಯ'' (ಮತ್ತಾಯ 6:21). ಈ ನಿಟ್ಟಿನಲ್ಲಿ ಅಬ್ರಹಾಮ ದೇವರ ಹಾದಿಯನ್ನು ಸುಗಮಗೊಳಿಸಲು ಆತ ಭದ್ರತೆ ಎಂದು ನಂಬಿದ್ದ ತನ್ನ ಊರು, ಸಂಬಂಧಿಕರು ಎಲ್ಲರನ್ನು ತೊರೆಯುತ್ತಾನೆ. ನೀ ಬರಿದು ಆದಾಗ ಮಾತ್ರ ದೈವಿ ಕೃಪೆ ನಿನ್ನಲ್ಲಿ ತುಂಬುತ್ತದೆ.

2. ಹಳೆಯ ತ್ಯಜಿಸಿ ಹೊಸತನವ ಧರಿಸಿ:

ವಿಶ್ವಾಸದ ಬಾಳಿನಲ್ಲಿ ಹಳೆಯದು ಹೊಸತು ಒಟ್ಟಿಗೆ ಸಾಗಲು ಸಾಧ್ಯವಿಲ್ಲ. ದೇವರು ಹೊಸ ಬಾಳಿಗೆ ಕರೆ ನೀಡುತ್ತಾರೆ ಎಂದಾದರೆ ಹಳೆಯ ವ್ಯಕ್ತಿತ್ವ ನಡವಳಿಕೆ ಬದಲಾಗಬೇಕು. ವಿಶ್ವಾಸವೆಂದರೆ ಕಣ್ಣಿಗೆ ಕಾಣದಂಥವುಗಳು ನಿಶ್ಚಯವಾದವು ಎಂಬ ನಿಲುವು. ಅಬ್ರಹಾಮ ವಿಶ್ವಾಸಕ್ಕೋಸ್ಕರ ತನ್ನ ಹಳೆಯ ನಂಬಿಕೆ. ಆಚಾರ ವಿಚಾರ, ಊರು ಕೇರಿ, ಬಂಧು ಬಳಗ ತ್ಯಜಿಸಿ ದೇವರು ತೋರಿಸುವ ದಾರಿಯಲ್ಲಿ ನಡೆಯಲು ಸಿದ್ಧನಾದ. ದೇವರ ಕರೆ ನಮಗೆ ಬಂದಾಗ ನಾವು ಅನೇಕ ವಿಚಾರಗಳನ್ನು ತ್ಯಜಿಸಲು ಸಿದ್ಧರಾದಾಗ ಮಾತ್ರ ವಿಶ್ವಾಸ ನಮ್ಮ ಬಾಳಿನಲ್ಲಿ ಬೇರು ಬಿಡಲು ಆರಂಭವಾಗುತ್ತದೆ.

3. ಏಕ ದೇವಾ, ಅವರು ನಿನ್ನ ಸದಾ ಕಾಯ್ವ:

ನನ್ನ ಹೊರತು ನಿಮಗೆ ಬೇರೆ ದೇವರು ಇರಕೂಡದು (ವಿಮೋ 20:3) ಚಾರಿತ್ರಿಕ ವಾಗಿ ನಾವು ಆರಾಧನೆ ಮಾಡುವ ಏಕದೇವರ ಪರಿಚಯ ನಮಗೆ ಆಗಿರುವುದು ಅಬ್ರಹಾಮನಿಂದ ದೈವಶಾಸ್ತ್ರದ, ದೈವಿಕ ಸತ್ಯದ ಜ್ಞಾನ ಇಲ್ಲದೇ ಹೋದರೂ ಆತನ ನಂಬಿಕೆ ಮೆಚ್ಚಲೇಬೇಕು. ವಿಶ್ವಾಸದ ಸತ್ಯಗಳು ಅರಿತು ಧರ್ಮಸಭೆಯಲ್ಲಿ ಬೆಳೆದು ಕ್ಷಣಿಕ ಲಾಭ, ವಿಚಿತ್ರ ಅನುಭವ ದಿನಕ್ಕೆ ಒಂದು ದೇವರು ಎಂದು ಹೋಗುವ ನಾವು ಅಬ್ರಹಾಮ ಅಂದು ಇಟ್ಟ ಒಂದು ದಿಟ್ಟ ಹೆಜ್ಜೆ ಖಂಡಿತ ಮೆಚ್ಚಲೇಬೇಕು. ಈ ಕಾರಣಕ್ಕಾಗಿ ದೇವರು ತನ್ನ ಪರಿಚಯವನ್ನು ಅಬ್ರಹಾಮನ ಮೂಲಕವೇ ಮಾಡುತ್ತಾರೆ. ನಾನು ನಿಮ್ಮ ತಂದೆ ಅಬ್ರಹಾಮರ ದೇವರು (ಆದಿಕಾಂಡ 26:24; ವಿಮೋ 3:6).

4. ದೇವ ವಾಕ್ಯ ನಂಬಿ ನಡೆದ ಭಕ್ತ ಅಬ್ರಹಾಮ:

ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನ "ನಿನ್ನನ್ನು ದೊಡ್ಡ ಜನಾಂಗವಾಗಿ ಮಾಡುವೆನು'' ನಿಜಕ್ಕೂ ಹಾಸ್ಯಭರಿತ ಮಾತು ಎಂದು ಇಂದಿನ ಜನಾಂಗ ನುಡಿಯಬಹುದು. ಆದರೆ ಅಂತಹ ಇಳಿ ವಯಸ್ಸಿನಲ್ಲಿ ಅಬ್ರಹಾಮ ನಂಬಿದ ದೇವರ ವಾಕ್ಯ. ಏಕೆಂದರೆ ಆತನ ಗಮನ ವಸ್ತುವಿನ ಮೇಲೆ ಇರಲಿಲ್ಲ. ವಸ್ತುವನ್ನು ನೀಡುವ ಧನಿಕನ ಮೇಲೆ ಇತ್ತು. ಅದನ್ನು ವಿಶ್ವಾಸ ಅನ್ನುವುದು. ಇಂದಿನ ಆಧುನಿಕ ಯುಗದಲ್ಲಿ ತತ್ವಶಾಸ್ತ್ರ, ವಿಜ್ಞಾನ ನಮ್ಮ ತಲೆಯನ್ನು ಬುದ್ಧಿಯನ್ನು ಜೀವನವನ್ನು ಆಳುತ್ತಿರುವಾಗ ದೇವರ ವಾಕ್ಯ ನಂಬಲು ಅಸಾಧ್ಯ.

5. ನಡೆಯದ ಹಾದಿ ಪಯಣ- ವಿಶ್ವಾಸದ ಪಯಣ

ಅಬ್ರಹಾಮನ ವಿಶ್ವಾಸದ ಪ್ರಯಾಣವನ್ನು ಕಲಿಯಲು ಸುಲಭ, ಜೀವಿಸಲು ಕಷ್ಟ. ಇಂತಹ ಕ್ಲಿಷ್ಟಕರವಾದ ಯಾರೂ ನಡೆಯದ ಹಾದಿಯನ್ನು ಮೊದಲು ನಡೆಯಲು ಧೈರ್ಯಮಾಡಿ ನಡೆದವನು ಅಬ್ರಹಾಮ. ನಡೆದ ಹಾದಿಯಲ್ಲಿ ನಡೆಯುವುದು ಬಹಳ ಸುಲಭ. ಅದೇ ನಡೆಯದ ದಾರಿಯಲ್ಲಿ ದಾರಿ ಮಾಡಿ ನಡೆಯುವುದು ಕಷ್ಟ. ಆ ಹಾದಿ ಅಬ್ರಹಾಮನ ಹಾದಿಯಾಗಿತ್ತು. ಈ ಹಾದಿಯನ್ನು ನಡೆಯಲು ಆತ ತರ್ಕಶಾಸ್ತ್ರ, ಮಾನವ ಬುದ್ಧಿ, ಯೋಜನೆಯನ್ನು ಬದಿಗಿಟ್ಟು ದೇವರ ವಾಕ್ಯದಂತೆ ನಡೆದ. ಅದೇ ಎಲ್ಲರೂ ಅನುಸರಿಸುವ ಮಾರ್ಗವಾಯಿತು.

ಹೀಗೆ ಅಬ್ರಹಾಮನ ಇಡೀ ಜೀವನ ವಿಶ್ವಾಸದ ಪ್ರತೀಕವಾಯಿತು. ಅವನ ವಿಶ್ವಾಸದಿಂದ (ಆದಿಕಾಂಡ 12ರಿಂದ 25 ಅಧ್ಯಾಯ) ದೇವರು ತನ್ನನ್ನು ಪ್ರಕಟಪಡಿಸಲು ತಮ್ಮ ದರ್ಶನ ನೀಡುವುದು ಈ ಕೆಳಗಿನ ಅಧ್ಯಾಯದಲ್ಲಿ ಕಾಣುತ್ತೇವೆ. ಆದಿಕಾಂಡ 12:1-7; 13: 14-17; 15: 1-17; 17:1-27; 18: 1-33; 22: 1-17. ದೇವರ ಮೇಲೆ ಇಟ್ಟ ವಿಶ್ವಾಸಕ್ಕಾಗಿ ದೇವರು ಅಬ್ರಹಾಮನಿಗೆ ನೀಡಿದ ಬಹುಮಾನ. ನಮ್ಮ ವಿಶ್ವಾಸ ದೇವರ ವಾಗ್ದಾನದ ಮೇಲೆ ಇರಬೇಕು. ಜಗತ್ತಿನ ನಶ್ವರ ವಸ್ತುಗಳ ಮೇಲೆ, ಮೂಢನಂಬಿಕೆಗಳ ಮೇಲೆ ಅಲ್ಲ. ದೇವರ ವಾಕ್ಯ ಆಲಿಸಿದಾಗ ವಿಶ್ವಾಸ ಬರುತ್ತದೆ (ರೋಮ 10: 17). ಅಬ್ರಹಾಮನ ವಿಶ್ವಾಸ ವಿಧೇಯತೆಯ ವಿಶ್ವಾಸ ಯಾವುದೇ ಆಸೆ ಆಮಿಷಗಳಿಂದ ಕೂಡಿದ ವಿಶ್ವಾಸ ಆಗಿರಲಿಲ್ಲ (ಹಿಬ್ರಿ 11:8) ಎಲ್ಲವೂ ಇದ್ದು ಒಬ್ಬ ಪರದೇಶಿಯಂತೆ ದೇವರಿಗೋಸ್ಕರ ಜೀವಿಸಿದ (ಹಿಬ್ರಿ 11:9). ದೇವರು ಆತನ ಮುಂದೆ ಪರೀಕ್ಷೆ ಇಟ್ಟರೂ ಆತ ಹಿಂಜರಿಯಲಿಲ್ಲ (ಹಿಬ್ರಿ 11:17). ನಾವು ವಿಶ್ವಾಸದಲ್ಲಿ ವಿಧೇಯತೆಯನ್ನು ತೋರಿಸುವವರಾಗಬೇಕು. (ರೋಮ 16: 15 - 26). ವಿಶ್ವಾಸದ ಸತ್ಯಗಳಿಗೆ ಹೃದಯದಿಂದ ವಿಧೇಯರಾದಾಗ ಮಾತ್ರ ಬಿಡುಗಡೆ ಸಿಗುತ್ತದೆ (ರೋಮ 6:17).

ಅದೇ ರೀತಿ ಅಬ್ರಹಾಮನ ವಿಶ್ವಾಸ ಅನೇಕ ಸಂದರ್ಭಗಳಲ್ಲಿ ಅಲುಗಾಡಿದ್ದು ಕಾಣುತ್ತೇವೆ. ಆದಿಕಾಂಡ 12: 11-20, 20: 1-18ರಲ್ಲಿ ಅಬ್ರಹಾಮ ಅರ್ಧ ಸತ್ಯ ಹೇಳುವುದು ಕಾಣುತ್ತಿದೆ. ಸಾರಳಿಗೆ ಮಕ್ಕಳಾಗದೇ ಇದ್ದಾಗ ದೇವರನ್ನು ಪ್ರಶ್ನೆ ಮಾಡಿದ (ಆದಿ 15: 2-3). ಹಾಗರನ ವಿಚಾರದಲ್ಲಿ ಆತನ ವಿಶ್ವಾಸ ಛಿದ್ರವಾಯಿತು (ಆದಿ 16 : 1-4). ಆಗ ದೇವರು ಆತನ ಮೇಲೆ ಸಹನೆ ತೋರಿಸಿ ಅವನ ವಿಶ್ವಾಸ ಬೆಳೆಯಲು ಕಾರಣೀಕೃತರಾದರು. ವಿಶ್ವಾಸದಲ್ಲಿ ಬೆಳೆಯಲು ಶ್ರಮಿಸಬೇಕು. ನಮ್ಮ ವಿಶ್ವಾಸದ ಮೂಲಪಿತ ಅಬ್ರಹಾಮ ಈ ವಿಶ್ವಾಸದ ವರ್ಷದಲ್ಲಿ ನಮ್ಮ ವಿಶ್ವಾಸ ದೃಢವಾಗಲು ಅವರ ಜೀವನ ನಮಗೆ ಆದರ್ಶವಾಗಿ ನಮ್ಮ ವಿಶ್ವಾಸ ನಿರಂತರ ಬೆಳೆದು ಹೆಮ್ಮರವಾಗಿ ಇತರರಿಗೂ ಅದು ಆದರ್ಶವಾಗಲಿ.

# ಮರಿಯಾ ಗೊರೆಟ್ಟಿ

## (1890-1902 ಕನ್ಯೆ, ರಕ್ತಸಾಕ್ಷಿ)

ಜುಲೈ ತಿಂಗಳು, ಸುಡುವ ಬಿಸಿಲು ಮರಿಯಾ ತನ್ನ ಮನೆಯ ಮೇಲ್ಚಾವಣೆಯಲ್ಲಿದ್ದಳು ಕಸೂತಿ ಕೆಲಸ ಮಾಡುತ್ತ 11ರಿಂದ 12ವರ್ಷಗಳಾಗಿ ದೈಹಿಕವಾಗಿ ಬಲಿಷ್ಟವಾಗಿದ್ದಳು. ಮನೆಯ ಹೊರಗೆ ಒಂದು ಗಾಡಿ ಬಂದು ನಿಂತಿತು, ಮನೆಯ ಪಕ್ಕದಲ್ಲೇ ಇರುವ 18 ವರ್ಷದ ಯುವಕ ಅಲೆಸ್ಸಾಂಡ್ರೊ, ಮನೆಗೆ ನುಗ್ಗಿ ಮೇಲ್ಚಾವಣೆಕಡೆಗೆ ನುಗ್ಗಿದ. ಬಿರುಗಾಳಿಯಂತೆ ನುಗ್ಗಿದವನೇ ಮರಿಯಾಳ ಮೇಲೆ ಆಕ್ರಮಣ ಮಾಡಿ, ಬೆಡ್‌ರೂಮ್‌ಗೆ ಕರೆದೊಯ್ದು ಬಲಾತ್ಕಾರ ಮಾಡಲು ಯತ್ನಿಸಿದ. ಮರಿಯಳು ಆತನ ಬಲತ್ಕಾರಕ್ಕೆ ಮಣಿಯದೆ, ಉಛ್ಛಸ್ವರದಿಂದ ಸಹಾಯ ಯಾಚಿಸಿದಳು. "ದೇವರು ಖಂಡಿತವಾಗಿ ಈ ನೀಚ ಕ್ರೂರ ಕೆಲಸವನ್ನು ಬಯಸುವುದಿಲ್ಲ ಇದೊಂದು ಪಾಪದ ಕೆಲಸ. ನೀನು ನರಕಕ್ಕೆ ಹೋಗುವೆ", ಈ ಮಾತುಗಳಿಗೆ ಕಿವಿಗೊಡದೆ, ಅಲ್ಲಿಯೇ ಪಕ್ಕದಲ್ಲಿ ಬಿದಿದ್ದ ಚೂರಿಯಿಂದ ತಿವಿಯಲಾರಂಭಿಸಿದ.

ತಿವಿದಾದ ನಂತರ ಅಲೆಸ್ಸಾಂಡ್ರೊ ಕಾಲಿಗೆ ಬುದ್ದಿಹೇಲಿ ಪರಾರಿಯಾದ, ನಂತರ ಮರಿಯಳನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಮರಿಯಳ ಕೊನೆಯ ಉಸಿರಿನ ಗಳಿಗೆಯು, ದಯೆ ಕರುಣೆಯಿಂದ ತುಂಬಿದ್ದಾಗಿತ್ತು. ತನ್ನ ತಾಯಿ ಎಲ್ಲಿ ಮಲಗುವಳು? ಅಲೆಸ್ಸಾಂಡ್ರೊನಿಗೆ ಕ್ಷಮೆ ಹೇಗೆ ಎಂಬುದು ಯೋಚನೆಯಾಗಿತ್ತು. ಆದರೆ ಕೊನೆಯುಸಿರಿನ ಸಮಯದಲ್ಲೂ ಈಕೆ ಅಲೆಗ್ಸಾಂಡ್ರೊನ ಬಗ್ಗೆ ತುಟಿ ಬಿಚ್ಚದೆ ಇದ್ದದ್ದು. ತುಟಿ ಬಿಚ್ಚಿದ್ದರೆ ಅಲೆಸ್ಸಾಂಡ್ರೊ ತನ್ನ ಕುಟುಂಬದವರಿಗೆ ಏನಾದರೂ ಮಾಡಿಯಾನು ಎಂಬ ಭಯದಿಂದಿರಬೇಕೆ? ಗುರುಗಳಿಂದ ಪರಮ ಪ್ರಸಾದವನ್ನು ಸ್ವೀಕರಿಸಿದ ನಂತರ 24 ಗಂಟೆಯಾದ ಮೇಲೆ ದೈವಾಧೀನಳಾದಳು.

ಅನೇಕ ಕುರುಹುಗಳ ಸಹಾಯದಿಂದ ಅಲೆಸ್ಸಾಂಡ್ರೊನನ್ನು ಬಂಧಿಸಿ, 30 ವರ್ಷಗಳು ಜೈಲುವಾಸ ಮಾಡಬೇಕಾಯಿತು. ಈ ನೀಚತನದ ಕ್ರೌರ್ಯಕೆಲಸ ಮಾಡಿದಾದ ನಂತರವೂ ಮನಪರಿವರ್ತನೆಯ ವಿಷಯವೇ ಇವನ ಬಳಿ ಸುಳಿಯಲಿಲ್ಲ. ಭಯೋತ್ಪಾದಕನಂತೆ ಜೈಲಿನಲ್ಲಿಯೆ ಜೀವನ ಸಾಗಿಸಬೇಕಾಯಿತು. ಈ ರೀತಿಯ ಜೀವನ ಸಾಗಿಸುತ್ತಿದ್ದಾಗ ಒಂದು ರಾತ್ರಿ ಅಲೆಸ್ಸಾಂಡ್ರೊನಿಗೆ ಕನಸು ಬಿತ್ತು. ಕನಸಿನಲ್ಲಿ ಮರಿಯ ವಿವಿಧ ಹೂಗಳನ್ನು ಶೇಖರಿಸಿ ಈತನಿಗೆ ಅರ್ಪಿಸುವಂತೆ. ಈ ಕನಸ್ಸು ಆತನ ಜೀವನವನ್ನು ನನಸಾಗಿಸಿತು ಹೇಗೆ? ಅಲೆಸ್ಸಾಂಡ್ರೊ ಪಶ್ಚಾತಾಪ ಪಟ್ಟು, ಬದಲಾದುದರಿಂದ. 30 ವರ್ಷ ಜೈಲುವಾಸದಲ್ಲಿಡ ಬೇಕಾದ ಈತನ ಬದಲಾವಣೆ ಯನ್ನು ಕಂಡು, ಜೈಲು ಅಧಿಕಾರಿಗಳು 3 ವರ್ಷಗಳನ್ನು ಮೊಟಕುಗೊಳಿಸಿದರು. 27ನೇ ವರ್ಷದಲ್ಲಿ ಅಲೆಸ್ಸಾಂಡ್ರೊ ತನ್ನ ಒಳ್ಳೆಯ ನಡತೆಯ ಸರ್ಟಿಫಿಕೇಟಿನಿಂದ ಹೊರನಡೆದವನೇ ಮರಿಯಳ ತಾಯಿಯ ಬಳಿ ಕೈ ಮುಗಿದು ಪಶ್ಚಾತಾಪ ಪಟ್ಟು, ಕ್ಷಮೆ ಯಾಚಿಸಿದ್ದು.

ತನ್ನ 12 ನೇ ವಯಸ್ಸಿನಲ್ಲೇ ವೀರತ್ವವನ್ನು ಮೆರೆದು ಧೈರ್ಯ ಸಾಹಸದಿಂದ ಶೋಧಕ, ಶೋಧನೆಯುನ್ನು ಎದುರಿಸಿದ ಈ ಪುಟ್ಟ ಬಾಲೆಯನ್ನು ದೈವಾಧೀನದ ಅರ್ಧ ಶತಮಾನದಲ್ಲೇ ಸಂತರ ಪಟ್ಟಕ್ಕೆ ಏರಿಸಲಾ ಯಿತು. ಈ ಶುಭ ಸಂದರ್ಭ 1947ರಲ್ಲಿ ಮರಿಯಳ ತಾಯಿ ( ಆಗ 82ವರ್ಷ) ಇಬ್ಬರೂ ಸಹೋದರಿಯರು, ಒಬ್ಬ ಸಹೋದರ ಎಲ್ಲರೂ 12 ನೇ ಪಾಯಸ್ ಜಗದ್ಗುರುಗಳೊಂದಿಗೆ ಸಂತ ಪೇತ್ರರ ಮೊಗಸಾಲೆಯಲ್ಲಿ ಆಸೀನರಾಗಿದ್ದರು. ಇದಾದ 3 ವರ್ಷಗಳ ನಂತರ 66ನೇ ವಯಸ್ಸಿನ´ ವ´ ನಾ ದ´ ಅಲೆಸ್ಸಾಂಡ್ರೊ ನೆರೆದಿದ್ದ ದಶಲಕ್ಷ ಜನರ ಮುಂದೆ ಮೊಣಕಾಲೂರಿ ಕಣ್ಣೀರಿನ ಹೊಳೆ ಹರಿಸಿದ.

ಇಟಲಿ ದೇಶದಲ್ಲಿನ ರೈತಾಪಿ ಕುಟುಂಬಕ್ಕೆ ಸೇರಿದ ಮರಿಯಾ ಶಾಲೆಯ ಮೆಟ್ಟಿಲನ್ನೇ ಏರಿರಲಿಲ್ಲ, ಓದುವ ಬರೆಯುವ ಗಂಧವೇ ಈಕೆಗೆ ಇರಲಿಲ್ಲ. ಹೀಗಿದ್ದರೂ 12ನೇ ವಯಸ್ಸಿನಲ್ಲಿ ಈಕೆಗೆ ಪ್ರಪ್ರಥಮ ದಿವ್ಯ ಸಂಸ್ಕಾರವನ್ನು ನೀಡಲಾಯಿತು.

ಶಾಲೆಯ ಮೆಟ್ಟಿಲತ್ತದೆ ಧರ್ಮೋಪದೇಶದ ಬುನಾದಿ ಕಷ್ಟವಾಗಿರಬಹುದು ಮರಿಯಾಳಿಗೆ, ಆದರೆ ವಿಶ್ವಾಸದಲ್ಲಲ್ಲ ದೇವನಲ್ಲಿಟ್ಟ ಅಪಾರ ನಂಬಿಕೆ, ಗೌರವ, ಸಭ್ಯತನ, ಗೊಂದಲ ಜಗತ್ತಿನಲ್ಲಿ ಮರಿಯಾಳದು ಸರಳ ವಿಶ್ವಾಸ. ಪುಟ್ಟ ವಯಸ್ಸಿನಲ್ಲಿ ಪರರನ್ನು ಹಾಗೂ ದೇವರನ್ನು ಪ್ರೀತಿಸುವುದು ಕಷ್ಟದ ಕೆಲಸವಾಗಿರಲಿಲ್ಲ.

ಮರಿಯಾಳು ರಕ್ತ ಸಾಕ್ಷಿಯಾಗದಿದ್ದರೂ ಖಂಡಿತ ಆಕೆ ಸಂತಳಾಗುತ್ತಿದ್ದಳು, ಕಾರಣ ಅವಳ ದೈನಂದಿನ ಜೀವನ ಆ ಪರಿಯಿತು. (ಕಾರ್ಡಿನಲ್ ಸಲೊತ್ತಿ)

ವಂ//. ಅಲೆಕ್ಸಾಂಡರ್ ಕಪುಚಿನ್
ಗಂಗೊಂಡನಹಳ್ಳಿ

ನವನವೀನ, ವಿನೂತನ
ಮಾದರಿಯ ಪರಮಪ್ರಸಾದದ
ಕಾರ್ಡುಗಳು ಹಾಗೂ ಮದುವೆಯ
ಆಮಂತ್ರಣ ಪತ್ರಗಳು ನಮ್ಮಲ್ಲಿ
ಸದಾ ಲಭ್ಯವಿದೆ.





ಮೀರಾ
ಮುದ್ರಣಕ್ಕೊಂದು
ನಂ. 1 ಹೆಸರು

ಮೀರಾ ಪ್ರಿಂಟರ್ಸ್

ಕಪಿತಾನಿಯೋ ಶಾಲಾ ರಸ್ತೆ, ಪಂಪ್‌ವೆಲ್, ಕಂಕನಾಡಿ,
ಮಂಗಳೂರು - 2, ದೂರವಾಣಿ : 2435497, 5515497

ಚಿಕ್ಕಮಗಳೂರು ಮತ್ತಿತರ
ದೂರದ ಊರುಗಳಿಂದ
ಬರುವವರಿಗೆ ಅದೇ ದಿನ
ಮುದ್ರಣ ಮಾಡಿ ಕೊಡುತ್ತೇವೆ.

ಕಂಪ್ಯೂಟರ್ ಅಕ್ಷರ
ಜೋಡಣೆ – ಆಫ್‌ಸೆಟ್
ಪ್ರಿಂಟಿಂಗ್ ಮೂಲಕ
ಶೀಘ್ರ ಮುದ್ರಣ



ಯಾವ ಯೋಗ್ಯತೆಯನ್ನೂ ಅವರ ಲೋಪಗಳ ಆಧಾರದಿಂದ ನಿರ್ಣಯಿಸ ಬಾರದು.

## ಎರಡನೇ ವ್ಯಾಟಿಕನ್ ಮಹಾ ಸಮ್ಮೇಳನ

# ಧರ್ಮಸಭೆಯ ಧರ್ಮಪ್ರಸಾರ ಕಾರ್ಯ

**(ಕೃಪೆ : ವ್ಯಾಟಿಕನ್ ಮಂಜರಿ)**

**ಪ್ರಿಯ ವಾಚಕರೇ, ಧರ್ಮಸಭೆಯ ಚರಿತ್ರೆಯಲ್ಲಿ ದ್ವಿತೀಯ ವ್ಯಾಟಿಕನ್ ಮಹಾ ಸಮ್ಮೇಳನ ಜರುಗಿ 50 ವರ್ಷಗಳಾದವು. ಸುವರ್ಣೋತ್ಸವ ಸಂಭ್ರಮ, 1962, ಅಕ್ಟೋಬರ್ 11 ರಂದು ಆರಂಭಗೊಂಡು 1965ರವರೆಗೆ ಇದು ನಡೆಯಿತು. ಈ ಸಮ್ಮೇಳನದಲ್ಲಿ ವಿಶ್ವದ ಎಲ್ಲಾ ಕಡೆಗಳಿಂದ ಸುಮಾರು 2,600 ಧರ್ಮಾಧ್ಯಕ್ಷರುಗಳು, 500 ಜನ ತತ್ವ ಹಾಗೂ ದೈವಶಾಸ್ತ್ರಜ್ಞರು, ಸಾಮಾನ್ಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಈ ಸಮ್ಮೇಳನದಲ್ಲಿ ಧರ್ಮಸಭೆಯ ಜೀವನಕ್ಕೆ ಸಂಬಂಧಪಟ್ಟ ಹಲವಾರು ವಿಚಾರ, ವಿಷಯಗಳನ್ನು ಧ್ಯಾನಿಸಿ, ಚರ್ಚಿಸಲಾಯಿತು. ಹಲವು ದಿನಗಳ ವಿಚಾರ-ವಿನಿಮಯ, ವಿಮರ್ಶೆ-ವಿಶ್ಲೇಷಣೆ, ಸಂವಾದ, ಸಮಾಲೋಚನೆಯ ನಂತರ ಧರ್ಮಸಭೆಗೆ ಅಧಿಕೃತವಾಗಿ ಶಾಸನಗಳನ್ನು ತಯಾರಿಸಿತು. ಶ್ರೀಸಾಮಾನ್ಯರಿಗೆ ಇದು ನಿಜವಾಗಿಯೂ ಅಪರಿಚಿತ. ಆದ್ದರಿಂದ ದ್ವಿತಿಯ ವ್ಯಾಟಿಕನ್ ಮಹಾಸಮ್ಮೇಳನದ ಸುವರ್ಣೋತ್ಸವ ಸಂದರ್ಭದಲ್ಲಿ 'ಸ್ನೇಹಜ್ಯೋತಿ' ಈ ಸಂಚಿಕೆಯಿಂದ ಈ ಸಮ್ಮೇಳನದ ಬೋಧನೆ, ಶಾಸನಗಳ ಸಂಕ್ಷಿಪ್ತ ಸಾರಾಂಶವನ್ನು ತನ್ನ ಓದುಗರಿಗೆ ನೀಡಲು ಬಯಸುತ್ತದೆ. ಓದುಗರು ಇದನ್ನು ಓದಿ, ಧ್ಯಾನಿಸಿ, ಧರ್ಮಸಭೆಯ ಯೋಗ್ಯ ದೈವಪ್ರಜೆಗಳಾಗಿ ಬಾಳಲು, ಸಕ್ರಿಯ ಸದಸ್ಯರಾಗಿ ಜೀವಿಸಲು ಇಂದಿನಿಂದ ಈ ಅಂಕಣ ಸರ್ವರಿಗೂ ನೆರವಾಗಲೆಂದು ಸ್ನೇಹಜ್ಯೋತಿಯ ಅಂತರಾಳದ ಆಶಯ ಹಾಗೂ ಹಾರೈಕೆ. ತಾವಿದನ್ನು ಸ್ವಾಗತಿಸುತ್ತಿರಲೆಂದು ನಂಬಿದ್ದೇವೆ. ತಮ್ಮ ಸಲಹೆ, ಸೂಚನೆ, ಸದಾಭಿಪ್ರಾಯಗಳಿಗೆ ಮುಕ್ತ ಸ್ವಾಗತ.**

**ಪೀಠಿಕೆ**

ಧರ್ಮಸಭೆ ತನ್ನ ಸಾರ್ವತ್ರಿಕ ಸ್ವಭಾವಕ್ಕನುಗುಣವಾಗಿ ಮತ್ತು ತನ್ನ ಸ್ಥಾಪಕರಾದ ಯೇಸುಕ್ರಿಸ್ತರ ಆಜ್ಞೆಗೆ ಅನುಸಾರವಾಗಿ ಶುಭಸಂದೇಶವನ್ನು ಎಲ್ಲಾ ಜನರಿಗೂ ಸಾರಿ ತನ್ನ ನಿಯೋಗವನ್ನು ಈಡೇರಿಸುತ್ತದೆ. ಹೀಗೆ ಅದು ದೇವರ ರಾಜ್ಯವನ್ನು ಸಾರಿ ಅದನ್ನು ವಿಶ್ವದಲ್ಲೆಲ್ಲ ಸ್ಥಾಪಿಸಲಿಚ್ಛಿಸುತ್ತದೆ.

**ಅಧಾಯ 1.**

**ಬೋಧನಾ ತತ್ವಗಳು**

**ಶುಭಸಂದೇಶ ಮತ್ತು ದೈವ ಯೋಜನೆ**

ಪ್ರಪಂಚದಲ್ಲಿರುವ ಧರ್ಮಸಭೆ ಸ್ವಾಭಾವಿಕವಾಗಿ ಧರ್ಮ ಪ್ರಸಾರಕ ಸಭೆ. ಎಲ್ಲ ಜನರು ಬಂದು ದೈವ ಜೀವನದಲ್ಲಿ ಭಾಗಿಗಳಾಗಬೇಕು; ಎಲ್ಲೆಲ್ಲೂ ಹರಡಿ ಚೆದರಿಹೋಗಿರುವ ದೈವಮಕ್ಕಳೆಲ್ಲಾ ಒಂದು ಗೂಡಬೇಕು-ಎಂಬುದು ದೈವೇಚ್ಛೆಯಾಗಿದೆ. ತಮ್ಮೊಂದಿಗೆ ಮಾನವರ ಈ ಐಕ್ಯವನ್ನೂ ಪಾಪಿಗಳಾದ ಮಾನವರ ಮಧ್ಯೆ ಸಹೋದರತ್ವವನ್ನೂ ಸಾಧಿಸಲು ದೇವರು ಮನುಕುಲದ ಚರಿತ್ರೆಯಲ್ಲಿ ಹೊಸ ಮತ್ತು ನಿಶ್ಚಿತ ಘಟನೆಯೊಂದು ಏರ್ಪಡಬೇಕೆಂದು ನಿರ್ಣಯಿಸಿದರು. ಅದೇ ದೇವರು ಮನುಷ್ಯರಾದ ಮಹಾ ಘಟನೆ (Incarnation) ದೇವರು ನಮ್ಮನ್ನು ಸೈತಾನನ ಆಳ್ವಿಕೆಯಿಂದ ರಕ್ಷಿಸಲು ಮತ್ತು ವಿಶ್ವವನ್ನು ತಮ್ಮೊಂದಿಗೆ ಸಂಧಾನ ಮಾಡಿಕೊಳ್ಳಲು ತಮ್ಮ ಏಕೈಕ ಪುತ್ರ ಯೇಸುಕ್ರಿಸ್ತರನ್ನು ಮನುಷ್ಯ ಸ್ವಭಾವದಲ್ಲಿ ಇಹಕ್ಕೆ ಕಳುಹಿಸಿದರು. ಈ ದೈವೋದ್ದೇಶವನ್ನು ಈಜೇರಿಸಲು ಯೇಸುಕ್ರಿಸ್ತರು ತಮ್ಮ ಸರದಿಯಲ್ಲಿ ಪಿತನಿಂದ ಪವಿತ್ರಾತ್ಮರನ್ನು ಕಳುಹಿಸಿದರು. ಪರಮ ತ್ರಿತ್ವದ ಮೂರನೇ ವ್ಯಕ್ತಿಯಾದ ಇವರು ಪ್ರೇಷಿತರ ಮೇಲೆ ಇಳಿದು ಬಂದ ದಿನ ದಿಂದ ಇಂದಿಗೂ ಎಂದೆಂದಿಗೂ ನಮ್ಮೊಂದಿಗೆ ಇದ್ದಾರೆ; ಧರ್ಮಸಭೆಯನು ಐಕ್ಯಪಡಿಸಿ ಸಜೀವಗೊಳಿಸುತ್ತಾರೆ. ಯೇಸುಕ್ರಿಸ್ತರಿಗಿದ್ದ ಅದೇ ಧರ್ಮ ಪ್ರಸಾರಕ ಉತ್ಸಾಹವನ್ನು ಕ್ರೈಸ್ತ ಭಕ್ತರ ಹೃದಯಗಳಲ್ಲಿ ತುಂಬುತ್ತಾರೆ.

ಕರ್ತ ಯೇಸು ತಮ್ಮ ಬಹಿರಂಗ ಜೀವನದ ಆದಿಯಲ್ಲಿ ಹನ್ನೆರಡು ಮಂದಿಯನ್ನು ಚುನಾಯಿಸಿಕೊಂಡರು. ತಮ್ಮ ನಿಧನ ಮತ್ತು ಪುನರುತ್ಥಾನದಿಂದ ನಮ್ಮ ರಕ್ಷಣಾ ಕಾರ್ಯವನ್ನು ಮುಗಿಸಿ, ಮೋಕ್ಷಾರೋಹಣವಾಗುವುದಕ್ಕೆ ಮುಂಚೆ ಧರ್ಮ ಸಭೆಯನ್ನು ರಕ್ಷಣೀಯ ಸಂಸ್ಕಾರವಾಗಿರುವಂತೆ ಸ್ಥಾಪಿಸಿದರು. ಪಿತನು ಪುತ್ರನನ್ನು ಕಳುಹಿಸಿದಂತೆ, ಪುತ್ರನು ಹನ್ನೆರಡು ಪ್ರೇಷಿತರನ್ನು ಪ್ರಪಂಚದ ಎಲ್ಲೆಡೆಗೂ ಕಳುಹಿಸಿದರು. "ಭೂಮಂಡಲದಲ್ಲೆಲ್ಲ ಹೋಗಿ ಸರ್ವಸೃಷ್ಟಿಗೂ ಸುಸಂದೇಶವನ್ನು ಬೋಧಿಸಿರಿ" (ಮಾರ್ಕುಸ್ 16/15) ಎಂದು ಅವರಿಗೆ ಆಜ್ಞಾಪಿಸಿದರು. ಯೇಸುಕ್ರಿಸ್ತರ ಈ ಸ್ಪಷ್ಟ ಆಜ್ಞೆಯ ಪ್ರಕಾರ ಹನ್ನೆರಡು ಮಂದಿ ಪ್ರೇಷಿತರ ಉತ್ತರಾಧಿಕಾರಿಗಳೂ ಇಡೀ ಧರ್ಮಸಭೆಯೂ ವಿಶ್ವಾಸವನು ಮತ್ತು ರಕ್ಷಣಾ ಬೋಧನೆಯನ್ನು ಪ್ರಚಾರ ಮಾಡುವ ಕರ್ತವ್ಯಕೊಳ್ಳಪಟ್ಟಿದ್ದಾರೆ.

ಈ ಧರ್ಮ ಪ್ರಚಾರಕ ಕರ್ತವ್ಯವನ್ನು ಸಂತ ರಾಯಪ್ಪರ ಉತ್ತರಾಧಿಕಾರಿಯ ಆಳ್ವಿಕೆಗೊಳಗಾದ ಧರ್ಮಾಧ್ಯಕ್ಷ ಮಂಡಲಿಯು ಇಡೀ ಧರ್ಮ ಸಭೆಯ ಪ್ರಾರ್ಥನೆ ಹಾಗೂ ಸಹಕಾರದಿಂದ ಈಡೇರಿಸಬೇಕು. ಈ ಕಾರ್ಯದ ನಿರ್ದಿಷ್ಟ ಗುರಿ ಯಾವುದೆಂದರೆ; ಶುಭಸಂದೇಶವನ್ನು ಬೋಧಿಸಿ, ಧರ್ಮಸಭೆ ಯಾವ ಜನಾಂಗದಲ್ಲಿ, ಯಾವ ಸಮುದಾಯದಲ್ಲಿ, ಇನ್ನೂ ಸ್ಥಾಪಿತವಾಗಿಲ್ಲವೋ ಅಲ್ಲಿ ಅದನ್ನು ಸ್ಥಾಪಿಸುವುದು.

**ಧರ್ಮಪ್ರಸಾರ ಕಾರ್ಯಕ್ಕಿರುವ ಕಾರಣಗಳು**

ದೇವರಿಗೂ ಮಾನವರಿಗೂ ನಡುವೆ ಏಕೈಕ ಮಧ್ಯಸ್ತರಾದ ಯೇಸುಕ್ರಿಸ್ತರ ಮುಖಾಂತರ ಮತ್ತು ಅವರ ಜ್ಞಾನ ಶರೀರವಾದ ಧರ್ಮಸಭೆಯ ಮುಖಾಂತರ "ಎಲ್ಲ ಜನರು ಸತ್ಯವನ್ನರಿತು ರಕ್ಷಣೆಯನ್ನು ಹೊಂದಬೇಕೆಂಬುದು" ದೈವೇಚ್ಛೆ. ಈ ದೈವೇಚ್ಛೆಯಲ್ಲೇ ಧರ್ಮ ಪ್ರಸಾರ ಕಾರ್ಯ ಕಲಾಪಗಳಿಗಿರುವ ಕಾರಣಗಳು ಅಡಗಿವೆ. ಎಂದೇ, ಪ್ರತಿಯೊಬ್ಬನು ಮನಪರಿವರ್ತನೆಯನ್ನು ಹೊಂದಿ ಯೇಸುಕ್ರಿಸ್ತರೊಂದಿಗೂ ಅವರ ಧರ್ಮಸಭೆಯೊಂದಿಗೂ, ವಿಶ್ವಾಸ ಹಾಗೂ ಸ್ನಾನದೀಕ್ಷೆಯ ಮೂಲಕ. ಒಂದೇ ಜ್ಞಾನಶರೀರವಾಗ ಬೇಕಾದುದು ಅಗತ್ಯ. ಆದರೆ ತಮ್ಮ ಸ್ವಂತ ತಪ್ಪಿಲ್ಲದೆ ಶುಭಸಂದೇಶವನ್ನು ಅರಿಯದ ಸುಮನಸ್ಕರನ್ನು ದೇವರು ತಮಗೆ ಮಾತ್ರ ತಿಳಿದ ವಿಧದಲ್ಲಿ ವಿಶ್ವಾಸಕ್ಕೆ ಕರೆತರಬಲ್ಲರು ಎಂಬು ದೇನೋ ನಿಜ. ವಿಶ್ವಾಸ ಮತ್ತು 'ಸ್ನಾನದೀಕ್ಷೆಯ ಅಗತ್ಯವನ್ನು ಯೇಸುಕ್ರಿಸ್ತರೇ ಸ್ಪಷ್ಟವಾದ ವಾಕ್ಯಗಳಲ್ಲಿ ವ್ಯಕ್ತಪಡಿಸಿದ್ದಾರೆ. ಧರ್ಮ ಪ್ರಸಾರಕ್ಕೆ ಮತ್ತೊಂದು ಕಾರಣ ಯಾವುದೆಂದರೆ- ಪ್ರೀತಿ. ಇದರಿಂದ ಧರ್ಮಸಭೆಯ ಸದಸ್ಯರು ದೇವರನ್ನು ಪ್ರೀತಿಸಿ, ಅವರ ಮಹಿಮೆಯನ್ನು ಹರಸುತ್ತಾರೆ; ಮತ್ತು ಇಹಪರ ಆಧ್ಯಾತ್ಮಿಕ ಐಶ್ವರ್ಯಗಳನ್ನು ಎಲ್ಲ ಮನುಷ್ಯರೊಂದಿಗೆ ಹಂಚಿಕೊಳ್ಳುತ್ತಾರೆ. ಕೊನೆಯದಾಗಿ ಇದೇ ಧರ್ಮ ಪ್ರಸಾರ ಕಾರ್ಯದಿಂದ ದೇವರಿಗೆ ಪೂರ್ಣ ಮಹಿಮೆ ಸಲ್ಲುತ್ತದೆ; ಯೇಸುಕ್ರಿಸ್ತರಲ್ಲಿ

**ದೇವರೇ ಸ್ನೇಹಿತರಿಂದ ರಕ್ಷಿಸು, ಶತ್ರುಗಳ ವಿಚಾರ ನಾನೇ ನೋಡಿಕೊಳ್ಳುತ್ತೇನೆ.**

ಪುನರ್ಜನ್ಮಿಸಿದ ಮನುಷ್ಯರು ದೇವರ ಏಕ ಪ್ರಜೆಯಾಗಿ, ಯೇಸುಕ್ರಿಸ್ತರ ಒಂದೇ ಜ್ಞಾನ ಶರೀರದಲ್ಲಿ ಐಕ್ಯವಾಗಿ, ದೇವರ ಮಹಿಮೆಯನ್ನು ಒಮ್ಮತ ದಿಂದ ಸಾರಿ, ಅವರನ್ನು "ನಮ್ಮತಂದೆ" ಎಂದು ಘೋಷಿಸುವಾಗ ದೇವರಿಗೆ ಆ ಮಹಿಮೆ ಸಲ್ಲುತ್ತದೆ.

ಧರ್ಮಪ್ರಸಾರಕ ಕಾರ್ಯಕ್ಕೂ ಮಾನವನ ಸ್ವಭಾವ, ಆಸೆ, ಹಾರೈಕೆಗಳಿಗೂ ಅನ್ಯೋನ್ಯ ಸಂಬಂಧವುಂಟು. ಸಹೋದರ ಪ್ರೀತಿ, ನಿಷ್ಕಪಟತನ ಮತ್ತು ಶಾಂತಿ ಭಾವನೆಯಿಂದ ಸಚೇತನಗೊಂಡು ನೂತನವಾದ ಮನುಕುಲಕ್ಕೆ ಯೇಸುಕ್ರಿಸ್ತರೇ ಆದಿ ಹಾಗೂ ಆದರ್ಶ ಎಲ್ಲ ಮನುಷ್ಯರು ತಮ್ಮ ನಿಜವಾದ ನೆಲೆ ಹಾಗೂ ಸಂಪೂರ್ಣ ಕರೆಯೆಂದು ಅರಸುವುದು, ಈ ನವ ಮನುಕುಲವನ್ನೇ. ಯಾರೂ ತನ್ನ ದೌರ್ಬಲ್ಯ ದಿಂದ, ಏಕಾಂತ ಮತ್ತು ದಾಸತ್ವವೆಂಬ ಬಂಧನದಿಂದ ತನ್ನಷ್ಟಕ್ಕೆ ತಾನೇ ಬಿಡಿಸಿಕೊಳ್ಳ ಲಾರನು. ಆದರ್ಶಕ, ಬೋಧಕ ವಿಮೋಚಕ, ರಕ್ಷಕ ಹಾಗೂ ಜೀವದಾತ ಯೇಸುಕ್ರಿಸ್ತರ ಅವಶ್ಯಕತೆ ಪ್ರತಿಯೊಬ್ಬನಿಗೂ ಇದೆ. ಅವರ ಸುಸಂದೇಶವು ಸ್ವಾತಂತ್ರ್ಯ, ಸಮೃದ್ಧಿ, ಐಕ್ಯ ಹಾಗೂ ಶಾಂತಿಯ ಸಿದ್ಧ ಸಾಧನವಾಗಿದೆ. ಯೇಸುಕ್ರಿಸ್ತರು ಜನಾಂಗದ ನಿರೀಕ್ಷೆಯೂ ರಕ್ಷಣೆಯೂ ಆಗಿದ್ದಾರೆ.

**ಧರ್ಮಪ್ರಸಾರದ ಅಂತ್ಯಕಾಲದ ಲಕ್ಷಣಗಳು**

ಕರ್ತ ಯೇಸುವಿನ ಎರಡನೆಯ ಆಗಮನದ ಮುನ್ನ ಸುಸಂದೇಶ ಬೋಧನೆ ಎಲ್ಲ ರಾಷ್ಟ್ರಗಳಿಗೂ ಮುಟ್ಟಬೇಕು. ಆಗ ಧರ್ಮಸಭೆ ನಾಲ್ಕು ದಿಕ್ಕುಗಳಿಂದ ಕೊಯಿಲಿನಂತೆ ದೇವರ ರಾಜ್ಯದಲ್ಲಿ ಒಟ್ಟುಗೂಡಿಸಲಾಗುವುದು. ಧರ್ಮಪ್ರಸಾರ ಕಾರ್ಯವೆಂದರೆ ದೈವ ಯೋಜನೆಯ ಪ್ರದರ್ಶನ ಹಾಗೂ ಪ್ರಪಂಚದಲ್ಲೂ ಚರಿತ್ರೆಯಲ್ಲೂ ಅದರ ಕಾರ್ಯಗತ, ಈ ಚರಿತ್ರೆಯಲ್ಲಿ ದೇವರು ಧರ್ಮಸಭೆಯ ಧರ್ಮ ಪ್ರಸಾರದ ಮುಖಾಂತರ ರಕ್ಷಣೆಯ ಚರಿತ್ರೆಯನ್ನು ಬಹಿರಂಗವಾಗಿ ಮುಗಿಸುತ್ತಾರೆ; ಮತ್ತು ತಮ್ಮ ಪುತ್ರ ಯೇಸುವಿನ ನಿತ್ಯಾನಂದದಲ್ಲಿ ಭಾಗಿಗಳಾಗಲು ಎಲ್ಲರನ್ನು ಆಹ್ವಾನಿಸುತ್ತಾರೆ. ಆದುದರಿಂದ ಧರ್ಮಪ್ರಚಾರ ಕಾರ್ಯ ಅಂತ್ಯಕಾಲದ ಪರಿಣತಿಯತ್ತ, ಅಂದರೆ ದೇವರ ಸ್ವರ್ಗೀಯ ನಗರದ ಬೆಳವಣಿಗೆ ಹಾಗೂ ಮಹಿಮೆಯತ್ತ ಸಾಗುತ್ತದೆ.

## ಅಧ್ಯಾಯ 2

## ಧರ್ಮ ಪ್ರಸಾರದ ಕಾರ್ಯಕಲಾಪಗಳು

ಮಾಡಬೇಕಾಗಿರುವ ಧರ್ಮಪ್ರಸಾರ ಕಾರ್ಯವು ಅಗಾಧವಾದುದು. ಏಕೆಂದರೆ ಇನ್ನೂ ಸುಸಂದೇಶವನ್ನು ಕೇಳದ ಜನರು ಎರಡುಲಕ್ಷ ಕೋಟಿ ಇದ್ದಾರೆ.

**ಕ್ರೈಸ್ತ ಸಾಕ್ಷಿ**

ಯೇಸು ಕ್ರಿಸ್ತರು ತಮ್ಮ ಕಾಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳಿಗೆ ಬದ್ಧರಾಗಿ ಮನುಷ್ಯರಾದರು. ಅಂತೆಯೇ ಧರ್ಮಸಭೆ ಪ್ರತಿಯೊಂದು ಜನ ಸಮೂಹಕ್ಕೂ ಅದರ ಮಧ್ಯೆ ಜೀವಿಸುವ ಅಥವಾ ಅದರಲ್ಲಿಗೆ ಕಳುಹಿಸಲಾ ಗಿರುವ ತನ್ನ ಮಕ್ಕಳ ಮುಖಾಂತರ ಸಾಕ್ಷಾತ್ ಇರಬೇಕು. ಸ್ನಾನದೀಕ್ಷೆಯ ಪುನರ್ಜನ್ಮಿಸಿ, ಪವಿತ್ರಾತ್ಮರಿಂದ ದೃಢೀಕರಣವನ್ನು ಪಡೆದ, ಪ್ರತಿಯೊಬ್ಬ ಕ್ರೈಸ್ತ ಭಕ್ತನು ತಾನು ಜೀವಿಸುವ ಜನಸಮೂಹದ ಮಧ್ಯೆ ಯೇಸುಕ್ರಿಸ್ತರಿಗೆ ಸಾಕ್ಷಿಯಾಗಿರಬೇಕು. ಅಂಥವನು ತನ್ನ ಸುತ್ತು ಮುತ್ತಲಿನ ಸನ್ನಿವೇಶದಲ್ಲಿ ಆಸಕ್ತಿಯುಳ್ಳವನಾಗಿರು ತ್ತಾನೆ. ದೇಶೀಯ ಸಂಸ್ಕೃತಿಯಲ್ಲಿ ಒಳಿತಾದದ್ದನ್ನೂ ಅಂದಚೆಂದವಾದದ್ದನ್ನೂ, ತನ್ನ ಸುತ್ತಮುತ್ತಲಿನ ಸ್ಥಳೀಯ ಧರ್ಮಗಳಲ್ಲಿರುವ ಸತ್ಯಾಂಸವನ್ನೂ ಮೆಚ್ಚಿ ಮಾನ್ಯ ಮಾಡಬೇಕು. ಅಂತೆಯೇ ಯೇಸುಕ್ರಿಸ್ತರ ಸಾಕ್ಷಿಯಾಗಿ ಜೀವಿಸಿ, ಅವರಂತೆ ತಾನಿರುವ ಜನಸಮೂಹದಲ್ಲಿ ಆಗುತ್ತಿರುವ ಆಳವಾದ ಮಾರ್ಪಾಡುಗಳನ್ನು ಗಣನೆಗೆ ತಂದುಕೊಂಡು, ತನ್ನ ಆದರ್ಶ ಜೀವನದಿಂದಲೂ ಸಹೋದರ ಸಂವಾದದಿಂದಲೂ ನೆರೆಹೊರೆಯವರು ಸತ್ಯ ಹಾಗೂ ದೈವಪ್ರೇರಿತ ಪ್ರೀತಿಯನ್ನು ಅಧಿಕಾಧಿಕವಾಗಿ ಅರಸುವಂತೆ ಮಾಡಬೇಕು. ದೇವರು ನಮ್ಮನ್ನು ಯಾವಪ್ರೀತಿಯಿಂದ ಪ್ರೀತಿಸುತ್ತಾರೋ ಮತ್ತು ನಾವು ಯಾವ ಪ್ರೀತಿ ಯಿಂದ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಆಜ್ಞಾಪಿಸಿದ್ದಾರೋ, ಆ ಪ್ರೀತಿಪ್ರೇರಕರಾಗಿರ ಬೇಕು ಕ್ರೈಸ್ತೇತರರ ನಡುವೆ ಇರುವ ಕ್ರೈಸ್ತಭಕ್ತರು. ಈ ಕ್ರಿಸ್ತೀಯ ಪ್ರೀತಿ ಯಾವ ದೇಶೀಯ ಸಾಮಾಜಿಕ ಅಥವ ಮತೀಯ ತಾರತಮ್ಯ ವಿಲ್ಲದೆ, ಎಲ್ಲರನ್ನೂ ಅವಲಂಬಿಸುತ್ತದೆ. ಸಂಭವನಿಯ, ಕೃತಜ್ಞತೆಯನ್ನಾಗಲೀ ನಿರೀಕ್ಷಿಸದೆ, ಸಕಲರೊಂದಿಗೆ ಸಾಮಾಜಿಕ ಹಾಗೂ ಆರ್ಥಿಕ ಏಳಿಗೆಗಾಗಿ ಸಹಕರಿಸುತ್ತದೆ. ಮಕ್ಕಳ ಹಾಗೂ ತರುಣರ ವಿದ್ಯಾಭ್ಯಾಸಕ್ಕಾಗಿ ವಿಶೇಷ ಗಮನವನ್ನೀಯುತ್ತದೆ. ಅಲ್ಲದೆ ಹಸಿವು, ಅಜ್ಞಾನ ಮತ್ತು ರೋಗರುಜಿನವನ್ನು ನಿರ್ಮೂಲ ಮಾಡಲು ಬೆಂಬಲವನ್ನೀಯುತ್ತದೆ. ಬಡಬಗ್ಗರ ಮತ್ತು ದುಃಖಿಕ್ಕೀಡಾದವರ ಮೇಲೆ ವಿಶೇಷ ಮಮತೆಯನ್ನು ತೋರಿಸುತ್ತದೆ. ಯೇಸುಕ್ರಿಸ್ತರ ಅನುಯಾಯಿಗಳು ಇತರರ ಜೀವನ ಮತ್ತು ಕೆಲಸ ಕಾರ್ಯಗಳಲ್ಲಿ ಅವರೊಂದಿಗೆ ಅನ್ಯೋನ್ಯ ವಾಗಿರುತ್ತಾರೆ. ಬಹಿರಂಗವಾಗಿ ಯೇಸುಕ್ರಿಸ್ತರ ಶುಭ ಸಂದೇಶವನ್ನು ಸಾರಲಾಗದಿದ್ದರೂ, ಅವರಿಗೆ ಯೇಸುವಿನ ನೈಜಸಾಕ್ಷಿಗಳಾಗಿದ್ದು ಅವರಾತ್ಮರಕ್ಷಣೆಗಾಗಿ ದುಡಿಯುವ ನಂಬಿಕೆಯುಳ್ಳವರಾಗಿರುತ್ತಾರೆ. ಮಾನವನ ಕೇವಲ ಐಹಿಕ ಏಳಿಗೆ ಮತ್ತು ಸಮೃದ್ಧಿಗಾಗಿ ಮಾತ್ರ ದುಡಿಯದೆ, ಯೇಸುಕ್ರಿಸ್ತರು ಶೃತಿಸಿದ ಧಾರ್ಮಿಕ ಮತ್ತು ನೈತಿಕ ಸತ್ಯಗಳನ್ನು ಅವರಿಗೆ ಬೋಧಿಸಿ ಅವರ ಘನತೆಯನ್ನೂ ಸಹೋದರ ಸ್ನೇಹ ಕೊಂಡೊಯ್ಯುವ ಮಾರ್ಗವನ್ನು ವಿಸ್ತರಿಸಿ, ದೈವಪ್ರಿತಿಯಿಂದಲೂ ಪರಪ್ರೀತಿಯಿಂದಲೂ ಅವರ ರಕ್ಷಣೆಯನ್ನು ಅರಸುತ್ತಾರೆ.

*Kiran D'souza*
ತೃಪ್ತಿ ಕೇಟರಿಂಗ್ ಸರ್ವಿಸಸ್
Ph. : 08262-228122
Cell : 94485-54697
92428-09915
**THRUPTHI CATERING SERVICES**

*Gate way of Healthy food*

UPPALLI, CHIKMAGALUR.

# ಯುವಕರೇ.... ಹಳ್ಳಿಗೆ ಯಾವಾಗ ಬರುತ್ತೀರಿ..?

ಆರ್. ಜ್ಞಾನಪ್ರಕಾಶ್, (ಮೈಸೂರು)
ಶಿಕ್ಷಕರು, ಸಂತ ಮೇರಿ ಪ್ರೌಢಶಾಲೆ, ಮಾರ್ಟನಹಳ್ಳಿ,
ಚಾಮರಾಜನಗರ ಜಿಲ್ಲೆ, - 571444,
ಕೊಳ್ಳೆಗಾಲ ತಾಲ್ಲೂಕು.

ವಿಜ್ಞಾನ ಜ್ಯೋತಿಯನ್ನು ಬೆಳಗಿಸುತ್ತಿರುವ ಸನ್ಮಾತ್ಮೀಯ ಓದುಗರೆ ಕ್ರೈಸ್ತರಿಗೆ ಪವಿತ್ರ ಯಾತ್ರಾ ಸ್ಥಳ ಎಂದರೆ ಯಾವುದು ? ಎಂಬ ಪ್ರಶ್ನೆಗೆ ಉತ್ತರ 'ಇಸ್ರೇಲ್' ಎಂದು ಎಲ್ಲರಿಗೆ ಗೊತ್ತಿದೆ. ಯೋವಾನ್ನನಿಂದ ಸ್ನಾನ ದೀಕ್ಷೆ ಪಡೆಯಲು ಯೇಸು ಸ್ವಾಮಿ ಗಲೀಲೇಯದಿಂದ ಹೊರಟು ಜೋರ್ಡಾನ್ ನದಿಗೆ ಬಂದರು, ಯೇಸು ದೀಕ್ಷಾಸ್ನಾನ ಪಡೆದು ನೀರಿನಿಂದ ಮೇಲಕ್ಕೆ ಬಂದಿದ್ದೇ ಆಕಾಶವು ಪಕ್ಕನೆ ತೆರೆಯಿತು. ದೇವದಾತ್ಮ ಪಾರಿವಾಳ ರೂಪದಲ್ಲಿ ಯೇಸುವಿನ ತಲೆಯ ಮೇಲೆ ಇಳಿದು ಬಂದು ನಿಂತಿತು. ಆಕಾಶದಿಂದ ದೈವವಾಣಿ ''ಇವನೇ ನನ್ನ ಪುತ್ರ ನನಗೆ ಪರಮಪ್ರಿಯನು, ನನ್ನ ಅಪಾರ ಮೆಚ್ಚುಗೆಗೆ ಪಾತ್ರನು'', ಎಂದು ಘಂಟಾ ಘೋಷವಾಗಿ ಉದ್ಗರಿಸಿತು. ಮತ್ತಾಯ 3:13-17. ಇಂತಹ ಜೋರ್ಡಾನ್ ಯೇಸುವು ದೇವಕುಮಾರನೆಂದು ಲೋಕಕ್ಕೆ ಅನಾವರಣಗೊಂಡಿದ್ದು ಈ ಪವಿತ್ರ ನದಿಯಿಂದಲೇ ಜೋರ್ಡಾನ್ ರಾಜಧಾನಿ ಅಮ್ಮಾನ್‌ನಿಂದ ಡೆಡ್ ಸೀ ಮಾರ್ಗವಾಗಿ ಇಸ್ರೇಲ್ ಗಡಿಯನ್ನು ದಾಟುತ್ತಿದ್ದರೆ, ಕಣ್ಣಿಗೆ ರಾಚುವ ಮರಳುಗಾಡು ಆಸುಪಾಸಿನಲ್ಲಿ ಎಲ್ಲೂ ಮರಗಳು ಸಸಿಗಳು ಕಾಣಸಿಗುವುದಿಲ್ಲ. ಹಸಿರಂತೂ ಹಸೀ ಸುಳ್ಳು ಅಲ್ಲಿಯ ಪ್ರದೇಶಕ್ಕೆ ನಿರುಪಯುಕ್ತ ಮರಳು ಹನಿ ನೀರಿನ ಲವಶೇಷವೂ ಇಲ್ಲದ ನಿರ್ದಯಿ ಭೂಮಿ.

ಅಲ್ಲಿಂದ ಪ್ರಯಣ ಬೆಳೆಸಿದರೆ ಕನಿಷ್ಠ ಎರಡು ಗಂಟೆಯ ನಂತರ ನಿಮಗೆ ಸಿಗುವುದು ಕ್ರಿಸ್ತನ ಜನ್ಮ ಸ್ಥಾನ ಜೆರುಸಲೇಮ್. ನಿಮಗೆ ಗೊತ್ತಿದೆ ಇಸ್ರೇಲಿಯನ್‌ರು ಎಂತಹ ಪರಾಕ್ರಮಿಗಳೆಂದು, ಕ್ಷಣಾರ್ಧದಲ್ಲಿ ವಿಶ್ವದ ಯಾವುದೇ ಸ್ಥಳವನ್ನು ಕುಂತು ಕುಂತಲ್ಲೇ ಸುಟ್ಟು ಭಸ್ಮಮಾಡುವ ಆಧುನಿಕ ತಂತ್ರಜ್ಞಾನ ಅವರಲ್ಲಿದೆ. ವಿಶ್ವದಲ್ಲೇ ಅತ್ಯಂತ ಪರಾಕ್ರಮಿಗಳು ಹಾಗೂ ಧೈರ್ಯಶಾಲಿಗಳು. ಭಯೋತ್ಪಾದನೆ ವಿರುದ್ಧ ಸೆಣೆಸುವ ಛಲ ಇಂದಿಗೂ ಮುಸ್ಲಿಂ ಭಯೋತ್ಪಾದಕರು ಇಸ್ರೇಲಿಯನ್ನರನ್ನು ಕಂಡು ಇಲಿ ಬಿಲದಲ್ಲಿ ಹೊಕ್ಕುವಂತೆ ಹೊಕ್ಕಿಬಿಡುತ್ತಾರೆ. ಸೈನವನ್ನು ಹಿಮ್ಮೆಟಿಸಲಾಗದು. ಇಂದಿಗೂ ವೈರಿಗಳಿಗೆ ಸಿಂಹ ಸ್ವಪ್ನವಾಗಿಯೇ ಉಳಿದಿದ್ದಾರೆ. ಇಸ್ರೇಲಿಯನ್ನರು, ಬಹುಶಃ ಕ್ರಿಸ್ತನ ಕಪಾಶೀರ್ವಾದವಿದೆಯೆಂದು ನಾನು ಬೇರೆ ಹೇಳಬೇಕಿಲ್ಲಾ ನೋಡಿ. ಕೇವಲ ಸೈನ್ಯದಲ್ಲಿ ಮಾತ್ರವಲ್ಲದೇ ಬುದ್ಧಿವಂತಿಕೆಯಲ್ಲಿ ತಂತ್ರಜ್ಞಾನ, ಕೃಷಿ ಕ್ಷೇತ್ರದಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿದೆ. ಇಸ್ರೇಲ್‌ನ 400 ಕಿ.ಮೀ. ವ್ಯಾಪ್ತಿಯಲ್ಲಿ ಹಸಿರೇ ಕಾಣದ ದೇಶ, ಬರಡು ಭೂಮಿಯಾಗಿದ್ದರೂ ಕೃಷಿಯಲ್ಲಿ ಹೇಗೆ ವೈಜ್ಞಾನಿಕವಾಗಿ ಹೇಗೆ ಮುಂದುವರೆದಿದೆ ಎಂದ 60ರ ದಶಕದಲ್ಲೇ ಜನ ನಾಯಕರಾದ ಜಯಪ್ರಕಾಶ್ ನಾರಾಯಣ್ ಮತ್ತು ರಾಮ ಮನೋಹರ ಲೋಹಿಯಾ ಇಸ್ರೇಲ್‌ನಿಯರ ಕೃಷಿ ಪ್ರಗತಿ ಕಂಡು ನಿಬ್ಬೆಸ ಬೆರಗಾಗಿದ್ದರು. ಆಗಲೇ ನಾವು ಅವರು ಅನುಸರಿಸುತ್ತಿದ ಮಾದರಿಯನ್ನು ಅಳವಡಿಸಿಕೊಳ್ಳಬೇಕೆಂದು ಮಾಜಿಮುಖ್ಯ ಮಂತ್ರಿ ಮತ್ತು ಇಂದಿನ ವಿದೇಶಾಂಗ ಸಚಿವರಾದ ಶ್ರೀ ಎಸ್. ಎಂ. ಕೃಷ್ಣರವರಿಗೆ ಕರೆಯಿತ್ತಿದ್ದರು!. ಆಗ ಕೃಷ್ಣರವರು 'ಮದ್ದೂರಿನಲ್ಲಿ ಎರಡು ಸಲ ಪಿಕಾಸಿಯಿಂದ ನೆಲವನ್ನು ಮೀಟಿದರೆ ನೀರು ಚಿಮ್ಮುತ್ತದೆ ಅಂತ ಫಲವತ್ತಾದ ಜಾಗದಲ್ಲಿ ನಾವು ಕೃಷಿ ಮಾಡುತ್ತಿದ್ದೇವೆ'' ಎಂದು ನಮ್ಮ ಮಣ್ಣಿನ ಸೊಗಡನ್ನು ಹಾಸ್ಯ ಚಟಾಕಿಯಿಂದ ಉತ್ತರಿಸಿದರು. ಹೀಗಿದ್ದರೂ ನಾವು ಇಸ್ರೇಲ್‌ನಿಂದ ಬಹಳ ಕಲಿಯ ಬೇಕಾದುದು ಬಹಳಷ್ಟಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇಸ್ರೇಲ್ ಮತ್ತು ನಮ್ಮ ಕೃಷಿ ಸಂಪರ್ಕಕ್ಕೆ ಭಾಷ್ಯ ಬರೆದಂತಿತ್ತು. ಗಮನಿಸಿ, ಇಸ್ರೇಲ್‌ರು ತಮ್ಮ ತಾಯಿನಾಡಿಗೆ ಎಂತಹ ತ್ಯಾಗಕ್ಕೂ ಸಿದ್ಧನಾಗಿರುತ್ತಾರೆ. ಅಲ್ಲಿಯ ಪ್ರಜೆ ಕಳೆದ 50 ವರ್ಷಗಳಿಂದ ಭೀಕರ ಯುದ್ಧದಲ್ಲಿ ನಿರತನಾಗಿದ್ದು ತಾಯ್ನಾಡಿನ ಒಂದು ಅಂಗುಲ ಜಾಗವನ್ನು ಬಿಟ್ಟುಕೊಟ್ಟಿಲ್ಲ. ಇಸ್ರೇಲ್‌ನ ಖ್ಯಾತ ಚಿಂತಕ ತವೋರ್ ಅರ್ನಿಜ್ ಹೀಗೆನ್ನುತ್ತಾರೆ. 'ಇಸ್ರೇಲ್ ತಮ್ಮ ದೇಶದಲ್ಲಿ ಅತಿಯಾಗಿ ಪ್ರೀತಿಸುವುದುದಿದ್ದರೆ ತಮ್ಮದೇಶದ ಮಣ್ಣು ಮಾತ್ರ''. ಅರ್ಥಾತ್ 'ಮಣ್ಣಿನ ಮಕ್ಕಳು' ಮಣ್ಣಿನ ಸಂರಕ್ಷಣೇ ಕೃಷಿ ಕ್ಷೇತ್ರಕ್ಕೆ ಯಾವ ರೀತಿ ತನಗೆ ಮತ್ತು ವಿಶ್ವಕ್ಕೆ ಕೊಡುಗೆ ನೀಡಿದೆ ಎಂಬುದರ ಸೂಕ್ಷ್ಮನೋಟ 'ಸ್ನೇಹಜ್ಯೋತಿಯಲ್ಲಿ ಪ್ರಪಪಂಚದಲ್ಲೇ ಅತ್ಯಂತ ಮುಂದುವರೆದ ದೇಶ ಎಂದರೆ ಅದು ಇಸ್ರೇಲ್ ಅತ್ಯಂತ ಬೃಹತ್ ಪ್ರಮಾಣದ ಸಂಶೋಧನಾ ಘಟಕಗಳನ್ನು ಹೊಂದಿರುವುದರಿಂದ ಜಗತ್ತಿನಲ್ಲಿ ಯಾವ ದೇಶಗಳು ಒಂದಲ್ಲಾ ಒಂದು ರೀತಿ ಕೃಷಿ ಕ್ಷೇತ್ರದಲ್ಲಿ ಮಹತ್ ಸಾಧನೆ ಮಾಡಿದ್ದಾರೆಂದರೆ ಅದು ಇಸ್ರೇಲನ ಸಹಯೋಗವನ್ನು ಪಡದೇ ಸಾಧನೇ ಗೈಯಿದಿದೆ. ಕಳೆದ 30 ವರ್ಷಗಳ ಅವಧಿಯಲ್ಲಿ ಕರ್ನಾಟಕವೊಂದೇ 18 ಬಾರಿ ಅಲ್ಲಿಗೆ ಭೇಟಿ ನೀಡಿದೆ. ಭಾರತ ಸರ್ಕಾರ ಪ್ರತಿ ವರ್ಷ ಏನಿಲ್ಲ ಎಂದರೆ ಅಲ್ಲಿನ ಕೃಷಿ ಪದ್ಧತಿಯ ಅಧ್ಯಯನಕ್ಕಾಗಿ ಕನಿಷ್ಠ ಹತ್ತು ನಿಯೋಗಗಳನ್ನು ಕಳುಹಿಸುತ್ತಿದೆ. ಪ್ರತೀ ವರ್ಷ ಕೃಷಿ ವಿಶ್ವವಿದ್ಯಾಲಯದಿಂದ ಇಸ್ರೇಲ್‌ಗೆ ಹೋಗುವವರ ಅಧ್ಯಾಪಕರ, ಸಂಶೋಧನಾರ್ಥಿಗಳ ವಿದ್ಯಾರ್ಥಿಗಳ ಸಂಖ್ಯೆ ಲೆಕ್ಕಕ್ಕಿಲ್ಲ.

ಅಂದಹಾಗೆ ಇಸ್ರೇಲ್‌ನ ಅಂತಹ ವಿಶೇಷತೆ ಏನು ?

ಈ ದೇಶದ ಹಲವು ಕಡೆ ಇರುವ ಮಣ್ಣಿನಲ್ಲಿ ಪಾಪಸು ಕಳ್ಳಿಯೂ ಬೆಳೆಯದಂತಹದ್ದು. 68% ರಷ್ಟು ಮರುಭೂಮಿಯಿಂದ ಭೂ ಪ್ರದೇಶದಿಂದ ಆವೃತವಾಗಿದೆ. ದೇಶದ 2 ಕಡೆ ಸಮುದ್ರ, ಡೆಡ್‌ಸೀಯಲ್ಲಿ ಯಾವ ಜೀವರಾಶಿಗಳು ಕಂಡು ಬಂದಿಲ್ಲ. ದಕ್ಷಿಣ ಭೂ ಪ್ರದೇಶವೆಲ್ಲ ಬೆಂಗಾಡು ಅಲ್ಲಿಯ ಹವಾಮಾನವಂತೂ ಕೃಷಿಗೆ ಯೋಗ್ಯವಲ್ಲ. ವರ್ಷದಲಲ್ಲಿ ಒಂದು ತಿಂಗಳು ಸರಾಸರಿ ಮಳೆ ಬಂದ್ರೆ ಹೆಚ್ಚು. ನೀರಿನ ಪಸೆ, ನದಿಯ ಹಸೆ ಕಾಣುವುದಿಲ್ಲ. ದೊರೆಯುವ ನೀರು ಸವಳುಪ್ಪು 25% ಮಾತ್ರ ಕೃಷಿಗೆ ಯೋಗ್ಯವಾಗಿರುವಂತಹ ಸಂದರ್ಭದಲ್ಲಿ ಇಂದು ಕೃಷಿ ಉತ್ಪನ್ನ, ದವಸ, ಧಾನ್ಯ, ಕಾಳು, ಹಣ್ಣು, ಹಂಪಲು, ಹೈನು, ಮಾಂಸ, ತರಕಾರಿ, ಇವೆಲ್ಲವನ್ನು ತಾವೇ ಬೆಳೆದು ಪರದೇಶಗಳಿಗೂ ರಫ್ತು ಮಾಡುತ್ತದೆ. ನಮ್ಮಲ್ಲಿ ಈ ಹಿಂದೆ ಸ್ನೇಹಜ್ಯೋತಿಯಲ್ಲಿ ತಿಳಿಸಿದೆ. ರೈತರು, ಆತನ ಮಕ್ಕಳು ನಗರದ ಕಡೆ

ಮುಖಮಾಡುತ್ತಿದ್ದಾರೆ. ನಮ್ಮಲ್ಲಿ ಹೊಲವೂ ಇಲ್ಲ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಬೆಳೆಯುತ್ತಿಲ್ಲ.

ದಿನೇ ಕೃಷಿ ಭೂಮಿ ತನ್ನ ಕಳೆ ಫಲವತ್ತೆಯನ್ನು ಕಳೆದುಕೊಳ್ಳುತ್ತಿದ್ದರೆ ನಮ್ಮಲ್ಲಿ ಅಷ್ಟೂ ಅಲ್ಲಾ ಜಗತ್ತಿನಾದ್ಯಂತ ಕೃಷಿ ಭೂಮಿ ನಿಧಾನವಾಗಿ ಕ್ಷೀಣಿಸುತ್ತಿದ್ದರೆ ಇಸ್ರೇಲ್‌ನಲ್ಲಿ ಮಾತ್ರ 1948ರಲ್ಲಿ ಸ್ವತಂತ್ರವಾದಾಗ ನಾಲ್ಕು ಎಕರೆಯಷ್ಟು ಪ್ರದೇಶದಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿದ್ದು ಇಂದು 10 ಲಕ್ಷ ಎಕರೆಗೆ ವಿಸ್ತರಿಸಿದೆ. ಅಲ್ಲಿಯ ಪದವೀಧರರು ಅನ್ಯ ಕಸುಬಿನಲ್ಲಿ ತೊಡಗಿದರೂ ತಮ್ಮ ಮೂಲ ತಾಯಿ ನೆಲವನ್ನು ಮರೆತಿಲ್ಲ. ದಿನಕ್ಕೆ ಕೃಷಿ ಕಾರ್ಯಕ್ಕೆಂದು ಇಂತಿಷ್ಟು ವೇಳೆಯನ್ನು ನಿಗದಿ ಗೊಳಿಸಿಕೊಂಡು ಮೊದಲು ಕೃಷಿ ನಂತರ ಇತರೆ ಕಾರ್ಯ ಇದನ್ನೇ ನಾವು ಸ್ವಾಮಿ ಕಾರ್ಯ ಸ್ವಕಾರ್ಯ ಎನ್ನಬಹುದೋ...., ಇಸ್ರೇಲಯನ್ನರು ಮೊದಲು ಕಂಡು ಕೊಂಡ ಮಾರ್ಗವೆಂದರೆ ನೀರನ್ನು ಸಂಸ್ಕರಿಸುವ ವಿಧಾನ, ಸವಳು ನೀರನ್ನೂ ಸಿಹಿ ನೀರನ್ನಾಗಿ ಪರಿವರ್ತಿಸಿ. ಒಂದೊಂದು ಹನಿಯನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಾರೆ. ಹನಿ ನೀರಾವರಿ, ಸಿಂಚನ ನೀರಾವರಿ ಅವರಲ್ಲಿ ಸರ್ವೇ ಸಾಮಾನ್ಯ. (Drip & Sprinkle Irrigation) ಜಗತ್ತಿನ 130 ದೇಶಗಳು ಈ ನೀರಾವರಿ ವಿಧಾನವನ್ನು ಅನುಸರಿಸುತ್ತಿದ್ದು ಕೃಷಿ ಉಪಕರಣಗಳು ಈ ದೇಶದಲ್ಲಿ ಸಿಗುವಷ್ಟು ಬೇರೆಯಾವ ದೇಶದಲ್ಲಿ ಬಹುಶ ಸಿಗಲಾರದೇನೋ... ಮರಹತ್ತಲು, ಭೂಮಿ ಊಳಲು, ಮಣ್ಣು ಅಗೆಯಲು, ಸಿಪ್ಪೆ ಬಿಡಿಸಲು, ಬಿತ್ತಲು, ಫಸಲು, ಕ್ಯುಯಲು, ರಾಶಿ ಹಾಕಲು, ಪ್ರತಿಯೊಂದು ಯಂತ್ರ / ರೋಬಾರ್ಟ್‌ಗಳಿಂದಲೇ ಇಲ್ಲಿ ಮತ್ತೊಂದು ವಿಶೇಷವೇನೆಂದರೆ ಭೂಮಿಯೊಳಗೆ ನೀರನ್ನು ಹರಸಿ ನೇರವಾಗಿ ಬೇರುಗಳಿಗೆ ನೀರನ್ನು ಉಣಿಸುವುದು. (root watering) ಪದ್ಧತಿಯನ್ನು ಅಭಿವೃದ್ಧಿಪಡಿಸಿದೆ. ಜೆರೂಸಲೇಮ್ ಟೆಲ್ ಅವಿವ್‌ಗೆ ಹೋಗುವ ಮಾರ್ಗ ಮಧ್ಯದ ಇಕ್ಕೆಲಗಳಲ್ಲಿ ಗುಡ್ಡಗಳ ನಡುವೆ ಹಾವು ಸರಿದು ಹೋಗುವಂತೆ ಪೈಪಗಳು ಹಾಸಿಕೊಂಡಿದೆ. ಶೀತ ಪ್ರದೇಶಗಳಲ್ಲಿ ಹಣ್ಣು ಹಂಪಲುಗಳನ್ನು ಬೆಳೆಯುತ್ತಾರೆ. ಎಲ್ಲೆಡೆ ಗ್ರೀನ್ ಹೌಸ್‌ಗಳನ್ನು ಸ್ಥಾಪಿಸಿದ್ದಾರೆ. ಒಂದೊಂದು ಗ್ರೀನ್ ಹೌಸ್ 4 ಕಿ.ಮೀ. ಉದ್ದದಾಗಿರುತ್ತದೆ. ಉಷ್ಣತೆಯನ್ನು ಇನ್ನಿತರ ಹವಾಮಾನದ ಅಂಶಗಳನ್ನು ಅಲ್ಲಿ ಮಾನವ ಹಸಿರು ಮನೆಯಲ್ಲಿ ನಿಯಂತ್ರಿಸುತ್ತಾನೆ. ತರಕಾರಿ, ಗೋಧಿ ಇತರ ದವಸ ಧಾನ್ಯವನ್ನು ಬೆಳೆಯುತ್ತಾರೆ. ಇಸ್ರೇಲ್‌ನರ ಪ್ರತಿ ಮನೆಯಲ್ಲಿ ನಿಂಬೆ, ಕಿತ್ತಳೆ ಹಣ್ಣುಗಳ ಮರಗಳನ್ನು ನೋಡಬಹುದು.

ಕೃಷಿ, ಹೈನುಗಾರಿಕೆ ಒಂದೇ ನಾಣ್ಯದ ಎರಡು ಮುಖಗಳಿದಂತೆ. ಇವೆರಡರ ಸಮತೋಲನ ಕಾಯ್ದುಕೊಂಡರೆ ದೇಶ ಸುಭೀಕ್ಷವಾಗಿರುವುದರಲ್ಲಿ ಸಂದೇಹವಿಲ್ಲ. ಅಲ್ಲಿಯ ಜಾನುವಾರುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪೋಷಿಸಲಾಗುತ್ತದೆ. ಕುರಿಯ ಹಾಲನ್ನು ಅಧಿಕ ಪ್ರಮಾಣದಲ್ಲಿ ರಫ್ತು ಮಾಡುವ ಪ್ರಮುಖ ದೇಶಗಳಲ್ಲಿ ಇಸ್ರೇಲ್ ಕೂಡ ಒಂದು. ಕುರಿ, ಕೋಳಿ, ದನದ ಮಾಂಸದ ರಫ್ತಿನಲ್ಲೂ ಮುಂಚೂಣಿಯಲ್ಲಿರುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪುಷ್ಪೋಧ್ಯಮದಲ್ಲಿ ಮಾಡಿದ ಸಾಧನೆ ಅಸಮಾನ್ಯ ಲಿಲ್ಲಿ, ಟುಲಿಪ್, ಆರ್ಕಿಡ್‌ನಂತಹ ಹೂವುಗಳು ಯುರೋಪಿನ ದೇಶಗಳಿಗೆ ರಫ್ತಾಗುತಿದೆ.

ಅಮೇರಿಕಾ ಮತ್ತು ಇಸ್ರೇಲ್ ಸಹಭಾಗಿತ್ವದಲ್ಲಿ ಸೆಪ್ಟೆಂಬರ್ 6, 2011 ರಾಷ್ಟ್ರೀಯ ವಿಜ್ಞಾನ ಮತ್ತು ಇಂಜಿನೀಯರಿಂಗ್ ಅದರಲ್ಲೂ ತಳಿ ತಂತ್ರಜ್ಞಾನದಲ್ಲಿ ಪರಸ್ಪರ ಅನುದಾನಕ್ಕೆ ಸಹಿಹಾಕಿದೆ ಇದರಿಂದ ಮತ್ತಷ್ಟು ಕೃಷಿ ತಳಿಯ ಅಭಿವೃದ್ಧಿಗೆ ಇಂಬು ನೀಡುವಂತಾಗಿದೆ. ಕೃಷಿ ಚಟುವಟಿಕೆ ಯೋಜನೆ ಆಹಾರ ರಕ್ಷಣೆ, ಕೃಷಿ ಅಭಿವೃದ್ಧಿ ಗೊಬ್ಬರದ ಬಳಕೆ, ಬೆಳೆ ಉತ್ಪಾದನೆ, ರಕ್ಷಣಾ ವಿಧಾನ, ವಿವಿಧ ಅನಪೇಕ್ಷಿತ ಪ್ರಕೃತಿಯ ವಿಕೋಪಗಳ, ರೋಗಗಳ ನಡುವೆ ಬೆಳೆಯು ಹೇಗೆ ನಿರೋಧಿಸಬಲ್ಲದು ಎಂಬುದರ ಬಗ್ಗೆ ಈ ಯೋಜನೆ ಚಾಲನೆಯಲ್ಲಿದೆ.

ಇಂತಹ ನೂರಾರು ಯೋಜನೆಗಳು, ಪ್ರಗತಿಗಳು ಇಸ್ರೇಲ್ ಅಳವಡಿಸಿಕೊಂಡು ತನ್ನ ಅನ್ನವನ್ನು ಸಂದಿಗ್ಧ ಭೂಮಿಯಲ್ಲಿ ಬೆಳೆಯುತ್ತಿದೆ. ನಮ್ಮ ಭಾರತ ಕೃಷಿ ಪ್ರಧಾನ ದೇಶ ನಮಗಿನ್ನು ಕೃಷಿ ಕ್ಷೇತ್ರದಲ್ಲಿ ಲಾಭದಾಯಕವಿಲ್ಲ ಮಳೆ ಕೈಕೊಟ್ಟಾಗ ಕರ್ನಾಟಕದಲ್ಲಿ ನೀರಿಲ್ಲದ ಪರಿಸ್ಥಿತಿಯಲ್ಲಿ ಕಾವೇರಿ ಪ್ರಮಾದ ಪ್ರಾರಂಭ. ಸಸ್ಯಗಳಿಗೆ ರೋಗ ಒಳ್ಳೆಯ ಫಸಲು, ಇಲ್ಲಿ ಒಳ್ಳೆಯ ರೇಟು ಇದ್ದಾಗ ಬೆಳೆ ಇಲ್ಲ.

11.10.12 ಬೆಳಿಗ್ಗೆ 6.20 ರ ಸುದ್ದಿ, ಸಮಯ ನ್ಯೂಸ್ (24X7) ಹಂಪಿ ಹೊಸಪೇಟೆ ಕಮಲಾದೇವಿ ಕೆರೆ, ಪ್ರೌಢದೊರೆಯರಾದ ಕೆರೆ ಕೃಪೆಗೆ 15,200ಎಕರೆ 420 ವಿಸ್ತೀರ್ಣದ ಈ ಕೆರೆ ಭೂಗಳ್ಳರ ಪಾಲಾಗಿದೆ.)

ಇರುವ ಅನ್ನ ಭೂಮಿ ಆಹಾಕಾರ ಭೂಗಳ್ಳರ ಪಾಲುಗುತ್ತಿದೆ. ಕಾನೂನು ಕಠಿಣವಾದರೂ ಕಳ್ಳರು ಕಾನೂನು ಕಣ್ಣಿಗೆ ಮರೆಚುವುದರಲ್ಲಿ ನಿಸ್ಸೀಮರು.

ನಾವು ಇನ್ನೂ ಬೆಳೆಯಬೇಕು ಇಸ್ರೇಲ್‌ನ ಮಾದರಿಯನ್ನಿಟ್ಟು ಕೊಂಡು ಕೃಷಿ ಕ್ಷೇತ್ರದಲ್ಲಿ ಜಗತ್ತ್ ನಮ್ಮನ್ನು ಮಾದರಿಯನ್ನಾಗಿಸುವ ರೀತಿಯಲ್ಲಿ ನಾವು ಬೆಳೆಸಬೇಕು ಬೆಳೆಯಬೇಕು.

ಸುಸಂಸ್ಕೃತಿಯಲ್ಲಿ ಭಾರತವನ್ನು ಮೀರಿಸುವವ ರಿಲ್ಲ ಹಾಗೆಯೇ ಕೃಷಿಯಲ್ಲೂ ಕೂಡ ಕಾಲ ಸನ್ನಿಹಿತವಾಗಬೇಕು. ರೈತನ ಮಕ್ಕಳು ಮತ್ತು ನಗರದ ಯುವ ಪೀಳಿಗೆ ಕೃಷಿ ವಿಜ್ಞಾನದಲ್ಲಿ ಪರಿಣಿತ ಹೊಂದಿ ಹಳ್ಳಿಗಳಲ್ಲಿ ದುಡಿಯುವಂತಾ ದರೆ ? ಅಂದಹಾಗೆ ಯುವಕರೇ ಹಳ್ಳಿಗೆ ಒಮ್ಮೆಯಾದರೂ ಯಾವಾಗ ಬರುತ್ತೀರಿ ?

ಸ್ನೇಹಜ್ಯೋತಿಯ' ಸಮಸ್ತ ಓದುಗರಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ಅರ್ಪಿಸುತ್ತಾ ತಾಯಿ ಭುವನೇಶ್ವರಿ ಇಳೆಯಲ್ಲಿ ಬೆಳೆಯನ್ನು ಸಂವರ್ಧಿಸಲಿ ತಲೆಯಲ್ಲಿ ಕನ್ನಡತೆಯನ್ನು ಬೀಜಾಂಕುರಿಸಲಿ, ಮನದಲ್ಲಿ ಕನ್ನಡತೆಯ ಹೆಮ್ಮರ ಬೃಹದಾಗಿ ಬೆಳೆಯಲಿ ಎಂದು ಸದಾಶಿಸುವ.



# ಯಶಸ್ಸನ್ನು ಗಳಿಸೋದು ಹೇಗೆ?

ಯಶಸ್ಸನ್ನು ಗಳಿಸೋದು ಹೇಗೆ?

“ನಿನ್ನ ಯೋಚನೆಯನ್ನು ಬದಲಾಯಿಸಿದಾಗ
ನಿನ್ನ ನಂಬಿಕೆ ಬದಲಾಗುತ್ತದೆ
ನಿನ್ನ ನಂಬಿಕೆ ಬದಲಾದಾಗ
ನಿನ್ನ ನಿರೀಕ್ಷೆ ಬದಲಾಗುತ್ತದೆ
ನಿನ್ನ ನಿರೀಕ್ಷೆಗಳು ಬದಲಾದಾಗ
ನಿನ್ನ ಮನೋವೃತ್ತಿ ಬದಲಾಗುತ್ತದೆ
ನಿನ್ನ ಕಾರ್ಯನಿರ್ವಾಹಣೆ ಬದಲಾಗುತ್ತದೆ
ನಿನ್ನ ಕಾರ್ಯನಿರ್ವಹಣೆ ಬದಲಾದಾಗ
ನಿನ್ನ ಬದುಕೇ ಬದಲಾಗುತ್ತದೆ”

ಸ್ಟೀವನ್ ಆರ್. ಕೋವಿರವರ ಈ ಮೇಲಿನ ಮಾತುಗಳ ಆಳವನ್ನು ಅರ್ಥೈಸಿಕೊಳ್ಳಿರಿ. ನೆನಪಿರಲಿ, ಬದುಕನ್ನು ಬದಲಾಯಿಸಲು ಪ್ರಯತ್ನಿಸಿದಾಗ ಅದಂತೂ ಬದಲಾಗುವುದಿಲ್ಲ. ಅದರೆ ನಮ್ಮ ಯೋಚನೆಯನ್ನು ಬದಲಾಯಿಸಿದಾಗ ನಮ್ಮ ಬದುಕನ್ನೇ ಬದಲಾಯಿಸಿಕೊಳ್ಳಬಹುದು.

ನಾವೆಲ್ಲರೂ ಒಂದು ರೀತಿಯ ಯೋಚನೆಗೆ, ಒಂದು ರೀತಿಯ ಮನೋವೃತ್ತಿಗೆ, ಒಂದು ರೀತಿಯ ನಡವಳಿಕೆಗೆ ಒಗ್ಗಿಹೊಗಿದ್ದೇವೆ. ಅದಕ್ಕೆ ನಾವು ಈ ರೀತಿ ಇರೋದು. ಭವಿಷ್ಯದಲ್ಲಿ ನಾವು ಹೀಗಿರಬಾರದೆಂದರೆ ನಮ್ಮ ಯೋಚನೆ ಮತ್ತು ಕಾರ್ಯವೈಖರಿಯನ್ನು ಬದಲಾಯಿಸಿಕೊಳ್ಳಲೇ ಬೇಕು. ಇಲ್ಲವಾದರೆ ನಾವ್ಯಾವಾಗಲೂ ಹೀಗೆ ಇದ್ದುಬಿಡುತ್ತೇವೆ.

ಡಾಕ್ಟರ್ ಮೆನ್ನಿಂಗರ್‌ರವರ ಪ್ರಕಾರ, “ವಾಸ್ತವಕ್ಕಿಂತ ಮನೋವೃತ್ತಿ ತುಂಬಾ ಮುಖ್ಯವಾದುದು” ಅಂದರೆ, ವಾಸ್ತವ ಹೇಗೇ ಇರಲಿ ಒಳ್ಳೆಯ ಮನೋವೃತ್ತಿ ಇದ್ದರೆ ಸಾಕು ನಮ್ಮ ಬದುಕನ್ನು ಯಶಸ್ಸಿನತ್ತ ಕೊಂಡೊಯ್ಯಬಹುದು.

ಆಗರ್ಭ ಶ್ರೀಮಂತನೊಬ್ಬ ತನ್ನ ಮಗನಿಗೆ ಬಡತನದ ಅನುಭವವನ್ನು ನೀಡಲು ಪಕ್ಕದ ಹಳ್ಳಿಯೊಂದರ ಬಡ ಕುಟುಂಬಕ್ಕೆ ಕರೆದುಕೊಂಡು ಹೋಗಿದ್ದನು. ಅಲ್ಲಿ ಒಂದೆರಡು ದಿನಗಳನ್ನು ಕಳೆದು ಮರಳಿ ಬಂದ ನಂತರ ತಂದೆ ಮಗನನ್ನು ಕೇಳಿದ, “ಮಗೂ ಹೇಗಿತ್ತು ಎರಡು ದಿನಗಳ ಹಳ್ಳೀ ಜೀವನ?” “ತುಂಬಾ ಚೆನ್ನಾಗಿತ್ತು ಡ್ಯಾಡಿ” ಮಗನಿಂದ ಸಹಜವಾಗಿಯೇ ಉತ್ತರ ಬಂತು.

ತನ್ನ ಮಾತುಗಳನ್ನು ಮುಂದುವರೆಸಿ ತಂದೆ ಮತ್ತೆ ಕೇಳಿದ, “ ಈ ಎರಡು ದಿನಗಳಲ್ಲಿ ನೀನು ಏನನ್ನು ಕಲಿತೆ?” ಮಗನಾದರೋ ಅಷ್ಟೇ ದೈನ್ಯದಿಂದ ಮರುನುಡಿದರು, “ ಡ್ಯಾಡಿ, ನಮ್ಮ ಮನೆಯಲ್ಲಿ ಒಂದು ನಾಯಿ ಇದೆ. ಅವರ ಮನೆಯಲ್ಲಿ ನಾಲ್ಕು ನಾಯಿಗಳಿವೆ. ನಮ್ಮ ಮನೆ ಮುಂದೆ ಒಂದು ಚಿಕ್ಕ ಕೊಳವಿದೆ. ಆದರೆ ಅವರ ಮನೆಯ ಮುಂದೆ ಕೊನೆ ಕಾಣದ ದೊಡ್ಡದಾದ ಕೆರೆಯಿದೆ. ನಮ್ಮ ತೋಟದಲ್ಲಿ ಖರೀದಿಸಿ ತಂದ ಐದಾರು ದೀಪಗಳಿವೆ, ಅವರಿಗಾದರೋ ಆಕಾಶ ತುಂಬಾ ನಕ್ಷತ್ರಗಳಿವೆ.......

ಮಗನ ಮಾತುಗಳನ್ನು ಆಲಿಸುತ್ತಾ ತಂದೆ ದಂಗುಬಡಿದವನಾಗಿ, ಒಂದು ಮಾತೂ ಬಾರದೆ ಮೂಕ ಶಿಲೆಯಂತೆ ಅಲ್ಲೇ ನಿಂತುಬಿಟ್ಟ. ಮಗನು ತನ್ನ ಮಾತನ್ನು ಮುಂದುವರೆಸಿ, “ಡ್ಯಾಡಿ ಅಲ್ಲಿಗೆ ಕರೆದುಕೊಂಡು ಹೋಗಿದ್ದಕ್ಕೆ ತುಂಬಾ ಥ್ಯಾಂಕ್ಸ್ ನಾವು ಎಷ್ಟು ಬಡವರು ಅಂತ ಈಗ ನನ್ಗೆ ಗೊತ್ತಾಯಿತು........”

ವಾಸ್ತವ ಹೇಗೇ ಇರಲಿ, ಅದನ್ನು ಗ್ರಹಿಸೋದರಲ್ಲಿದೆ ಒಬ್ಬನ ಸೋಲು ಅಥವಾ ಗೆಲುವು ಎಲ್ಲವನ್ನೂ ಹೊಂದಿಯೂ ಒಬ್ಬನು ತನ್ನ ಬದುಕೇ ವೈಫಲ್ಯವೆಂದು ಪರಿಗಣಿಸಬಹುದು. ಇನ್ನೊಬ್ಬ ವ್ಯಕ್ತಿ ಏನೂ ಇಲ್ಲದೆಯೂ ತನ್ನ ಬದುಕನ್ನು ಯಶಸ್ಸಿನ ಪ್ರತೀಕವೆಂದು ತಿಳಿದು ಸಾಗಬಹುದು. ಹೀಗೆ ಮೊದಲನೆಯವನು ಎಲ್ಲಾ ಇದ್ದೂ ಬಡವನಾಗಿ, ಎರಡನೆಯವನು ಏನೂ ಇಲ್ಲದೆಯೂ ಶ್ರೀಮಂತನಾಗಿ ಬಾಳುವೆ ಸಾಗಿಸುತ್ತಿರುತ್ತಾನೆ. ಆದ್ದರಿಂದ ಬದುಕಲ್ಲಿ ನಾವು ಏನನ್ನು ಹೊಂದಿದ್ದೇವೆ (What we HAVE) ಎಂಬುದು ಮುಖ್ಯವಲ್ಲ, ನಾವೇನಾಗಿದ್ದೇವೋ (What we ARE) ಅದು ಮುಖ್ಯ

**ಗೆಲುವಿಗೆ ಕಾರಣಗಳು**

ಯಾಕೆ ಕೆಲವು ವ್ಯಕ್ತಿಗಳು ತಮ್ಮ ಜೀವನದಲ್ಲಿ ಯಾವಾಗಲೂ ಉಳಿದವರಿಗಿಂತ ಹೆಚ್ಚಿನ ಯಶಸ್ಸನ್ನು ಕಂಡಿದ್ದಾರೆ, ಕಾಣುತ್ತಿದ್ದಾರೆ? ಅವರನ್ನು ಒಮ್ಮೆ ನೋಡಿ, ಅವರಿಗೆ ತುಂಬಾ ಜನ ಫ್ರೆಂಡ್ಸ್ ಇರುತ್ತಾರೆ, ಅವರು ಆರೋಗ್ಯವಂತರಾಗಿರುತ್ತಾರೆ. ಅವರ ಕಾರ್ಯ ವೈಖರಿಯೂ ಸಹ ಫಲಪ್ರದವಾಗಿರುತ್ತಾರೆ.

ಆನಂದ್ ಎಸ್.ಡಿ.ಬಿ.,

ಅವರ ಯಶಸ್ಸಿನ ಗುಟ್ಟೇನು? ಅವರಿಗೆ ಈ ಭಾಗ್ಯ ಸಿಕ್ಕಿದ್ದು ಅನುವಂಶಿಕದಿಂದಲೆ, ಅವರಿರುವ ವಾತವರಣದಿಂದಲೇ ಅಥವಾ ಅವರಲ್ಲಿನ ಪ್ರೌಢಿಮೆ, ಸೃಜನಶೀಲತೆ ಇಲ್ಲವೇ ಬುದ್ದಿವಂತಿಕೆಯಿಂದಲೇ?..... ಹುಟ್ಟಿದವರಲ್ಲ, ರೂಪಿಸಲ್ಪಟ್ಟವರು (Winners are not BORN, They are MADE)

QUESERA SERA ಹಾಡನ್ನು ಕೇಳಿದ್ದೀರಾ? ಆ ಹಾಡಿನ ಮೊದಲ ಸಾಲುಗಳು ಹೀಗಿವೆ,

“ನಾನು ಮಗುವಾಗಿರುವಾಗ
ಅಮ್ಮನನ್ನು ಕೇಳಿದೆ
‘ಅಮ್ಮಾ ನಾನೇನಾಗ್ಲಿ?
ಡಾಕ್ಟರ್ ಆಗಲೆ? ಟೀಚರ್ ಆಗಲೆ?’
ಅಮ್ಮ ಹೇಳ್ತು,
“ಭವಿಷ್ಯ ನಮ್ಮ ಕೈಯಲ್ಲಿಲ್ಲ
ಅದಕ್ಕೇ, ನೀನೇನಾಗ್ಬೇಕೋ ಅದೇ ಆಗ್ತೀಯಾ!”

ಈಗ ಒಮ್ಮೆಯೋಚಿಸಿ, ನಾನೇನಾಗ್ಬೇಕೋ ಅದೇ ಅಗೋದು ಅಂತ ಕೈ ಕಟ್ಟಿ ಕುಳಿತರೆ ಆದೀತೆ? ಅದು ಒಂದು ಕಾಲಕ್ಕೆ ಸೀಮಿತವಾಗಿದ್ದ ಸಿದ್ಧಾಂತವಾಗಿರಬೇಕು. ಆದರೆ ಈಗಿನ ಕಾಲಕ್ಕಂತೂ ಅದು ಸರಿ ಅನ್ನಿಸದು. ಸಕಾರಾತ್ಮಕವಾಗಿ ನಾವೇನನ್ನಾದರೂ ಮಾಡಲೇ ಬೇಕು.

ನಮ್ಮ ಬದುಕಿನ ಬರವಣಿಗೆ ಇರೋದು ನಮ್ಮ ಕೈಯಲ್ಲಿ, ಅದನ್ನು ಬರೆಯಬೇಕಾದ

ನಮ್ಮ ಶರೀರವೆಂಬುದು ಗಡಿಯಾರದಂತೆ, ಒಮ್ಮೆ ರಿಪೇರಿಯಾದರೆ ಮತ್ತೆ ಸರಿಯಾಗಿ ನಡೆಯುವುದು ಕಷ್ಟ.

ಹೊಣೆಯೂ ನಮ್ಮದೇ. ಅಂದರೆ, ಬದಲಾಗೋದು, ಬಿಡೋದು ನಮ್ಮ ಹೊಣೆಯೇ ಆಗಿದೆ. ಇನ್ನೂ ಕೆಲವರು ತಿಳಿಹೋದಿದೆ, 'ಒಬ್ಬವ್ಯಕ್ತಿ ಯಶಸ್ಸನ್ನು ಗಳಿಸಲು ಎಲ್ಲಕ್ಕಿಂತ ಮುಖ್ಯವಾಗಿ ಅದೃಷ್ಟಬೇಕು, ಎಲ್ಲವೂ ಇದ್ದೂ ಅದೃಷ್ಟವೊಂದು ಇಲ್ಲದಿದ್ದರೆ ಯಶಸ್ಸಂತೂ ದೂರದ ಕನಸಾಗಿಯೇ ಉಳಿಯುತ್ತದೆ' ಅಂತ. ಅಕಾಂಕ್ಷಿಗಳೇ, ಅದೃಷ್ಟಕ್ಕೂ ತನ್ನದೇ ಆದ ಸ್ಥಾನವಿದೆಯಾದರೂ ಅದೃಷ್ಟ ದೇವತೆ ಒಲಿಯುವಂತೆ ಮಾಡೋ ಹೊಣೆಯು ಸಹ ನಮ್ಮದು ತಾನೆ?

ಮರೆಯದಿರಿ, ಯಶಸ್ಸಿಗೆ ಕಾರಣ ನಮ್ಮ ಯೋಚನಾ ರೀತಿ. ನಮ್ಮ ಬಗ್ಗೆ ನಮ್ಮ ಒಡನಾಟ, ನಮ್ಮ ಬದುಕಿನ ಗುರಿ, ಜಗತ್ತಿನ ಬಗ್ಗೆ ನಮ್ಮ ಯೋಚನೆಯನ್ನು ಬದಲಾಯಿಸಿದಾಗ ನಮ್ಮ ಬದುಕೂ ಬದಲಾಗುತ್ತದೆ, ನಮ್ಮ ಯೋಚನೆಯ ಗುಣಮಟ್ಟವನ್ನು ಬದಲಾಯಿಸಿದಾಗ ನಮ್ಮ ಬದುಕಿನ ಗುಣಮಟ್ಟವು ಸಹ ಬದಲಾಗುತ್ತದೆ.

ಯಶಸ್ಸನ್ನು ಸಾಧಿಸಿದವರು ತಮಗಾಗೇ ಬೃಹತ್ ಗುರಿಯನ್ನು ಹೊಂದಿರುತ್ತಾರೆ, ಆ ಬೃಹತ್ ಗುರಿಯತ್ತ ಮಾರ್ಗಕ್ರಮಣ ಮಾಡುತ್ತಾರೆ. ತಮ್ಮ ಗುರಿ ಸಾಧನೆಗೆ ಬಂದೊದಗುವ ಯಾವುದೇ ಅಡಚಣೆಗೂ ತಲೆ ಕೆಡಿಸಿಕೊಳ್ಳದೆ ಮುನ್ನಡೆಯುತ್ತಿರುತ್ತಾರೆ.

ನಿಜ ಹೇಳಬೇಕಾದರೋ, ಇದೊಂದು ಅವ್ಯೆಯಕ್ತಿಕ ಜಗತ್ತು ನಾವು ಉದ್ಧಾರವಾದರೂ, ಅಳಿವಿಗೆ ಬಲಿಯಾದರೂ ಈ ಜಗವಂತೂ ನಮ್ಮ ಬಗ್ಗೆ ಗಮನ ಹರಿಸದು. ನಾವು ಉತ್ತಮರಾಗುವ ಇಷ್ಟ ಈ ಜಗತ್ತಿಗೆ ಇದ್ದರೂ ಅದಂತೂ ನಮ್ಮೊಂದಿಗೆ ಸಹಕರಿಸದು. ಆದ್ದರಿಂದ ಈ ಲೋಕದಲ್ಲಿ ನಮ್ಮೊಂದಿಗೆ ಸಹಕರಿಸುವ ಏಕೈಕ ವ್ಯಕ್ತಿಯೆಂದರೆ ನಾವು ಮಾತ್ರ ಬೇರೆ ಯಾರೂ ನಮ್ಮ ಉನ್ನತಿಗಾಗಿ ದುಡಿಯರು, ಸಹಕರಿಸರು. ಆದ್ದರಿಂದ, ವಾಸ್ತವ ಹೇಗೇ ಇರಲಿ, ಮನಸ್ಸು ಮಾಡಿದರೆ ದೃಢ ನಿರ್ಧಾರ ಕೈಗೊಂಡರೆ ನಮ್ಮ ಬದುಕನ್ನು ನಾವು ಬದಲಾಯಿಸಬಹುದು. ಈ ನಿಟ್ಟಿನಲ್ಲಿ ಹೆಲನ್ ಕೆಲ್ಲರ್ ನಮ್ಮೆಲ್ಲರಿಗೂ ಆದರ್ಶ ದೇವತೆಯೇ ಸರಿ.

ಅಲಬಾಮ ಎಂಬ ಊರಲ್ಲಿ ಜೂನ್ 27, 1880ರಲ್ಲಿ ಜನಿಸಿದ ಹೆಲನ್ ಕೆಲ್ಲರ್ ತನ್ನ ಬಾಲ್ಯದಲ್ಲೇ ಅಂದರೆ ಕೇವಲ ಒಂದು ವರ್ಷ ಏಳು ತಿಂಗಳ ಕೂಸಾಗಿರುವಾಗಲೇ ವಿಚಿತ್ರವಾದ ಕಾಯಿಲೆಗೆ ತುತ್ತಾದ ಅವಳು ವಿಪರೀತ ಜ್ವರ ಮತ್ತು ನೋವಿನಿಂದ ತತ್ತರಿಸಿದ್ದಳು. ಕೊನೆಗೂ ಈ ಕಾಯಿಲೆಯಿಂದ ಗುಣಮುಖಳಾದರೂ ಕುರುಡಿ, ಕಿವುಡಿಯಾಗಿ ಹೋಗಿದ್ದಳು.

ತಾನು ಕೇವಲ ಏಳನೇ ವಯಸ್ಸಿನಲ್ಲಿದ್ದಾಗ ಅವಳ ತಂದೆ ಅವಳಿಗೆ ಆ್ಯನ್ ಸುಲ್ಲಿವನ್ ಎಂಬ ಶಿಕ್ಷಕಿಯನ್ನು ನೇಮಿಸಿದ್ದನು. ಈ ಶಿಕ್ಷಕಿಯ ನೆರವಿನಿಂದ ಹೆಲೆನ್ ಯಾರೂ ಊಹಿಸದ ರೀತಿ, ಕೇವಲ ತನ್ನ ಸ್ಪರ್ಶದಿಂದಲೇ ಇತರರೊಂದಿಗೆ ಸಂಪರ್ಕಿಸಲು ತೊಡಗಿದಳು ಹಾಗೂ ಬ್ರೇಲ್‌ನ ಮೂಲಕ ಕಲಿಯತೊಡಗಿದಳು. ಕುರುಡಿ ಹಾಗೂ ಕಿವುಡಿಯಾಗಿ ಇಂತಹ ಅಮೋಘ ಸಾಧನೆ ಮಾಡಿದವರಲ್ಲಿ ಹೆಲೆನ್ ಕೆಲ್ಲರ್ ಮೊದಲನೆಯವಳು. ಸುಮಾರು 50 ವರ್ಷಗಳವರೆಗೆ ಆ್ಯನ್ ಸುಲ್ಲಿವ್ ಹೆಲನ್‌ನ ಸಂಗಾತಿಯಾಗಿದ್ದಳು. ಇಂತಹ ಶೋಚನೀಯ ಸ್ಥಿತಿಯಿಂದಲೂ ಅವಳು 1904ರಲ್ಲಿ ರ್‍ಯಾಡ್ ಕ್ಲಿಫ್ ಕಾಲೇಜಿನಿಂದ ಪದವೀಧರಳಾದಳು. ಪ್ರಬುದ್ಧ ಭಾಷಣಕಾರಳಾದಳು, ಸಮಾಜದಲ್ಲಿ ಬಡವರ, ಶೋಷಿತರ, ಅಂಗವಿಕಲರ ಪರವಾಗಿ ಹೋರಾಟ ನಡೆಸಿದಳು. ತನ್ನ 75ನೇ ವಯಸ್ಸಿನಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯ ನೀಡಿದ ಗೌರವಾನ್ವಿತ ಡಾಕ್ಟರೇಟ್ ಪದವಿಗೆ ಪಾತ್ರಳಾದಳು ಕೊನೆಗೂ ಜೂನ್ 1, 1968ರಲ್ಲಿ ತನ್ನ ಕೊನೆ ಉಸಿರೆಳೆದಾಗ ಹೆಲೆನ್ ಕೆಲ್ಲರ್‌ಗೆ 87 ವರ್ಷಗಳಾಗಿದ್ದವು.

ವಿಲ್ಲಿಯಂ ಜೇಮ್ಸ್‌ನ ಈ ಅಮರ ನುಡಿಗಳನ್ನು ನಾವು ಎಂದೂ ಮರೆಯಲೇಬಾರದು. ಅದನ್ನು ನೀವೇ ಓದಿ, "ನನ್ನ ಪೀಳಿಗೆಯ ಅತ್ಯಂತ ಶ್ರೇಷ್ಟವಾದ ಆವಿಷ್ಕಾರವೆಂದರೆ ಮನುಷ್ಯ ತನ್ನ ಮನೋವೃತ್ತಿಯನ್ನು ಬದಲಾಯಿಸಿಕೊಂಡರೆ ಅವನು ತನ್ನ ಬದುಕನ್ನೇ ಬದಲಾಯಿಸಿಕೊಳ್ಳಬಹುದು"

ನಮ್ಮ ಯೋಚನೆ, ವಿವೇಚನೆಗೆ ತಕ್ಕಂತೆ ನಮ್ಮ ಬದುಕು ರೂಪುಗೊಳ್ಳುತ್ತದೆ. ನಾವೆಲ್ಲರೂ ಮೂಲಭೂತವಾಗಿ ಶರೀರವನ್ನು ಹೊಂದಿರುವ ಮನಸ್ಸುಗಳು. ಅದಕ್ಕೆ ನಮ್ಮ ಮನಸ್ಸು ಹಾಗೂ ವಿವೇಚನೆಯ ಆಧಾರದ ಮೇಲೆ ನಮ್ಮ ವ್ಯಕ್ತಿತ್ವವಿರುತ್ತದೆ. ಇಲ್ಲಿ ವಾಲ್ಟರ್ ಡಾಯ್ಲ್ ಸ್ಟೇಪಲ್‌ನ ಮಾತುಗಳು ಸಮಯೋಚಿತವೂ ಹೌದು, ಅರ್ಥಗರ್ಭಿತವೂ ಹೌದು, "ಚಿಂತನೆ (Thought) ಈ ಜಗತ್ತಿನಲ್ಲಿ ಯಶಸ್ಸು, ಸಮೃದ್ಧಿ ಹಾಗೂ ಸಂತೋಷದ ಉಗಮ"

ನಮ್ಮ ಮನಸ್ಸುಗಳಲ್ಲಿ ಮುಗಿವಿಲ್ಲದ ಚಿಂತನೆಗಳು ಹರಿಯುತ್ತಲೇ ಇರುತ್ತವೆ. ಮನಸ್ಸುಗಳಲ್ಲಿ ಉಗಮಿಸುವ ಚಿಂತನೆಗಳ ಬಗ್ಗೆ ಗಮನಹರಿಸೋದು ಬಿಡೋದು ನಮಗೇ ಬಿಟ್ಟದ್ದು ನಾವು ಮಾಡುವ ಚಿಂತನೆಗಲ ಆಧಾರದ ಮೇಲೆ ನಮ್ಮ ಬದುಕಿನ ಪರಿ ಸಾಗುತ್ತಿರುತ್ತದೆ. ನಾವು ವಿಜಯಿಗಳಂತೆ ವಿವೇಚಿಸಿದ್ದಲ್ಲಿ, ಚಿಂತಿಸಿದ್ದಲ್ಲಿ ಖಂಡಿತ ನಾವು ವಿಜಯಿಗಳಾಗಲು ಸಾಧ್ಯ. ಯಾಕೆಂದರೆ ನಮ್ಮ ಬದುಕು ಬದಲಾಗಬೇಕಾದರೆ ನಮ್ಮ ಯೋಚನೆಗಳು, ಚಿಂತನೆಗಳು ಬದಲಾಗಬೇಕು. ಅದಕ್ಕೆ ಶ್ರೇಷ್ಟ ಶಿಕ್ಷಣ ತಜ್ಞ ಅರ್ಲ್ ನೈಟಿಂಗೇಲ್ ಅಚ್ಚರಿ ಮೂಡಿಸುವ ರಹಸ್ಯವೊಂದನ್ನು ಬಯಲಿಗೆಳೆದ, "You are what yoou are or you become what you think" ಈ ಮಾತು ನೆನ್ನೆಗೂ, ಇಂದಿಗೂ ಹಾಗೂ ನಾಳೆಗೂ ಸತ್ಯಸ್ಯಸತ್ಯ.

**ವಿಜಯಿಗಳ್ಯಾರು?**

"ತಮಗಾಗಿ ದೊಡ್ಡ ಗುರಿಯನ್ನು ಹೊಂದಿ ಅದರೆಡೆಗೆ ಮಾರ್ಗಕ್ರಮಣ ಮಾಡುತ್ತಾ ತಮ್ಮ ಬದುಕನ್ನು ಸುಖಿಸುವ ವ್ಯಕ್ತಿಗಳನ್ನು ವಿಜಯಿಗಳು", ಎಂದು ನಿರೂಪಿಸಬಹುದು.

ಗುರಿ ಸಾಧನೆಗೆ ಒಬ್ಬನಿಗೆ ಅತ್ಯಧಿಕ ಬುದ್ಧಿವಂತಿಕೆ ಬೇಕಾಗಿಲ್ಲ. ತನ್ನಲ್ಲಿರುವ ಬುದ್ಧಿವಂತಿಕೆಯನ್ನು ಸರಿಯಾಗಿ ಉಪಯೋಗಿಸಿದರು ಸಾಕಾದೀತು. ಯಶಸ್ಸಿಗೆ ನಿಗದಿತ ಕಾರಣವನ್ನು ಹುಡುಕುತ್ತಾ ಹೊರಟರೆ ಸಿಗುವ ಅಚ್ಚರಿಯ ಉತ್ತರವೆಂದರೆ ಶ್ರಮದ ದುಡಿಮೆಯಲ್ಲ, ಅದೃಷ್ಟವಲ್ಲ. ಬದಲಾಗಿ ಅದ್ಯತೆಯ ಮೇರೆಗೆ ಚಿಂತನೆ ಮಾಡೋದು, ಕಾರ್ಯವನ್ನು ಕೈಗೊಳ್ಳೋದು. So ಇನ್ನಾದರೂ ವಿಜಯಿಗಳಂತೆ ವಿವೇಚಿಸಿ ಯಶಸ್ಸನ್ನು ಗಳಿಸಿರಿ.



ರಾಕ್ಷಸ ಶಕ್ತಿಯನ್ನು ಹೊಂದಿರುವುದು ಒಳ್ಳೆಯದು, ಆದರೆ ಅದನ್ನೆ ರಾಕ್ಷಸನಂತೆ ಉಪಯೋಗಿಸುವುದು ಕೆಟ್ಟದ್ದು.

# ಅಂಡಾಶಯದ ಕ್ಯಾನ್ಸರ್ ಸರಳ ಜೀವನ, ಸೂಕ್ತ ಚಿಕಿತ್ಸೆ ಅವಶ್ಯಕ

ಅಂಡಾಶಯವು ಸ್ತ್ರೀತತ್ವಕ್ಕೆ ಪೂರಕವಾದ ಅಂಗ. ಇವುಗಳ ಗರ್ಭಕೋಶದ ಎರಡು ಭಾಗಗಳಲ್ಲಿ ಇದ್ದು, ಮಹಿಳೆಯರ ಋತು ಚಕ್ರಕ್ಕೆ ಅಂಡಾಣುವಿನ ಮೂಲಕ ಗರ್ಭಧಾರಣೆಗೆ ಮೂಲ ಕ್ರಿಯಾಂಗ.

ಅಂಡಾಶಯದ ಕ್ಯಾನ್ಸರ್‌ಗಳು ಸ್ವಲ್ಪ ಅಪರೂಪವಾದರೂ ಅವು ಸದ್ದಿಲ್ಲದೇ. ಹಾಗೂ ಯಾವ ಸೂಚನೆಯನ್ನು ಉಂಟುಮಾಡದೇ ಮುಂದುವರೆದ ಹಂತದವರೆಗೆ ಬೆಳೆದು ಬಿಡಬಹುದು. ಇದಕ್ಕೆ ಕಾರಣ ಕಿಬ್ಬೊಟ್ಟೆಯಲ್ಲಿ ಇವುಗಳ ಸುತ್ತಲೂ ಇರುವ ಖಾಲಿ ಜಾಗ.

ಇದರಿಂದಾಗಿ ಈಕ್ಯಾನ್ಸರ್ ಪೀಡಿತ ಮಹಿಳೆಯರು ಸಾಮಾನ್ಯವಾಗಿ ಮುಂದುವರೆದ ಹಂತದಲ್ಲಿ ವೈದ್ಯರ ಬಳಿ ಬರುತ್ತಾರೆ. ಈ ಕ್ಯಾನ್ಸರ್ ವಯಸ್ಸಾದ ಮಹಿಳೆಯರಲ್ಲಿ ಹೆಚ್ಚು. ಆದ್ದರಿಂದ 40 ರ ಮೀರಿದ ಪ್ರತಿ ಮಹಿಳೆಯೂ ಪ್ಯಾಪ್ ಪರೀಕ್ಷೆಗೆ ಮಹಿಳಾ ವೈದ್ಯರ ಬಳಿ ಹೋದಾಗ (ವರ್ಷಕ್ಕೊಮ್ಮೆಯಾದರೂ) ತಮ್ಮ ಹೊಟ್ಟೆಯ ಅಲ್ಟ್ರಾಸೌಂಡ್ ಪರೀಕ್ಷೆಯನ್ನು ತಪ್ಪದೇ ಮಾಡಿಸಿಕೊಳ್ಳುವುದು ಅತ್ಯಂತ ಸೂಕ್ತ. ಇದನ್ನು ಮಹಿಳೆಯರೇ ವೈದ್ಯರನ್ನು ಕೋರಿ ಮಾಡಿಸಿಕೊಳ್ಳುವುದು ಒಳ್ಳೆಯದು.

ಪ್ರತಿವರ್ಷ ವಿಶ್ವದಾದ್ಯಂತ 190.000 ಹೊಸ ಅಂಡಾಶಯದ ಕ್ಯಾನ್ಸರ್‌ಗಳು, ಹಾಗೂ 1,14,000 ಸಾವುಗಳೂ ಇದರಿಂದ ಆಗುತ್ತಿರುತ್ತವೆ. ಇದು ಸ್ಕ್ಯಾಂಡಿನೇವಿಯಾ ಪೂರ್ವಯೂರೋಪ್, ಯು. ಎಸ್.ಎ. ಕೆನಡಾ ದೇಶಗಳಲ್ಲಿ ಅತೀ ಹೆಚ್ಚಾಗಿದ್ದರೂ ಆಫ್ರೊ ಏಷಿಯನ್ ದೇಶಗಳಲ್ಲಿ ಅತೀ ವಿರಳವೇನಲ್ಲ. ವಯಸ್ಸಾದಂತೆಲ್ಲಾ ಇದರ ಸಂಭವ ಹೆಚ್ಚು ಮುಟ್ಟು ನಿಂತ ಮಹಿಳೆಯರಲ್ಲಿ ಕಾರ್ಸಿನೋಮಾ ಎಂಬ ವೈವಿಧ್ಯತೆ ಹೆಚ್ಚಾಗಿ ಕಂಡುಬರುತ್ತದೆ ಹಾಗೂ ಅತೀ ಅಪರೂಪವಾಗಿ ಯುವತಿಯರಲ್ಲಿ ಜರ್ಮೈನಲ್ ಹಾಗೂ ಎಂಬ್ರಿಯಾನಿಕ್ ಗಡ್ಡೆಗಳು ಬರಬಹುದು.

ಕಾರಣಗಳು : ವಂಶಜವಾಗಿ ಈ ಗಡ್ಡೆಗಳು ಬರಬಹುದಾದ ಅತಿ ಮುಖ್ಯ ಕಾರಣ. (5-10% ಕೇಸ್‌ಗಳಲ್ಲಿ) ಹಾಗೂ ತಮ್ಮ ಮೊದಲ ರಕ್ತಸಂಬಂಧಿ ಮಹಿಳೆಯರಲ್ಲಿ ಇದ್ದರಂತೂ ಇದು ಬರುವ ಸಾಧ್ಯತೆ ನಾಲ್ಕು ಪಟ್ಟು ಅಧಿಕ. ಈ ಕ್ಯಾನ್ಸರ್ ಪ್ರಚೋದಕ ವಸ್ತುಗಳು ನಮ್ಮ ದೇಹದಲ್ಲಿಯೇ ಉತ್ಪತ್ತಿಯಾಗುವ ಕೆಲವು ಹಾರ್ಮೋನ್‌ಗಳು. ಹಾಗೂ ಕೆಲವು ಲೈಂಗಿಕ ಜೀವನದ ಕಾರಣಗಳಾಗಿವೆ. ಮಕ್ಕಳಾಗದ ಮಹಿಳೆಯರಿಗೂ ಹಾಗೂ ಕ್ಯಾನ್ಸರ್ ರೋಗಗಳಿಗೂ ಇದರ ಸಾಧ್ಯತೆ ಸ್ವಲ್ಪ ಹೆಚ್ಚು.

ಮಕ್ಕಳಾಗದವರಿಗೆ ನೀಡುವ ಹಾರ್ಮೋನ್ ಚಿಕಿತ್ಸೆ ಈ ನಿಟ್ಟಿನಲ್ಲಿ ಸ್ವಲ್ಪ ಅಪಾಯಕಾರಿಯಾದರೂ ಮುಟ್ಟು ನಿಲ್ಲುವಾಗ ನೀಡುವ ಹಾರ್ಮೋನ್ ಚಿಕಿತ್ಸೆ ಅಷ್ಟು ಅಪಾಯಕಾರಿಯಲ್ಲ ಎಂದು ತಿಳಿದು ಬಂದಿದೆ.

ನಮ್ಮ ಗ್ರಾಮೀಣ ಮಹಿಳೆಯರ ದೃತಿಯ ಮಟ್ಟವನ್ನು ನೋಡಿದಲ್ಲಿ ಮುಟ್ಟು ನಿಲ್ಲುವಾಗ ಬೇಕಾಗುವ ಹಾರ್ಮೋನ್ ಚಿಕಿತ್ಸೆ ಅಷ್ಟು ಬೇಕಾಗದಿರಬಹುದು ಎಂಬುದು ಪಾಶ್ಚಿಮಾತ್ಯ ಸ್ತ್ರೀಯರಿಗೆ ಹೋಲಿಸಿದಾಗ ಕಂಡುಬರುತ್ತದೆ. ಚಿಕ್ಕ ವಯಸ್ಸಿನಲ್ಲಿ ಋತುಮತಿಯಾಗುವುದು ಹಾಗೂ ಅತೀ ಹೆಚ್ಚು ವಯಸ್ಕರಾದಾಗ (50 ಅಸುಪಾಸು) ಮುಟ್ಟು ನಿಲ್ಲುವುದೂ ಕೂಡ, ಒಂದು ಸಣ್ಣ ರಿಸ್ಕ್ ಎಂದು ಹೇಳಬಹುದು. ಆಹಾರದ ಕೆಲವೊಂದು ಅಂಶಗಳೂ ಕೂಡ ಇದಕ್ಕೂ ಪೂರಕವಾಗಬಹುದು. ಸ್ಥೂಲ ಕಾಯದ ಮಹಿಳೆಯರಲ್ಲಿ ಹಾಗೂ ಎತ್ತರದ ಮಹಿಳೆಯರಲ್ಲಿ ಇದು ಹೆಚ್ಚು ಎಂದು ತಿಳಿದು ಬಂದಿದೆ.

ಪದೇ ಪದೇ ಆಗುವ ಗರ್ಭದ ಸೋಂಕಿನಿಂದ ಹಾಗೂ ಅಂಡಾಶಯದ ಸಿಸ್ಟ್‌ಗಳು ಇದ್ದಲ್ಲಿಯೂ ಇದರ ಸಾಧ್ಯತೆ ಅಧಿಕ. ಎಂಡೋಯೋಸಿಸ್ ಎಂಬ ಗರ್ಭಕೋಶಕಾಯಿಲೆಯಲಿಲ್ಲ ಇದರ ಸಂಭವ ತುಸು ಹೆಚ್ಚು. ಟ್ಯೂಬೆಕ್ಟಮಿ, ಹಿಸ್ಟೆರೆಕ್ಟಮಿ ಆದ ಮಹಿಳೆಯರಲ್ಲಿ ಹಾಗೂ ಸಂತಾನ

ಡಾ. ಸಿ.ಎನ್. ಜಗದೀಶ್, ಹಾಸನ
ಮೊ. : 9480392137

ನಿಯಂತ್ರಣ ಮಾತ್ರೆ ಸೇವಿಸುವವರಲ್ಲಿ ಇದರ ಸಾಧ್ಯತೆ ಕೂಡ ಕಡಿಮೆ ಎಂದು ತಿಳಿದು ಬಂದಿದೆ.

ತಪಾಸಣೆ: ಮೊದಲೆ ಹೇಳಿದ ಹಾಗೆ ಇದು ಸದ್ದು ಗದ್ದಲವಿಲ್ಲದೇ ಬೆಳೆಯ ಬಹುದಾದ್ದರಿಂದ, ಹೆಚ್ಚು ಮಹಿಳೆಯರು ಮುಂದುವರೆದ ಹಂತದಲ್ಲೇ ವೈದ್ಯರನ್ನು ಸಂಪರ್ಕಿಸುತ್ತಾರೆ. ಆಗಿನ ಸೂಚನೆಗಳು ಕಿಬ್ಬೊಟ್ಟೆಯಲ್ಲಿ ಅಸಮಾಧಾನ, ಉಬ್ಬರ, ಯೋನಿಯ ಅಸಾಮಾನ್ಯ ರಕ್ತಸ್ರಾವ ಹಾಗೂ ಕರುಳಿನ ಸಂಬಂಧಿತ ಹಾಗು ಮೂತ್ರ ಸಂಬಂಧಿತ ಸೂಚನೆಗಳಾಗಿ ಬಿಟ್ಟಿರುತ್ತವೆ.

ಇವು ಮುಂದುವರೆದ ಹಂತದ ಸೂಚನೆಗಳು :

ಇದನ್ನು ಗುರುತಿಸಲು ಹೊಟ್ಟೆಯ ಅಲ್ಟ್ರಾಸ್ಪೋನೋ ಗ್ರಾಪ್ ಪರೀಕ್ಷೆ ಅತ್ಯಂತ ಸೂಕ್ತ. ಹಾಗೂ ಯೋನಿಯ ಮೂಲಕ ಬಯಾಪ್ಸಿ ಮಾಡುವುದು ರೂಢಿಯಲ್ಲಿದೆ.

ಈ ಕಾಯಿಲೆಯನ್ನು ಖಚಿತಪಡಿಸಿಕೊಳ್ಳಲು ಸಿಎ 125 ಎಂಬ ಟ್ಯೂಮರ್ ಮಾರ್ಕರ್ (ಒಂದು ರೀತಿಯ ರಕ್ತ ಪರೀಕ್ಷೆ) ಸಹಕಾರಿಯಾದರೂ ಇದರಿಂದಲೇ ಈ ಕಾಯಿಲೆಯನ್ನು ಪತ್ತೆ ಹಚ್ಚುವುದು ಅಷ್ಟು ಸೂಕ್ತವಲ್ಲ ಆದರೂ ವಂಶಜರಲ್ಲಿ ಈ ಕಾಯಿಲೆ ಇದ್ದಾಗ ಈ ಸಿಎ 125 ರಕ್ತ ಪರೀಕ್ಷೆ ಖಚಿತಪಡಿಸಲು ಸಹಕಾರಿಯಾಗಬಲ್ಲದು.

"ಲೇಸರ್ ಕ್ಯಾಪ್ಚರ್ ಮೈಕ್ರೊಡಿಸ್ಸೆಕ್ಷನ್" ಎಂಬ ಪ್ರಕ್ರಿಯೆಯಿಂದ ಮೊದ ಮೊದಲ ಹಂತದಲ್ಲೇ ಕೆಲವು ಪ್ರೋಟೀನ್‌ಗಳ ಸರಪಳಿಗಳನ್ನುಗುರುತಿಸಿ ಈ ಕಾಯಿಲೆಯನ್ನು ಪತ್ತೇ ಹಚ್ಚಬಹುದಾಗಿದೆ. ಇದರ ಸೌಲಭ್ಯ ಸಿಟಿಗಳಲ್ಲಿ ಲಭ್ಯ.

ಅಂಡಾಶಯದ ಗಡ್ಡೆಗಳನ್ನು ಮೂರು ವಿಧವಾಗಿ ಗುರುತಿಸಬಹುದಾಗಿದೆ.

1) ಬಿನೈನ್ ಗಡ್ಡೆಗಳು

2) ಕಡಿಮೆ ಅಪಾಯಕಾರಿ ಕಾನ್ಸರ್‌ಗಳು

3) ಶೀಘ್ರ ಬೆಳೆಯುವ ಕ್ಯಾನ್ಸರ್‌ಗಳು ಎಂದು.

ಬಿಆರ್.ಸಿಎ182 ಎಂಬ ಜೀನ್ಸ್‌ಗಳು ಕೆಲವೇ ಕೆಲವು ವಂಶಗಳಲ್ಲಿ ಹರಿಯುವುದರಿಂದ ಈ ಜೀನ್ಸ್‌ಗಳಿದ್ದ ಫ್ಯಾಮಿಲಿನಲ್ಲಿ ಅಂಡಾಶ ಯದ ಹಾಗೂ ಸ್ತನದ ಕ್ಯಾನ್ಸರ್ ಕಾಣಿಸುವ ಸಾಧ್ಯತೆ ಹೆಚ್ಚು ಇವರಲ್ಲಿಯೇ ದೊಡ್ಡ ಕರುಳಿನ ಹಾಗೂ ಎಂಡೋಮೆಟ್ರಯಲ್ (ಗರ್ಭಕೋಶದ ಒಳಪೊರೆಯ) ಕ್ಯಾನ್ಸರ್ ಕೂಡ ಬರುವ ಸಾಧ್ಯತೆ ಇರುತ್ತದೆ. ಆದರೊಂದು ಅತಿ, ಅತೀ ವಿರಳ.

ಚಿಕಿತ್ಸೆ :- ಶಸ್ತ್ರ ಚಿಕಿತ್ಸೆಯ ಮೂಲಕ ಪತ್ತೆ ಹಚ್ಚುವಿಕೆ ಹಾಗೂ ಗುಣಪಡಿಸುವಿಕೆ ಎರಡೂ ಸಾಧ್ಯ. ಗರ್ಭಕೊಶವನ್ನು ಅಂಡಾಶಯದೊಂದಿಗೆ ಶಸ್ತ್ರ ಚಿಕಿತ್ಸೆಯಲ್ಲಿ ಸಾಮಾನ್ಯವಾಗಿ ತೆಗೆಯಲಾಗುತ್ತದೆ. (ಟೊಟಲ್ ಹಿಸ್ಟೆರೆಕ್ಟಮಿ)

ಮುಂದುವರೆದ ಹಂತದಲ್ಲಿ ಇನ್ನೂ ಹೆಚ್ಚು ಹೆಚ್ಚು ಉದರದ ಅಂಗಾಂಗಗಳನ್ನು ತೆಗೆಯಬೇಕಾಗಬಹುದು.

ಒಂದು ಸಮಾಧಾನಕರ ಅಂಶ ಎಂದರೆ ಮೊದಲೇ, ಮುಂದುವರೆದ ಹಂತದಲ್ಲಿಯೂ ಸಹಕೀಮೋಥೆರಪಿ ಅತ್ಯಂತ ಪರಿಣಾಮಕಾರಿ ಚಿಕಿತ್ಸೆಯಾಗಿದೆ. ಹಾಗೂ ದೀರ್ಘಕಾಲ ಜೀವನ ಸಾಧ್ಯ.

ಸರ್ಜರಿಯಾದ ನಂತರವೂ ಈ ಕೀಮೋಥೆರಪಿ ಬೇಕಾಗುತ್ತದೆ.

ರೇಡಿಯೋ ಥೆರಪಿಯ ಪಾತ್ರವು ಇಲ್ಲ. ಈ ಕಾಯಿಲೆ ಬಂದ ನಂತರ ಐದು ವರ್ಷ ಪೂರ್ಣಗುಣ ಕಾಣಬಹುದಾಗಿದ್ದು 30ರಿಂದ 50% ಕೇಸುಗಳಲ್ಲಿ ಸಾಧ್ಯವಾಗಬಹುದೆಂದು ಗುರುತಿಸಲಾಗಿದೆ.

ಇದು ಹೇಗೇ ಇದ್ದರೂ ಸಹಿತ ಕಾಯಿಲೆಯನ್ನು ಸೂಕ್ತ ತಪಾಸಣೆಯ ಮೂಲಕ ಪತ್ತೆ ಹಚ್ಚುವುದು ಸುಲಭ ಸಾಧ್ಯ. ಪ್ರತಿ ಮಹಿಳೆಯೂ ವರ್ಷಕ್ಕೊಮ್ಮೆಯಾದರೂ ತಮ್ಮ ಮಹಿಳಾ ವೈದ್ಯರನ್ನು ತಪಾಸಣೆಗಾಗಿಯೇ ಅವಶ್ಯವಾಗಿ ಸಂಪರ್ಕಿಸಬೇಕು.

ಹಾಗೂ ಇತ್ತೀಚಿನ ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳಂತೆ, ಒತ್ತಡ ರಹಿತ ಸರಳ ಜೀವನ ಕ್ರಮ ಹೆಚ್ಚು ಹೆಚ್ಚು ತರಕಾರಿಗಳ ಸೇವನೆ ಕಡಿಮೆ ಕೆಂಪು ಎಳೆ ಮಾಂಸಗಳ ಸೇವನೆ ಕ್ಯಾನ್ಸರ್‌ನ್ನು ತಪ್ಪಿಸಲು ಸಹಕಾರಿ.


## ನಿರೀಕ್ಷಿಸಿ.... ಸಿದ್ಧರಾಗಿ....

## ವಿಶ್ವಾಸ ಸಂವತ್ಸರ ವರ್ಷದ ಪ್ರಯುಕ್ತ

**ಸ್ನೇಹಜ್ಯೋತಿ ಓದುಗರಿಗೆ ಹಾಗೂ ಧರ್ಮಕ್ಷೇತ್ರದ ದೇವ ಪ್ರಜೆಗೆ ಲಿಖಿತ ರಸಪ್ರಶ್ನೆ ಸ್ಪರ್ಧೆ.**

**ಆಕರ್ಷಕ ನಗದು ಬಹುಮಾನ ವಿಜೇತರಿಗೆ.**

**ಹೆಚ್ಚಿನ ವಿವರ, ಮಾಹಿತಿಯನ್ನು ಮುಂದಿನ ಸಂಚಿಕೆಗಳಲ್ಲಿ ನೀಡಲಾಗುವುದು.**

**ಓದ ಬೇಕಾದ ಪುಸ್ತಕಗಳು :**

1. ಕಥೋಲಿಕ ಧರ್ಮಸಭೆಯ ಧರ್ಮೋಪದೇಶ ಸಂಕ್ಷೇಪ (ಸಿಸಿಸಿ)
2. ಜಗದ್ಗುರುಗಳ ಪ್ರೇಷಿತ ಪತ್ರ "ವಿಶ್ವಾಸದ ದ್ವಾರ" (ಪೋರ್ತಾ ಫಿದೇಯಿ)
3. ಬೈಬಲ್ : ವಿಶ್ವಾಸಕ್ಕೆ ಸಂಬಂಧಪಟ್ಟ ಪುಸ್ತಕಗಳು, ಅಧ್ಯಾಯ, ಉಲ್ಲೇಖ, ನಿದರ್ಶನ ಹಾಗೂ ಘಟನೆಗಳು.

ಪುಸ್ತಕಗಳು ದೊರೆಯುವ ಸ್ಥಳ :

**ನಿರ್ದೇಶಕರು, ಅಮರವಾಣಿ,**

**ಫೋನ್. : 9480376679, 9448544191.**




ಸಕಾಲದಲ್ಲಿ ಶಾಂತಿಯ ಬಾಗಿಲನ್ನು ಹಾಕುತ್ತೇನೆ, ಇಲ್ಲವಾದಲ್ಲಿ ಅದು ಹೊರಟು ಹೋಗಬಹುದು.

# ನಶ್ವರ ಲೋಕ

ವಿಶ್ವವಿಖ್ಯಾತ ಚಕ್ರವರ್ತಿ ಅಲೆಕ್ಸಾಂಡರ್ ಅನೇಕ ದೇಶಗಳನ್ನು ಗೆದ್ದುಕೊಂಡು ತನ್ನ ಸ್ವದೇಶಕ್ಕೆ ಅಪಾರ ಐಶ್ವರ್ಯದೊಂದಿಗೆ ಹಿಂತಿರುಗುತ್ತಿದ್ದನು. ಅವನ ಮತ್ತು ಸೈನ್ಯ ಪಡೆಯ ಸಂತೋಷಕ್ಕೆ ಪಾರವೇ ಇರಲಿಲ್ಲ. ಈ ವಿಜಯೋತ್ಸವ ಪಯಣದ ಸಂದರ್ಭದಲ್ಲಿ ಅಲೆಕ್ಸಾಂಡರ್ ತನ್ನ ಕುದುರೆಯ ಮೇಲಿನಿಂದ ನೆಲಕ್ಕೆ ಬಿದ್ದು ಗಾಯ ಗೊಂಡನು. ಅನೇಕ ವೈದ್ಯರು ಅವಿರತ ಅವನ ಶೂಶ್ರುಷೆ ಮಾಡಿದರೂ ಅವನು ಚೇತರಿಸಿಕೊಳ್ಳುವಂತೆ ಕಾಣಲಿಲ್ಲ. ಬರಬರುತ್ತಾ ಪರಿಸ್ಥಿತಿ ಉಲ್ಬಣಗೊಳ್ಳುತ್ತಾ ತನ್ನ ಅಂತ್ಯ ಸನಿಹವಾಗುತ್ತಿದೆ ಎಂದು ಚಕ್ರವರ್ತಿಗನಿಸಿತು.

ತನ್ನ ದಂಡೆಯಾತ್ರೆಯಲ್ಲಿ ಅವನು ಸಂಗ್ರಹಿಸಿದ ಶಸ್ತ್ರಸ್ತ್ರಗಳು, ವಜ್ರ, ಚಿನ್ನ ಬೆಳ್ಳಿಯ ಆಭರಣಗಳು, ಅಗತ್ಯಕ್ಕಿಂತ ಅಧಿಕ ಹಣ, ಮತ್ತು ಸಬಲ ಸೈನಿಕರ ದಂಡು ಅವನನ್ನು ಸುತ್ತುವರೆದಿತ್ತು. ಆದರೆ ಇದೆಲ್ಲವೂ ನಶ್ವರ, ಅಲ್ಪಕಾಲಿಕ ಎಂಬ ಪ್ರಜ್ಞೆ ಅವನನ್ನು ಆವರಿಸಿತ್ತು. ಆದುದದರಿಂದ ಅವನು ತನ್ನ ಸೈನ್ಯಾಧಿಕಾರಿ ಮತ್ತು ಸೈನಿಕರನ್ನು ಸನಿಹಕ್ಕೆ ಕರೆದು ಕ್ಷೀಣ ಸ್ವರದಿಂದ ಹೀಗೆಂದನು. 'ಆತ್ಮಿಯರೇ, ನಾನು ಇನ್ನು ಕೆಲವೇ ದಿನಗಳಲ್ಲಿ ಈ ಲೋಕವನ್ನು ಬಿಟ್ಟು ಅಗಲುತ್ತೇನೆ, ಈಗ ನನ್ನ ಮನಸ್ಸಿನಲ್ಲಿ ಮೂರು ಬಯಕೆಗಳಿವೆ. ಅವನ್ನು ಈಡೇರಿಸಲು ನೀವು ಸಹಕರಿಸಬೇಕು', ಈ ಮಾತುಗಳನ್ನು ಹೇಳುವಾಗ ಅಲೆಕ್ಸಾಂಡರನ ಕಣ್ಣುಗಳಿಂದ ನೀರಿಳಿಯುತ್ತಿತ್ತು. ಸೈನ್ಯಾಧಿಕಾರಿ ಅಪ್ರತಿಭ ನಾಗಿದ್ದನು.

'ಮಹಾ ಸ್ವಾಮೀ, ನಿಮ್ಮ ಅಭಿಲಾಷೆ ಏನೆಂದು ತಿಳಿಸಿರಿ, ಅದನ್ನು ಶಿರಸಾವಹಿಸಿ ನೆರವೇರಿಸುತ್ತೇನೆ' ಎಂದನು ಸೈನ್ಯಾಧಿಕಾರಿ ಕುತೂಹಲದಿಂದ ಸ್ವಲ್ಪ ಸಮಯ ಸುಧಾರಿಸಿ ಕೊಂಡ ಅಲೆಕ್ಸಾಂಡರ್ ತನ್ನ ಬಯಕೆಗಳನ್ನು ಹೇಳಿದನು 'ಮೊದಲನೆಯದು, ನನ್ನ ಶವಪೆಟ್ಟಿಗೆಯನ್ನು ನನಗೆ ಚಿಕಿತ್ಸೆ ನೀಡಿದ ವೈದ್ಯರು ಅಂತಿಮ ಯಾತ್ರೆಯಲ್ಲಿ ಹೊತ್ತುಕೊಂಡು ಹೋಗಬೇಕು. ಎರಡನೆಯದು ನನ್ನ ಮರಣ ಪೆಟ್ಟಿಗೆಯಲ್ಲಿ ನಾನು ಗಳಿಸಿದ ಮುತ್ತು ರತ್ನ, ವಜ್ರ ವೈಡೂರ್ಯಗಳ ಅಲಂಕಾರವಿರಬೇಕು ಮತ್ತು ಮೂರನೆಯದು ನನ್ನ ಎರಡು ಕರಗಳು ಪೆಟ್ಟಿಗೆಯ ಹೊರಗೆ ಬರಿದಾಗಿ ಎಲ್ಲರಿಗೂ ಕಾಣುವಂತಿರಬೇಕು''

ಇದನ್ನು ಕೇಳಿದವರು ತಮ್ಮಲ್ಲೇ ಅರಸನು ಬುದ್ಧಿ ಭ್ರಾಂತನಾಗಿ ಹುಚ್ಚುಹುಚ್ಚಾಗಿ ಮಾತನಾಡುತ್ತಿದ್ದಾನೆ ಎಂದು ಕೊಂಡರು, ತಮ್ಮ ಅಭಿಪ್ರಾಯವನ್ನು ತಿಳಿಸಲು ಅವರು ಅಂಜಿಕೊಂಡರು. ಸೈನ್ಯಾಧಿಕಾರಿ ಅರಸನ ಹತ್ತಿರಕ್ಕೆ ಬಂದು ಅಲೆಕ್ಸಾಂಡರನ ಕೈಯನ್ನು ಮುದ್ದಿಸಿ : ''ಮಹಾಪ್ರಭೂ, ನಿಮ್ಮ ಮೂರು ಇಚ್ಛೆಗಳನ್ನು ನಾವು ಖಂಡಿತ ಈಡೇರಿಸುತ್ತೇವೆ. ಆದರೆ ಈ ವಿಚಿತ್ರ ಬಯಕೆಗಳು ನಿಮ್ಮಲ್ಲಿ ಹೇಗೆ ಉದ್ಭವಿಸಿದವು ಎಂಬುದನ್ನು ತಿಳಿಸಬಲ್ಲಿರಾ?' ಎಂದು ವಿನಂತಿಸಿದನು.

ಅಲೆಕ್ಸಾಂಡರ್ ದೀರ್ಘ ಉಸಿರನ್ನು ಬಿಟ್ಟು ನಿಧಾನವಾಗಿ ಮಾತನಾಡಲಾರಂಭಿಸಿದನು : 'ನನ್ನ ಮರಣದ ಸಮಯ ಸನಿಹವಾಗುತ್ತಿದ್ದಂತೆ ಈ ಕೆಲವು ಆಲೋಚನೆಗಳು ನನ್ನ ಮನಸ್ಸಿನಲ್ಲಿ ಸುಳಿದವು. ನನ್ನ ವೈದ್ಯರೇ ನನ್ನ ಶವಪೆಟ್ಟಿಯನ್ನು ಹೊತ್ತುಕೊಳ್ಳಬೇಕೆಂದು ಹೇಳಿದ್ದು ಏಕೆಂದರೆ ಯಾವ ವೈದ್ಯರೂ ಎಲ್ಲಾ ಕಾಯಿಲೆಗಳನ್ನು ಗುಣ ಪಡಿಸಲಾರರು. ಒಂದೆರಡು ರೋಗಗಳನ್ನು ಅವರು ಸ್ವಸ್ಥ ಪಡಿಸಬಲ್ಲರು. ರೋಗಿಗೆ ಆಯಸ್ಸು ಕೊಡುವ, ಜೀವ ಕೊಡುವ ಶಕ್ತಿ ಮಾತ್ರ ಅವರಲ್ಲಿ ಇಲ್ಲ. ಸತ್ತವರಿಗೆ ಜೀವ ಕೊಡಲು ಅವರಿಂದಾಗದು. ಅದನ್ನು ದೇವರು ಮಾತ್ರ ಕೊಡಬಲ್ಲರು. ನೀವು ಸಹ ನಿಮ್ಮ ಜೀವನವನ್ನು ವ್ಯರ್ಥ ಮಾಡದೆ ಉಪಯುಕ್ತ ಗೊಳಿಸಬೇಕೆಂದು ಈ ಮೊದಲನೆಯ ಬಯಕೆಯನ್ನು ನಾನು ತಿಳಿಸಿದೆ''.

'ಎರಡನೆಯದಾಗಿ, ನಾನು ಗಳಿಸಿದ ಅಪಾರ ಐಶ್ವರ್ಯ, ಚಿನ್ನ ಬೆಳ್ಳಿ ಆಸ್ತಿ ಸಂಪತ್ತೆಲ್ಲವನ್ನೂ ನಾನು ಇಲ್ಲೇ ಬಿಟ್ಟು ಹೋಗುತ್ತೇನೆ. ಆದುದರಿಂದ ನೀವೂ ಸಹ ಧನ ಕನಕ, ಅಧಿಕಾರ ಆಸ್ತಿಯ ಬೆನ್ನತಬೇಡಿರಿ, ಇವೆಲ್ಲವೂ ಇವತ್ತು ಬರುತ್ತವೆ, ನಾಳೆ ಮಾಯವಾಗುತ್ತವೆ. ಅವುಗಳ ಗಳಿಕೆಯಲ್ಲಿ ನಿಮ್ಮ ಅಮೂಲ್ಯ ಸಮಯವನ್ನು ವ್ಯಯಮಾಡಬೇಡಿರಿ. ಈ ಸತ್ಯವನ್ನು ಲೋಕಕ್ಕೆ ತಿಳಿಸಲು ಈ ಎರಡನೆಯ ಬಯಕೆಯನ್ನು ನಾನು ತಿಳಿಸಿದೆ.'

''ಮೂರನೆಯದಾಗಿ, ಬರಿದಾದ ನನ್ನ ಕರಗಳನ್ನು ಎಲ್ಲರಿಗೂ ಕಾಣಿಸುವಂತೆ ಮರಣ ಪೆಟ್ಟಿಗೆಯ ಹೊರಗಿಡುವಂತೆ ಹೇಳಿದ್ದು ಏಕೆಂದರೆ, ನಾನು ಈ ಭೂಲೋಕಕ್ಕೆ ಬರುವಾಗ ಬರಿಗೈಯಲ್ಲಿ ಬಂದೆ, ಹೋಗುವಾಗಲೂ ಬರಿಗೈಯಲ್ಲೇ ಹೋಗುತ್ತೇನೆ. ಇದು ಈ ಲೋಕದ ವ್ಯವಸ್ಥೆ ಮತ್ತು ನೈಜ್ಯ ಸತ್ಯ. ಆದುದ್ದರಿಂದ ಲೋಕದ ನಿಯಮದಂತೆ ಮಿತಿಮೀರಿದ ಆಸ್ತಿ ಪಾಸ್ತಿ ವಸ್ತುಗಳನ್ನು ಸಂಗ್ರಹಿಸುವುದರಲ್ಲಿ ಅರ್ಥವಿಲ್ಲ. ಪ್ರಯೋಜನವಿಲ್ಲ. ನಾಳೆ ನನ್ನ ಪರಿಸ್ಥಿತಿ ನಿಮಗೂ ಬರುತ್ತದೆ. ಅಗತ್ಯಕ್ಕಿಂತ ಅಧಿಕ ಪ್ರಮಾಣದಲ್ಲಿ ಗಳಿಸಿ ನಿಮ್ಮ ಮಕ್ಕಳನ್ನು ಸೋಮಾರಿಗಳನ್ನಾಗಿ ಮಾಡಬೇಡಿರಿ. ಈ ವಿಷಯವನ್ನು ನೀವು ಗಮನಿಸಿದೆ ಇದ್ದರೆ ನಿಮ್ಮ ಮಕ್ಕಳೇ ನಿಮ್ಮ ಹಂತಕರಾಗುವರು, ಕುಳಿತು ತಿನ್ನುವರು, ನಾನು ಲೋಕಕ್ಕೆ ತಿಳಿಸ ಬೇಕೆಂದಿರುವುದನ್ನು ನಿಮಗೆ ಸಾರುತ್ತಿದ್ದೇನೆ'.

ಈ ಅಂತಿಮ ವಚನಗಳನ್ನು ಆಲಿಸುತ್ತಿದ್ದವರೆಲ್ಲರೂ ಮೌನವಾಗಿದ್ದರು, ಅವರ ಬಾಯಿಂದ ಒಂದು ಮಾತೂ ಹೊರಡಲಿಲ್ಲ, ಎಲ್ಲರ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು.

ಜಾ. ಡಿಸೋಜ, ಶಿವಮೊಗ್ಗ

ನವೆಂಬರ್ 14, ಮಕ್ಕಳ ದಿನಾಚರಣೆ

# ಅರಳುವ ಹೂವುಗಳೇ ಆಲಿಸಿರಿ.



"ಯಾಕಿಷ್ಟು ಚಿಕ್ಕ ವಯಸ್ಸಿನಲ್ಲೇ ಎಷ್ಟೋ ಮುಗ್ಧ ಜೀವಗಳು ಅರಳುವ ಮೊದಲೇ ಕಮರಿಹೋಗುತ್ತವೇ ?'' ಎಂಬುದೇ, ನನ್ನ ಯೋಚನಾ ಲಹರಿ ಮಕ್ಕಳೆಡೆಗೆ ಹರಿದಾಗ ನನ್ನನ್ನು ಅತಿಯಾಗಿ ಕಾಡುವ ಪ್ರಶ್ನೆ.

'ಸ್ನೇಹಜ್ಯೋತಿ'ಯಲ್ಲಿ ನಲ್ಮೆಯ ಮಕ್ಕಳೇ, ಮೊನ್ನೆ ತಾನೆ 'ಬೆಂಗಳೂರು ಮಿರರ್' ಆಂಗ್ಲ ದಿನಪತ್ರಿಕೆಯ ಮುಖಪುಟದಲ್ಲಿ ಬಿತ್ತರಗೊಂಡ ಸುದ್ದಿಯಿಂದ. 'ಬೈದು ಬುದ್ಧಿವಾದ ಹೇಳಿದ ಅಮ್ಮ - ನೇಣಿಗೆ ಶರಣಾದ ಮಗ' ಎಂಬ ಶೀರ್ಷಿಕೆಯನ್ನೊತ್ತ ಆ ಸುದ್ದಿಯನ್ನು ಬಹಳ ಕುತೂಹಲದಿಂದಲೂ, ಬೇಸರದಿಂದಲೂ ಓದಿದೆ. ಆ ಸುದ್ದಿಯ ಸಂಕ್ಷಿಪ್ತ ವಿವರಣೆ ಕೊಡ್ತಿದ್ದೀನಿ. ಮುಂದೆ ಓದಿ. ಬೆಂಗಳೂರಿನಲ್ಲಿ ಸಣ್ಣ ಪುಟ್ಟ ಮನೆ ಕೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದ ಪಾರ್ವತಮ್ಮನಿಗೆ ಪ್ರಶಾಂತ್ ಎಂಬ ಹೆಸರಿನ ಒಬ್ಬನೇ ಮಗನಿದ್ದ. ಬಾಲ್ಯದಲ್ಲೇ ಅಪ್ಪನನ್ನು ಕಳೆದುಕೊಂಡ ಪ್ರಶಾಂತನನ್ನು ಪಾರ್ವತಮ್ಮ ಬಹಳ ಪ್ರೀತಿ ಮಮತೆಯಿಂದ ಬೆಳೆಸಿದ್ದರು.

ಶಾಲೆಯೊಂದರಲ್ಲಿ 9ನೇ ತರಗತಿ ಓದುತ್ತಿದ್ದ ಮಗನ ಬಗ್ಗೆ ಆ ತಾಯಿ ಬೃಹತ್ ಆಶಾಗೋಪುರವನ್ನೇ ಕಟ್ಟಿಕೊಂಡಿದ್ದರು. ಅಂದು ಸಂಜೆ ಕೆಲಸ ಮುಗಿಸಿ ಮನೆಗೆ ಬಂದ ಪಾರ್ವತಮ್ಮನ ಕಣ್ಣಿಗೆ ಬಿದ್ದದ್ದು ಮನೆಯ ಮೂಲೆಯೊಂದರಲ್ಲಿ ಗುಟ್ಟಾಗಿ ಸಿಗರೇಟ್ ಸೇದುತ್ತಿದ್ದ ಪ್ರಶಾಂತ್. ನನ್ನ ಮಗ ಬೇರೆಯಂತವರಲ್ಲ ಎಂದುಕೊಂಡಿದ್ದ ಈ ತಾಯಿಗೆ ಆಘಾತವಾಯಿತು. ಮಗನಲ್ಲಿ ಇಟ್ಟಿದ್ದ ನಂಬಿಕೆ ಹುಸಿಯಾಯ್ತು. ಬಹುಶಃ ಪಾರ್ವತಮ್ಮ ಇದನ್ನು ಇಷ್ಟು ಬೇಗ ನಿರೀಕ್ಷಿಸಿರಲಿಲ್ಲ ಅಂತ ಕಾಣ್ಸುತ್ತೆ. ಮಗನೇ ತನ್ನ ಸರ್ವಸ್ವ ಅಂದುಕೊಂಡು ಹಗಲಿರುಳೆನ್ನದೆ ಅವನಿಗಾಗಿ ದುಡಿಯುತ್ತಿದ್ದ ಆ ಜೀವಕ್ಕೆ ಎಷ್ಟು ನೋವಾಗಿರಬೇಡ ! ಸಹಜವಾಗಿಯೇ ಅವರ ಕೋಪ ನೆತ್ತಿಗೇರಿತ್ತು. ಮಕ್ಕಳು ತಮ್ಮ ಕಣ್ಮುಂದೆಯೇ ದುಶ್ಚಟಗಳಿಗೆ ಬಲಿಯಾಗುವುದನ್ನು ಯಾವ ತಂದೆ - ತಾಯಿ ತಾನೇ ಸಹಿಸುತ್ತಾರೆ ? ಸಿಟ್ಟಿನಿಂದಲೇ ಪ್ರಶಾಂತನನ್ನು ಕರೆದು, ಮನಸ್ಸು ಹಗುರವಾಗುವವರೆಗೂ ಅವನಿಗೆ ಸಿಕ್ಕಾಪಟ್ಟೆ ಬೈದುಬಿಟ್ಟರು. ಅವರ ಒಡಲ ಬೇಗುದಿ, ನೋವು ಅಷ್ಟಿತ್ತು. ಆದರೆ, ಪಾಪ ! ಈ ಬೈಗುಳದ ಬುದ್ಧಿವಾದ ತನ್ನ ಮಗನ ಜೀವಕ್ಕೆ ಸಂಚಕಾರ ತರುತ್ತೆ ಅಂತ ಅವರಿಗೆ ಗೊತ್ತಿರಲಿಲ್ಲವೇನೋ !! ಪಾರ್ವತಮ್ಮ ಅಡುಗೆ ಮನೆಗೆ ಹೋಗಿ ಕಾಫಿ ಮಾಡುವಷ್ಟರಲ್ಲಿ, ತನ್ನ ರೂಮಿಗೆ ಹೋದ ಪ್ರಶಾಂತ್ ನೇಣಿಗೆ ಶರಣಾಗಿದ್ದ. ಎಂಥಾ ದುರಂತ ಅಲ್ವಾ ?

ಹಾಗಾದ್ರೆ ಆ ತಾಯಿ ತನ್ನ ಮಗನಿಗೆ ಬೈದು ಬುದ್ದಿವಾದ ಹೇಳಿದ್ದೇ ತಪ್ಪಾ ? ಖಂಡಿತ ತಪ್ಪಲ್ಲ! ಪ್ರಶಾಂತ್ ತನ್ನ ತಾಯಿ ಬೈದರು ಅನ್ನೋ ಕಾರಣಕ್ಕೆ ಹತಾಶನಾಗುವ ಬದಲು, "ನನಗಾಗಿ ಹಗಲು - ರಾತ್ರಿಯೆನ್ನದೇ ಶ್ರಮಿಸುತ್ತಿರುವ ಅಮ್ಮ ಯಾವ ಉದ್ದೇಶದಿಂದ ನನಗೆ ಬೈದು ಬುದ್ದಿವಾದ ಹೇಳಿದ್ದಾರೆ? ನನ್ನ ಭವಿಷ್ಯದ ದೃಷ್ಟಿಯಿಂದಲೇ ತಾನೇ ? ಇಷ್ಟು ಚಿಕ್ಕ ವಯಸ್ಸಿನಲ್ಲೇ ದುಶ್ಚಟಗಳಿಗೆ ಬಲಿಯಾದರೆ ನಾನೇಗೇ ತಾನೇ ಸುಂದರ ಭವಿಷ್ಯವನ್ನು ರೂಪಿಸಿಕೊಳ್ಳಬಲ್ಲೆ''? ಎಂದು ಕನಿಷ್ಟ ಪಕ್ಷ ಒಂದೆರೆಡು ನಿಮಿಷ ಯೋಚಿಸಿದ್ದರೆ ಬಹುಶಃ ಅವನು ತನ್ನ ಅಮೂಲ್ಯ ಬದುಕಿಗೆ ಅಂತ್ಯ ಬರೆಯುವ ನಿರ್ಧಾರವನ್ನು ತೆಗೆದುಕೊಳ್ಳುತ್ತಿರಲಿಲ್ಲ. ತನ್ನ ತಾಯಿಯನ್ನು, ಬಂದು-ಮಿತ್ರರನ್ನು ದುಃಖ ಸಾಗರದಲ್ಲಿ ಮುಳುಗಿಸಲು ಕಾರಣವಾಗುತ್ತಿರಲಿಲ್ಲ. ಅಲ್ವಾ?

ಮಾನವ ಜನ್ಮ ಶ್ರೇಷ್ಟವಾದದ್ದು ಮಕ್ಕಳೇ, ಎಂದೂ ದುಡಕಬೇಡಿ, ಆತ್ಮಹತ್ಯೆ ಮಾಡಿಕೊಳ್ಳೋರು ಹೇಡಿಗಳು ಮಾತ್ರ. ನೀವು ದೇವರಿಗೆ ಅತ್ಯಂತ ಪ್ರಿಯರಾದವರು. ಸೃಷ್ಟಿಕರ್ತ ದೇವ ತಂದೆಯ ಅನಂತ ಪ್ರೀತಿಯ ಸಂಕೇತಗಳು ನೀವು. ನಿಮ್ಮ ಕುಟುಂಬವನ್ನು ಬೆಳಗಿಸುವ ಹಣತೆಗಳು ನೀವು. ಈ ಸತ್ಯವನ್ನು ಯಾವಾಗಲು ನೆನಪಿನಲ್ಲಿಡಿ.

ಈ ಲೇಖನವನ್ನು ಓದುತ್ತಿರುವ ಪೋಷಕರಿಗೊಂದು ಕಿವಿಮಾತು : ನಿಮ್ಮ ಮಕ್ಕಳು ತಮ್ಮ ವಯಸ್ಸಿಗೂ ಮೀರಿದ ತಪ್ಪುಗಳನ್ನು ಮಾಡಿದಾಗ ನಿಮಗೆ ಕೋಪ ಬರೋದು ಸಹಜ. ಪ್ಲೀಸ್ ! ತಾಳ್ಮೆ ಕಳೆದು ಕೊಳ್ಳಬೇಡಿ. ಅವರನ್ನು ತಿದ್ದುವ ಪರಿಯಲ್ಲಿ ಬದಲಾವಣೆ ಮಾಡಿಕೊಳ್ಳಿ. ಕೋಪದಿಂದ ಅವರನ್ನು ಬೈದು, ಹೊಡೆದು ಶಿಕ್ಷಿಸುವ ಬದಲು ಅವರನ್ನು ಪ್ರೀತಿಯಿಂದ ಅಪ್ಪಿಕೊಂಡು ಅವರ ತಪ್ಪನ್ನು ನಯವಾಗಿ ಮನವರಿಕೆಮಾಡಿಕೊಡಿ. ತಂದೆ ತಾಯಿಯ ಪ್ರೀತಿ ಮಮತೆಯಿಂದ ಪ್ರಪಂಚದಲ್ಲಿ ಎಷ್ಟೋ ಅದ್ಭುತಗಳು ಇಂದಿಗೂ ನಡೆಯುತ್ತಿವೆ ಎಂಬ ಸತ್ಯಾಂಶವನ್ನು ಮರೆಯದಿರಿ. ಶುಭಹಾರೈಕೆಗಳು!

ಸಹೋ. ಅನಿಲ್ ಕುಮಾರ್,
ಮರಿಯಾನಗರ

# ಮೃತರಾದ ಭಕ್ತ ವಿಶ್ವಾಸಿಗಳ ಸ್ಮರಣೆಯ ಹಬ್ಬ.

ಪವಿತ್ರ ಕಥೋಲಿಕ ಧರ್ಮಸಭೆಯ ನವೆಂಬರ್ ತಿಂಗಳಲ್ಲಿ ದಿನಾಂಕ 1 ರಂದು ಸಕಲ ಸಂತರ ಹಬ್ಬವನ್ನು ಹಾಗೂ 2 ರಂದು ಮೃತ ವಿಶ್ವಾಸಿಗಳ ಸ್ಮರಣೆಯ ಹಬ್ಬವನ್ನು ಆಚರಿಸುತ್ತದೆ. ಸಕಲ ಸಂತರ ಹಬ್ಬಕ್ಕಿಂತ ಮೃತ ಭಕ್ತಾದಿಗಳ ಸ್ಮರಣಾರ್ಥ ಹಬ್ಬವನ್ನು ಹೆಚ್ಚು ವಿಜೃಂಭಣೆಯಿಂದ ಆಚರಿಸುವುದು ಪವಿತ್ರ ಕಥೋಲಿಕ ದೇವ ಜನಾಂಗದಲ್ಲಿನ ಮೃತರ ಪುನರುತ್ಥಾನದಲ್ಲಿನ ನಂಬಿಕೆಯ ವಿಶ್ವಾಸದ ಪರಮಾವಧಿ. ಈ ಹಬ್ಬವನ್ನು ಸಮಾಧಿ ಹಬ್ಬವೆಂತಲೂ ಕರೆಯುತ್ತೇವೆ.

ಮೃತರ ಸ್ಮರಣೆಯ ಹಬ್ಬಕ್ಕೆ ಕೆಲವು ದಿನಗಳ ಹಿಂದೆಯೇ ತಮ್ಮ ಕುಟುಂಬದಲ್ಲಿನ ಮೃತರಾದವರ ಸಮಾಧಿಗಳನ್ನು ಸ್ವಚ್ಛಗೊಳಿಸಿ ಸುಣ್ಣ ಬಣ್ಣ ಬಳಿದು ಹಬ್ಬದ ದಿನದಂದು ಹೂಗಳಿಂದ ಶೃಂಗರಿಸಿ ಧೂಪ, ಕ್ಯಾಂಡಲ್, ಅಗರಬತ್ತಿಗಳನ್ನು ಹಚ್ಚಿ ಮೃತರಾದವರಿಗಾಗಿ ಪ್ರಾರ್ಥಿಸಿ ದಿವ್ಯ ಬಲಿಪೂಜೆಯನ್ನರ್ಪಿಸುವುದು ನಮ್ಮ ಕಥೋಲಿಕ ಪೂರ್ವಜರಿಂದ ಬಂದ ಸುಸಂಪ್ರದಾಯಿಕ ವಾಡಿಕೆ. ಈ ಆಚರಣೆಯು ಕೆಲವು ವಿಭಜಿತ ಕ್ರೈಸ್ತ ಪಂಗಡಕ್ಕೆ ಹಾಸ್ಯಾಸ್ಪದವಾಗಿ ಕಾಣುತ್ತದೆ. ಇವರ ಕಪಟ, ದುರ್ಬೋಧನೆಯಿಂದ ಕೆಲವು ಕಥೋಲಿಕರು ಸಹ ಮಾರು ಹೋಗಿ ತಮ್ಮ ಪೂರ್ವಜರ ಸಮಾಧಿಗಳನ್ನು ಸ್ವಚ್ಛಗೊಳಿಸುವುದನ್ನು ಹಾಗೂ ಪರಿಶುದ್ಧ ದಿವ್ಯ ಬಲಿಪೂಜೆಯನ್ನರ್ಪಿಸಿ ಪ್ರಾರ್ಥಿಸುವುದನ್ನು ತೊರೆದಿದ್ದಾರೆ. ಇದೊಂದು ವಿಪರ್ಯಾಸವೇ ಸರಿ.

ಈ ವಿಭಿನ್ನ ಪಂಗಡದವರ ದುರ್ಬೋಧನಾ ಪ್ರಶ್ನೆ ಏನೆಂದರೆ ಸಮಾಧಿಯನ್ನು ಸ್ವಚ್ಛಗೊಳಿಸಿ ಸುಣ್ಣ ಬಳಿದು ಶೃಂಗರಿಸುವುದು ಯಾಕೆ? ಸಮಾಧಿಯ ಒಳಗೆ ಕೇವಲ ಎಲುಬುಗಳು ಮಾತ್ರ ಇರುವಾಗ ಹೊರಗಿನ ಶೃಂಗಾರ ಏತಕ್ಕಾಗಿ? ಎಂಬುದು ಅವರ ಕುತರ್ಕ!

ಪ್ರಿಯ ಭಕ್ತಾದಿಗಳೇ ಪವಿತ್ರ ಬೈಬಲ್ ಶ್ರೀಗ್ರಂಥದಲ್ಲಿ ಪ್ರಭು ಯೇಸು ಸ್ವಾಮಿ ನುಡಿಯುತ್ತಾರೆ; ನೀವು ಸುಣ್ಣ ಬಳಿದ ಸಮಾಧಿಗಳು ಹೊರ ನೋಟಕ್ಕೇನೂ ಅವು ಥಳಕ್ಕಾಗಿವೆ. ಒಳಗೋ ಸತ್ತವರ ಮೂಳೆಗಳಿಂದಲೂ ಕೊಳಿಕಿನಿಂದಲೂ ತುಂಬಿವೆ'' (ಮತ್ತಾಯ 23:27). ಈ ವಾಕ್ಯದಲ್ಲಿ ಪ್ರಭು ಯೇಸುವಿನ ಕಾಲದಲ್ಲಿ ಸುಣ್ಣ ಬಳಿದ ಸಮಾಧಿಗಳು ಇದ್ದು, ಅವುಗಳಿಗೆ ಸುಣ್ಣ ಬಳಿಯುತ್ತಿದ್ದರು! ಎಂದು ತಿಳಿಯುತ್ತದೆ. ಅಂದರೆ ನಮ್ಮ ಇಂದಿನ ಸಮಾಧಿಯ ಸ್ವಚ್ಛತಾ ಕಾರ್ಯವು ಸನಾತನ ಕಾಲದಿಂದಲೂ ಬಂದದ್ದು ಎಂಬುದಂತೂ ಸತ್ಯ!

ಬೈಬಲ್ ಶ್ರೀಗ್ರಂಥದ ಪ್ರಕಾರ ಸಮಾಧಿಗಳು ಬಂಡೆಯಲ್ಲಿ ಕೊರೆಯಲಾದ ಸಮಾಧಿಗಳು ಅಥವಾ ಗವಿಯ ರೂಪದಲ್ಲಿನ ಸಮಾಧಿಗಳು (ಯೊವಾನ್ನ 11:38, ಲೂಕ 23:53). ಧರ್ಮಸಭೆಯ ಇತಿಹಾಸದಲ್ಲಿನ ಪ್ರಕಾರ ಸುರಂಗಗಳ ಗುಹೆಗಳ ಸಮಾಧಿಗಳು (ಚರ್ಚ್ ಇತಿಹಾಸ ಪುಟ 18) ಪ್ರಭು ಕ್ರಿಸ್ತರು ಸುಣ್ಣ ಬಳಿದ ಸಮಾಧಿಗಳು ಎಂದು ಸಂಬೋಧಿಸುವುದನ್ನು ಕಾಣುವಾಗ ನಾವು ಸಹ ನಮ್ಮ ಪೂರ್ವಿಕರ ಸಮಾಧಿಗಳಿಗೆ ಸುಣ್ಣ ಬಣ್ಣ ಬಳಿಯಬಹುದು ಎಂದು ತೋರುತ್ತದೆ. ಮುಂದಿನ ವಾಕ್ಯ "ಒಳಗೋ ಸತ್ತವರ ಮೂಳೆಗಳಿಂದ ತುಂಬಿದೆ'' ಈ ವಾಕ್ಯಕ್ಕೂ ಸಹ ಪವಿತ್ರ ಬೈಬಲ್ ಶ್ರೀಗ್ರಂಥವು ಉತ್ತರಿಸುತ್ತದೆ. ಯೆಜೇಕಿಯೇಲನು 37:3-10 ರಲ್ಲಿ "ದೇವರ ಆಜ್ಞೆಯಂತೆ ಯೆಜೇಕಿಯೇಲನು ದೇವರ ವಾಕ್ಯ ನುಡಿದು ಪ್ರಾರ್ಥಿಸಿ ಎಲುಬುಗಳ ಮೇಲೆ ಊದಿದಾಗ ಅವುಗಳಿಗೆ ಜೀವ ಬಂತು''. ಪವಿತ್ರ ಬೈಬಲ್ ಶ್ರೀಗ್ರಂಥದಲ್ಲಿನ ಈ ದೇವರ ವಾಕ್ಯಗಳಿಂದ ಪ್ರೇರಿತರಾದ ಕಥೋಲಿಕ ದೇವ ಜನಾಂಗವಾದ ನಾವುಗಳು ಸಹ ನಮ್ಮ ಪೂರ್ವಜರ ಆತ್ಮಗಳು ಮತ್ತೆ ಪುನರ್ಜೀವಿಸುವಾಗ ಅವರ ಇಹಲೋಕದಲ್ಲಿನ ಪಾಪದ ಕಳಂಕರಹಿತರಾಗಿ ಪುನರುತ್ಥನವಾಗಲಿ ಎಂಬ ವಿಶ್ವಾಸದಿಂದಲೇ ಸಮಾಧಿಯ ಬಳಿಯಲ್ಲಿ ದಿವ್ಯ ಬಲಿಪೂಜೆಯನ್ನರ್ಪಿಸಿ ಪ್ರಾರ್ಥಿಸುವುದು. ಸಂತ ಪೌಲರು ನುಡಿಯುತ್ತಾರೆ. "ಕ್ರಿಸ್ತ ಯೇಸು ಪುನರುತ್ಥಾನ ಹೊಂದಿದ್ದೇನೋ ಸತ್ಯಸ್ಯ ಸತ್ಯ. ಅವರ ಪುನರುತ್ಥಾನವು ಸತ್ತವರು ಪುನರುತ್ಥಾನ ಹೊಂದುತ್ತಾರೆ ಎನ್ನುವುದಕ್ಕೆ ಪ್ರಮಾಣ. ಆದಾಮನ ಸಂಬಂಧದಿಂದ ಎಲ್ಲರೂ ಸಾವಿಗೀಡಾದಂತೆ ಕ್ರಿಸ್ತ ಯೇಸುವಿನ ಸಂಬಂಧದಿದ ಎಲ್ಲರೂ ಜೀವಂತರಾಗಿ ಏಳುತ್ತಾರೆ. (1 ಕೊರಿಂಥ 15:20). ಆದುದರಿಂದ ಇಂತಹ ಪುನವರುತ್ಥಾನ ಹೊಂದುವ ಮೃತ ಭಕ್ತ ವಿಶ್ವಾಸಿಗಳ ಸಮಾಧಿಗಳನ್ನು ಸ್ವಚ್ಛಗೊಳಿಸಿ ಶೃಂಗರಿಸಿ ಅವರುಗಳಿಗೆ ಪ್ರಾರ್ಥಿಸುವುದು ಉನ್ನತ ಸಂಸ್ಕೃತಿಯಲ್ಲವೆ?

ಮಥಿಯಾಸ್ ಕುಮಾರ್,
ಯಾದವಗಿರಿ

ಪ್ರಭು ಯೇಸು ಕ್ರಿಸ್ತರು ಸಹ ಮೃತ ಆತ್ಮಗಳಿಗೆ ಶುಭ ಸಂದೇಶವನ್ನು ಸಾರಿದರು!! ಎಂಬುದನ್ನು ಪವಿತ್ರ ಬೈಬಲ್ ಶ್ರೀಗ್ರಂಥ ತಿಳಿಸುತ್ತದೆ. ಹೀಗಿರುವಲ್ಲಿ ನಾವುಗಳು ಕೂಡ ಮೃತ ಆತ್ಮಗಳಿಗಾಗಿ ಪ್ರಾರ್ಥಿಸುವುದು ಯುಕ್ತವಾಗಿದೆ. ಸಂತ ಪ್ರೇತ್ರರು ದೈವ ಪ್ರೇರಿತರಾಗಿ ನುಡಿಯುತ್ತಾರೆ "ದೇಹದಲ್ಲಿ ಅವರು (ಪ್ರಭು ಯೇಸು) ವಧಿತರಾದರೂ ಆತ್ಮದಲ್ಲಿ ಜೀವಂತರಾದರು. ಆಧ್ಯಾತ್ಮಿಕ ವಾಗಿಯೇ ತೆರಳಿ ಸೆರೆಯಲ್ಲಿದ್ದ ಆತ್ಮಗಳಿಗೆ ಶುಭ ಸಂದೇಶವನ್ನು ಬೋಧಿಸಿದರು'' (1 ಪೇತ್ರ 3:18:19). ಪ್ರಭು ಯೇಸು ಕ್ರಿಸ್ತರಿಂದ ಶುಭ ಸಂದೇಶವನ್ನಾಲಿಸಿದ ಆತ್ಮಗಳು ಯಾವುವೆಂದರೇ "ಪೂರ್ವಕಾಲದಲ್ಲಿ ನೋವನು ನಾವೆಯನ್ನು ಕಟ್ಟುತ್ತಿದ್ದಾಗ ತಾಳ್ಮೆಯಿಂದಿದ್ದ ದೇವರಿಗೆ ಅವಿದೇಯರಾಗಿದ್ದ ಆತ್ಮಗಳೇ ಅವು'' (1 ಪೇತ್ರ 3:20). ಈ ವಾಕ್ಯದಲ್ಲಿ ತಿಳಿಯುತ್ತದೆ ಪ್ರಭು ಯೇಸುಕ್ರಿಸ್ತರಿಂದ ಶುಭಸಂದೇಶವನ್ನಾಲಿಸಿ ಸೆರೆಯಿಂದ ವಿಮುಕ್ತಗೊಂಡ ಆ ಆತ್ಮಗಳು, ನೋಹನ ಕಾಲದಲ್ಲಿ ದೇವರಿಗೆ ಅವಿಧೇಯರಾಗಿದ್ದರೂ ಸಹ ನೋಹನು ಸರ್ವೇಶ್ವರ ಸ್ವಾಮಿಯ ಆಜ್ಞೆಯ ಮೇರೆಗೆ ನಾವೆಯನ್ನು ಕಟ್ಟುತ್ತಿದ್ದಾಗ ನೋಹನ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡದ ತಾಳ್ಮೆಯಿಂದಿದ್ದ ಕಾರಣ ನಮ್ಮ ಪ್ರಭು ಯೇಸುಕ್ರಿಸ್ತರಿಂದ

ಶುಭಸಂದೇಶದ ಬೋಧನೆಗೆ ಅರ್ಹವಾದವು. ಹಾಗೆಯೇ ನಮ್ಮ ಪಿತೃಗಳು ಹಾಗೂ ಮೃತ ಭಕ್ತವಿಶ್ವಾಸಿಗಳು ದೇವರಿಗೆ ಅವಿಧೇಯರಾಗಿ ನಡೆದುಕೊಂಡಿದ್ದರೂ ಸಹ ಕೆಲವು ಒಳ್ಳೆಯ ಕಾರ್ಯಗಳನ್ನು ಮಾಡಿರಬಹುದಲ್ಲವೆ ?

ಪ್ರಭು ಕ್ರಿಸ್ತರು ನುಡಿಯುತ್ತಾರೆ "ರೋಗಿಗಳನ್ನು ಗುಣಪಡಿಸಿರಿ, ಸತ್ತವರನ್ನು ಮತ್ತೆ ಬದುಕಿಸಿರಿ" (ಮತ್ತಾಯ 10:8). ಸತ್ತವರನ್ನು ಮತ್ತೆ ಬದುಕಿಸುವುದು ಹೇಗೆ ? ಅವರಿಗಾಗಿ ಪ್ರಾರ್ಥಿಸುವುದೇ ಆಗಿದೆ. ಏಕೆಂದರೆ ಪ್ರಭು ಯೇಸು ಕ್ರಿಸ್ತರು ನುಡಿಯುತ್ತಾರೆ. ಸತ್ತು ಸಮಾಧಿಯಲ್ಲಿರುವರೆಲ್ಲರೂ ಕ್ರಿಸ್ತರ ಧ್ವನಿಯನ್ನು ಕೇಳುವ ಕಾಲ ಬರುವುದು ಹಾಗೆ ಕೇಳಿದವರೆಲ್ಲರೂ ಸಮಾಧಿಯನ್ನು ಬಿಟ್ಟು ಎದ್ದು ಬರುವರು ಸಜ್ಜನರು ಸಜ್ಜೀವಕ್ಕಾಗಿ ಪುನರುತ್ಥಾನ ಆಗುವರು........... (ಯೊವಾನ್ನ 5:28.29) ಆದುದರಿಂದಲೇ ನಮ್ಮ ಕುಟುಂಬದಲ್ಲಿ ಮೃತರಾದವರು ಸಜ್ಜೀವಕ್ಕಾಗಿ ಪುನರುತ್ಥಾನ ರಾಗಲೀ ಎಂಬುದೇ ನಮ್ಮ ಉದ್ದೇಶವಾಗಿದೆ. ಇದನ್ನು ಅಪಹಾಸ್ಯ ಮಾಡುವುದು ದಾರಿ ತಪ್ಪಿಸುವುದು ಎಷ್ಟು ಸರಿ ? ದೇವರ ವಾಕ್ಯ ತಿಳಿಸುತ್ತದೆ.

"ಅಜ್ಞಾ ಘೋಷವಾದಾಗ ಪ್ರಧಾನ ದೂತನ ಧ್ವನಿಯು ಕೇಳಿ ಬಂದಾಗ, ದೇವರ ತುತ್ತೂರಿ ನಾದಗೈದಾಗ, ಪ್ರಭುವೇ ಸ್ವರ್ಗದಿಂದ ಇಳಿದು ಬರುತ್ತಾರೆ. ಆಗ ಕ್ರಿಸ್ತಸ್ಥರಾಗಿ ಮೃತರಾದವರು ಮೊದಲು ಎದ್ದು ಬರುತ್ತಾರೆ. ಆಮೇಲೆ, ಇನ್ನೂ ಬದುಕಿರುವ ನಾವು (ಬದುಕ್ಕಿದ್ದರೆ!!಼) ಎದ್ದು ಬಂದವರೊಡನೆ ಆಕಾಶ ಮಂಡಲದಲ್ಲಿ ಪ್ರಭುವನ್ನು ಎದುರುಗೊಳ್ಳಲು ಮೇಘಾರೂಢವಾಗಿ ಮೇಲಕ್ಕೆ ಒಯ್ಯಲ್ಪ ಡುತ್ತೇವೆ. ಹೀಗೆ ಸರ್ವದಾ ನಾವು ಪ್ರಭುವಿನೊಂದಿಗೆ ಇರುತ್ತೇವೆ. ಆದ್ದರಿಂದ ಈ ಮಾತುಗಳಿಂದ (ಪವಿತ್ರ ವಾಕ್ಯಗಳಿಂದ) ಒಬ್ಬರನ್ನೊಬ್ಬರು ಸಂತೈಸಿಕೊಳ್ಳಿ (1 ಥೆಸಲೋನಿಕ 4:16-18). ಈಗ ಹೇಳಿ ನಮ್ಮ ಪ್ರಾರ್ಥನೆ, ದಿವ್ಯ ಬಲಿಯರ್ಪಣೆಯೆಲ್ಲವು ಸರಿ ತಾನೆ. ಆದುದರಿಂದಲೇ ನಾವು (ಕಥೋಲಿಕರು) ನಮ್ಮ ಪೂರ್ವಜರಿಗಾಗಿ ಪ್ರಾರ್ಥಿಸುವುದು, ಸಮಾಧಿಗಳನ್ನು ಶೃಂಗರಿಸುವುದು. ಏಕೆಂದರೆ ಲೋಕಾಂತ್ಯದಲ್ಲಿ ಸಮಾಧಿಗಳು ತೆರೆದು ನಮ್ಮ ಪೂರ್ವಜರು ದೇಹ ಸಹಿತವಾಗಿ ಎದ್ದು ಬರುತ್ತಾರೆ ಎಂಬುದು ನಮ್ಮ ವಿಶ್ವಾಸದ ಪರಾಕಾಷ್ಠತೆ. ಪವಿತ್ರ ಬೈಬಲ್ ಶ್ರೀಗ್ರಂಥದಲ್ಲಿ ಇದಕ್ಕೆ ಹಲವು ನಿದರ್ಶನಗಳು ಹಾಗೂ ಪ್ರಕಟಣೆಗಳು ಸಾಕಷ್ಟಿವೆ. ಉದಾ: ಮತ್ತಾಯ 27:52, ಯೊವಾನ್ನ 11:39, ರೋಮನ್ನರಿಗೆ 8:11, ಇದೆಲ್ಲಾ ಸಾಧ್ಯವೆ ? ಎಂದೇಳಬಹುದು "ಮನುಷ್ಯರಿಗಿದು ಅಸಾಧ್ಯ. ಆದರೆ ದೇವರಿಗೆ ಎಲ್ಲವು ಸಾಧ್ಯ" (ಮತ್ತಾಯ 19:26). ದೇವರಿಂದ ಬಂದ ವಾರ್ತೆ ನೆರವೇರಿಯೇ ತೀರುವುದು, ಇದು ಸತ್ಯ.

ಯೇಸುಕ್ರಿಸ್ತರು ನುಡಿಯುತ್ತಾರೆ "ಪುತ್ರನನ್ನು ಕಂಡು ಆತನಲ್ಲಿ ವಿಶ್ವಾಸವಿಡುವ ಪ್ರತಿಯೊಬ್ಬನೂ ನಿತ್ಯ ಜೀವವನ್ನು ಪಡೆಯಬೇಕೆಂಬುದೇ ನನ್ನ ಪಿತನ ಸಂಕಲ್ಪ. ಅಂಥವನನ್ನು ಅಂತಿಮ ದಿನದಂದು ನಾನು ಜೀವಕ್ಕೆ ಎಬ್ಬಿಸುತ್ತೇನೆ (ಯೊವಾನ್ನ 6:39-40). ಹಾಗೆಯೇ "ಪುನರುತ್ಥಾನವೂ ಜೀವವೂ ನಾನೇ. ನನ್ನಲ್ಲಿ ವಿಶ್ವಾಸವಿಟ್ಟವನು ಸಾವಿಗೀಡಾದರೂ ಜೀವಿಸುವನು (ಯೊವಾನ್ನ 11:25). ಇಂತಹ ಸಾಕಷ್ಟು ಪವಿತ್ರ ವಾಕ್ಯಗಳು ಬೈಬಲ್ ಶ್ರೀಗ್ರಂಥದಲ್ಲಿವೆ. ಈ ಪವಿತ್ರ ವಾಕ್ಯಗಳೇ ಸಮಾಧಿ ಹಬ್ಬಕ್ಕೆ ಪ್ರೇರಣೆಯಾಗಿವೆ.

ಪವಿತ್ರ ಬೈಬಲ್ ಶ್ರೀಗ್ರಂಥವು ತಿಳಿಸುತ್ತದೆ. "ಮೃತರ ಪುನರುತ್ಥಾನದಲ್ಲಿ ನಂಬಿಕೆ ಇದ್ದುದರಿಂದಲೇ ಯೂದನು ಈ ಪುಣ್ಯಕಾರ್ಯ ಮಾಡಿದನು. ಮೃತರಾದವರು ಮರಳಿ ಪುನರುತ್ಥಾನವಾಗುತ್ತಾರೆ ಎಂಬುದನ್ನು ವಿಶ್ವಾಸಿಸದೆ ಹೋಗಿದ್ದರೆ ಅಂಥವರಿಗೋಸ್ಕರ ಪ್ರಾರ್ಥನೆ ಮಾಡುವುದು ನಿರರ್ಥಕವಾಗುತ್ತಿತ್ತು, ಮೂರ್ಖತನವಾಗುತ್ತಿತ್ತು. ಆದರೆ ದೈವಭಕ್ತರಾಗಿ ಮಡಿದವರಿಗೆ ಮಹತ್ತರವಾದ ಸಂಭಾವನೆ ದೊರಕುವುದೆಂಬ ನಿರೀಕ್ಷೆ ಇದ್ದುದರಿಂದಲೇ ಯೂದನ ಆಲೋಚನೆ ನಿಜಕ್ಕೂ ಪವಿತ್ರವಾಗಿತ್ತು, ಪುನೀತವಾಗಿತ್ತು. ಆದುದರಿಂದಲೇ ಮೃತರಾದವರು ತಮ್ಮ ಪಾಪದಿಂದ ವಿಮೋಚನೆ ಹೊಂದಲೆಂದು ಅವರಿಗೋಸ್ಕರ ಅವನು ಪಾಪ ಪರಿಹಾರ ಬಲಿಯನ್ನು ಸಮರ್ಪಿಸಿದನು (2 ಮಕ್ಕಬಿ 12:43-45).

ಈ ಮೇಲ್ಕಂಡ ಪವಿತ್ರ ಬೈಬಲ್ ಶ್ರೀಗ್ರಂಥದ ವಾಕ್ಯಗಳೇ ಸಮಾಧಿ ಹಬ್ಬಕ್ಕೆ ಹಾಗೂ ಮೃತರಾದವರ ಸ್ಮರಣಾರ್ಥ ಪೂಜಾವಿಧಿಗಳಿಗೆ ಪ್ರಮುಖ ಆಧಾರವಾಗಿದೆ ಹಾಗೂ ಸುಸಂಪ್ರದಾಯವಾಗಿ ಚಾಲ್ತಿಯಲ್ಲಿದೆ.

ಪ್ರಿಯರೇ ಬಹುಮುಖ್ಯವಾಗಿ ಜ್ಞಾಪಕದಲ್ಲಿಡಿ ನಮ್ಮ ಪ್ರಾರ್ಥನೆಗಳು, ಪೂಜಾ ವಿಧಿಗಳು ಮೃತ ಆತ್ಮಗಳ ವಿಶ್ರಾಂತಿ ಕೆಡಿಸುವುದಕ್ಕಲ್ಲ. ಬದಲಾಗಿ ನಿತ್ಯ ಜ್ಯೋತಿಯು ನಮ್ಮ ಪೂರ್ವಜರ ಆತ್ಮಗಳ ಮೇಲೆ ಪ್ರಕಾಶಿಸಲಿ ಎಂಬುದೇ ಕಥೋಲಿಕರ ಸುಇಚ್ಛೆಯಾಗಿದೆ. ನಮ್ಮ ಪ್ರಾರ್ಥನಾ ವಿಧಿಗಳಿಂದ ಸ್ವರ್ಗೀಯ ಪಿತನ ಸಮ್ಮುಖದಲ್ಲಿರುವ ನಮ್ಮ ಪೂರ್ವಜರ ದೂತರುಗಳು (ಮತ್ತಾಯ 18:10) ಸಂತೋಷಿಸುತ್ತಾರೆ ! ಹಾಗೂ ನಮಗಾಗಿ ಅವರುಗಳು ಪ್ರಾರ್ಥಿಸುತ್ತಾರೆ.

ನನ್ನ ಪ್ರೀತಿಯ, ದೇವರ ಸ್ವಕೀಯ ಜನರಾದ ಸಮಸ್ತ ಕಥೋಲಿಕ ದೇವ ಜನಾಂಗದವರಲ್ಲಿ ನನ್ನದೊಂದು ಮನವಿ : ಸಮಾಧಿಯ ಮೇಲೆ ಹೂಗಳಿಂದ ಅಲಂಕರಿಸುವುದು ನಮ್ಮ ಪ್ರೀತಿಯ ಸಂಕೇತವಾಗಿದೆ. ಅಗರಬತ್ತಿ, ಧೂಪ, ಮೇಣದ ಬತ್ತಿಗಳು ನಮ್ಮ ಆಧ್ಯಾತ್ಮಿಕ ಸಂಕೇತವಾಗಿದೆ. ಆದರೇ ..... ? ಸಮಾಧಿಯ ಮೇಲೆ ಆಹಾರ ಪದಾರ್ಥಗಳು, ಮಾಂಸಾಹಾರದ ಅಡುಗೆಯ ವಿವಿಧ ಭಕ್ಷ್ಯ, ಭೋಜನಗಳನ್ನು, ಮಧ್ಯವನ್ನು ಇಡುವುದು ಸರಿ ಅಲ್ಲದ ಒಂದು ಕ್ರಮವಾಗಿದೆ. ಹಾಗೆಯೇ ಪವಿತ್ರ ದಿವ್ಯ ಬಲಿಪೂಜೆ ನಡೆಯುವ ವೇಳೆಯಲ್ಲಿ (ಸಮಾಧಿಯ ಬಳಿ) ಪಟಾಕಿ, ಸಿಡಿಮದ್ದುಗಳನ್ನು ಸಿಡಿಸುವುದು ನಿಜಕ್ಕೂ ಮೂರ್ಖತನವಾಗಿದೆ. ನಮ್ಮ ಸಮಾಧಿಗಳು ಪಟಾಕಿಗಳನ್ನು ಸಿಡಿಸುವ ಸ್ಥಳ ಅಲ್ಲವೆಂಬುದು ನಮ್ಮ ನೆನಪಿನಲ್ಲಿರಲಿ. ಆಶೀರ್ವಾದ ಪಡೆಯುವಲ್ಲಿ ಶಾಪವನ್ನು ಪಡೆಯುವ ಅಪಾಯವಿದೆ. ಏಕೆಂದರೆ ನಮ್ಮ ಪೂರ್ವಜರ ವಿಶ್ರಾಂತಿಗೆ ಭಂಗ ತರುವುದು ಮಹಾಪರಾಧ ವಾಗಿದೆ. ಆದುದರಿಂದ ಇಂತಹ ಕೃತ್ಯಗಳಿಂದ ದೂರವಿರೋಣ. ಮೃತ ಭಕ್ತಾದಿಗಳಿಗಾಗಿ ಪ್ರಾರ್ಥಿಸೋಣ.

ನವೆಂಬರ್ 1, ಕರ್ನಾಟಕ ರಾಜ್ಯೋತ್ಸವ

# ಕನ್ನಡಾಂಭೆಯ ಜನ್ಮದಿನಕ್ಕೆ ಕ್ರೈಸ್ತ ವಿದ್ವಾಂಸರ ಕಾಣಿಕೆ

ಉದಯವಾಯಿತು ನಮ್ಮ ಚೆಲುವ ಕನ್ನಡ ನಾಡು ಜನ್ಮ ತಳೆದ ನಮ್ಮ ಕರುನಾಡಿಗೆ 55 ರ ಸಂಭ್ರಮ ! ಉದಯಿಸಿದ ಕರುನಾಡಿನ ಇತಿಹಾಸದಲ್ಲಿ ವಿದೇಶಿ ಕ್ರೈಸ್ತ ವಿದ್ವಾಂಸರ ಹಾಗೂ ಸ್ವದೇಶಿ ವಿದ್ವಾಂಸ ಕ್ರೈಸ್ತ ಕುಲದ ಅವಿಸ್ಮರಣೀಯ ಕೊಡುಗೆಗಳನ್ನು ಮೆಲುಕು ಹಾಕುವ ಸದುದ್ದೇಶವೇ ಈ ಪ್ರೇಮ ಲೇಖನದ ಬಹುದ್ದೇಶ ! ಕನ್ನಡ ಪ್ರೇಮ ಕುಲದ ಮಡಿಲಿಗೆ....

ಕರ್ನಾಟಕದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಗಳು ಭವ್ಯ ಮತ್ತು ಸುಧೀರ್ಘವಾದರೂ ಕರ್ನಾಟಕ ಮತ್ತು ಕನ್ನಡಿಗರು ಹರಿದು ಹಂಚಾಗಿ ಹೋಗಿದ್ದರು. ಕನ್ನಡಿಗರು ಇದ್ದರೇ ಹೊರತು ಕನ್ನಡ ನಾಡು - ಕರ್ನಾಟಕ ಅಸ್ತಿತ್ವದಲ್ಲಿರಲಿಲ್ಲ. ಕರ್ನಾಟಕವನ್ನು ಆಳಿದ ಗಂಗರು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಕರ್ನಾಟಕಕ್ಕೆ ರಾಜಕೀಯ ಐಕ್ಯತೆ ಮತ್ತು ರಾಜಕೀಯ ಭವ್ಯತೆಗಳನ್ನು ದೊರಕಿಸಿ ಕೊಟ್ಟಿದ್ದರು. ಆದರೆ ಕಾಲಕ್ರಮೇಣ ಕರ್ನಾಟಕವು ರಾಜಕೀಯವಾಗಿ ಛಿದ್ರಛಿದ್ರವಾಗಿ ಒಡೆದು ಅನೈಕ್ಯತೆಯ ಬೀಡಾಯಿತು.

ಭಾರತವನ್ನು ಆಕ್ರಮಿಸಿದ ಬ್ರಿಟೀಷರು ಕರ್ನಾಟಕದ ಐಕ್ಯತೆಗೆ ಕೊಡಲಿ ಪೆಟ್ಟು ಕೊಟ್ಟರು ಎನ್ನುತ್ತದೆ ಇತಿಹಾಸ ! ಆದರೆ ಕನ್ನಡಕ್ಕೆ ಕರ್ನಾಟಕಕ್ಕೆ ಬ್ರಿಟೀಷರ ಕೊಡುಗೆ ಸ್ತುತ್ಯಾರ್ಹವಾದುದು, ಕನ್ನಡದ ಪುನರುತ್ಥಾನ ಹಾಗೂ ಕರ್ನಾಟಕದ ಜಾಗೃತಿಗೆ ಪಾಶ್ಚಾತ್ಯ ಶಿಕ್ಷಣ ಪ್ರೇರಣೆ ನೀಡಿತು. ಹಲವಾರು ಪ್ರಖ್ಯಾತ ವಿದೇಶಿ ಕ್ರೈಸ್ತ ವಿದ್ವಾಂಸರು ಕನ್ನಡ ಭಾಷೆಯನ್ನು ಕಲಿತು ಕನ್ನಡಕ್ಕಾಗಿ ಹಾಗೂ ಕರ್ನಾಟಕಕ್ಕಾಗಿ ದುಡಿದು ಅವಿಸ್ಮರಣೀಯ ಕಾರ್ಯಗಳನ್ನು ಮಾಡಿ ಕನ್ನಡಿಗರಿಗೆ ಪ್ರಾತಃ ಸ್ಮರಣೀಯರಾಗಿ ಉಳಿದು ಹೋಗಿದ್ದಾರೆ. ಅಂತಹವರಲ್ಲಿ ಕೆಲವರನ್ನು ಮೊದಲು ನೆನೆದೇನು....!

"ಬಿ.ಹೆಚ್. ರೈಸ್", ಇವರು ಮಕ್ಕಳಿಗಾಗಿ ಪಠ್ಯ ಪುಸ್ತಕಗಳನ್ನು ಹೊರ ತಂದರು. "ಅರುಣೋದಯ" ಇವರ ಸಂಪಾದಕತ್ವದ ಕನ್ನಡದ ಮೊಟ್ಟ ಮೊದಲ ಸಚಿತ್ರ ಪತ್ರಿಕೆ; ಇವರ ಮಗ "ಎಡ್ವರ್ಡ್ ಪಿ. ರೈಸ್". ಇವರು 'ಕನ್ನಡ ಸಾಹಿತ್ಯ ಚರಿತ್ರೆ' ರಚಿಸಿದರು, 'ವಿಲಿಯಂ ಕೇರಿ', 'ಜಾನ್ ಹ್ಯಾಂಡ್ಸ್', 'ಜಾನ್‌ಮೆಕೆರಲ್' ಇವರುಗಳು ಕನ್ನಡ ವ್ಯಾಕರಣ ಬರೆದರು, ' ವಿಲಿಯಂರೀವ್' ಇವರು ಇಂಗ್ಲೀಷ್ ಕನ್ನಡ ಶಬ್ಧ ಕೋಶ ರಚಿಸಿ ಪ್ರಕಟಿಸಿದರು. ಹಾಗೂ ಹಳಗನ್ನಡದಲ್ಲಿದ್ದ ಕರ್ನಾಟಕ ಶಬ್ಧ ಮಂಜರಿ, ಚರುರಾಸ್ಯ ನಿಘಂಟು ಕಬ್ಬಿಗರ ಕೈಪಿಡಿ ಕೃತಿಗಳ ಪರಿಶೀಲನೆ ಮಾಡಿದರು. 'ಜಾನ್‌ಗ್ಯಾರೆಟ್' ಇವರು ಬಹುಭಾಷಾ ಆವೃತಿಯ ಭಗವದ್ಗೀತೆಯನ್ನು ಹೊರತಂದರು. ಪಂಚತಂತ್ರವನ್ನು ತಿಳಿಯಾದ ಕನ್ನಡದಲ್ಲಿ ಹೊರ ತಂದರು. ಶಬ್ಧಮಣಿ ದರ್ಪಣ. ಹಿಂದೂ ನಾನು ಕೋಶ ಮುಂತಾದುವುಗಳನ್ನು ಕನ್ನಡಕ್ಕೆ ತಂದ ಕೀರ್ತಿ ಶೇಷ ಇವರದು.

'ಥಾಮಸ್ ಹಡ್ಸನ್' ಇವರು ಮೈಸೂರಿನ ನಕ್ಷೆಯನ್ನು ಕನ್ನಡದಲ್ಲಿ ಸಿದ್ಧ ಪಡಿಸಿದವರು. 'ಡ್ಯಾನಿಯೇಲ್ ಸ್ಯಾಂಡರ್ಸನ್' ಇವರ ಕನ್ನಡ ಕಥಾ ಸಂಗ್ರಹ ಬಹಳ ಜನಪ್ರಿಯತೆ ಗಳಿಸಿದ ಕೃತಿ. 'ಬ-ಸ್ಟೀವನ್ ಸನ್' ಇವರು ಕೆಂಪು ನಾರಾಯಣನ ಮುದ್ರಾಮಂಜೂಷವನ್ನು ಪರಿಷ್ಕರಿಸಿ ಹೊರ ತಂದಿದ್ದು ಇವರು ಕನ್ನಡಕ್ಕೆ ಎಸಗಿದ ದೊಡ್ಡ ಸೇವೆ.

"ಹೆನ್ರಿ ಹೇಗ್' ಇವರು ವೃತ್ತಾಂತ ಪತ್ರಿಕೆಯನ್ನು ಸ್ಥಾಪಿಸಿ ನಡೆಸಿದರು. 'ಹರ್ಮನ್ ಮೋಗ್ಲಿಂಗ್' ಇವರ ಸಂಪಾದಕತ್ವದ 'ಮಂಗಳೂರು ಸಮಾಚಾರ' (ಇದು ಕನ್ನಡದ ಮೊದಲ ಪತ್ರಿಕೆ) ಇವರನ್ನು ಅವಿಸ್ಮರಣೀಯರನ್ನಾಗಿ ಮಾಡಿತು. ಮುಂದೆ ಈ ಪತ್ರಿಕೆಯು 'ಕನ್ನಡ ಸಮಾಚಾರ' ಎಂಬ ನಾಮಾಂಕಿತದಲ್ಲಿ ಪ್ರಕಟವಾಗ ತೊಡಗಿತು. ಈ ಮಹಾತ್ಮನು 'ಕೊಡಗಿನ ಸಮಗ್ರ ಇತಿಹಾಸ'ವನ್ನು ಬರೆದರು. 'ಒಬ್ಬಿಯೋಥಿಕಾ ಕರ್ನಾಟಿಕಾ', 'ಜೈಮಿನಿ ಭಾರತ', 'ತೊರವೆ ರಾಮಾಯಣ', 'ದಾಸರ ಪದಗಳು,' 'ಹರಿಭಕ್ತಸಾರ', 'ಕುಮಾರವ್ಯಾಸ ಭಾರತ', 'ಬಸವ ಪುರಾಣ', 'ಚೆನ್ನಾ ಬಸವ ಪುರಾಣ' ಇತ್ಯಾದಿ ಕೃತಿಗಳನ್ನು ಹೊರ ತಂದು ಜರ್ಮನಿಯ ತಿಬೆಂಜನ್ ವಿಶ್ವ ವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು. (ಕನ್ನಡಕ್ಕಾಗಿ ಸಂದ ಮೊದಲ ಡಾಕ್ಟರೇಟ್ ಪದವಿ ಇದು).

ಹೀಗೆ ಕನ್ನಡ ಕಟ್ಟಿದ ಪೂಜ್ಯರ ಸಾಲಿನಲ್ಲಿ ನಿಲ್ಲುವ ಪ್ರಾತಃ ಸ್ಮರಣೀಯರಲ್ಲಿ ಗಾಡ್ ಫ್ರೈ ವೈಗ್ಲೆ, ಜಾನ್ ಬನ್ಯನ್, ಡಬ್ಲ್ಯೂ ಜಿ. ವುರ್ತ್, ಡಬ್ಲ್ಯೂ ಹಾಕ್, ಗಾಟ್ ಲೀಬ್ ಕೀಸ್, ಬಿ. ಲೂಥಿ, ಇವರು ಕನ್ನಡ ಶೀಘ್ರಲಿಪಿಯ ಪುಸ್ತಕ 'ಕನ್ನಡ ನುಡಿ ಹಿಡಿ'ಯನ್ನು ಹೊರ ತಂದರು.

✍ ಮಥಿಯಾಸ್ ಕುಮಾರ್,
ಯಾದವಗಿರಿ

ಬಹುಮುಖ್ಯ ಪ್ರಾತಃ ಸ್ಮರಣೀಯರಲ್ಲಿ 'ಡಾ. ಫರ್ಡಿನಾಂಡ್ ಕಿಟೆಲ್' ರವರು ಕನ್ನಡ ಸಾಹಿತ್ಯ ಸೇವೆಗೆ ಕನ್ನಡಿಗರ ಕೃತಜ್ಞತೆಯ ದ್ಯೋತಕವಾಗಿ ನಿಂತ ಮಹನೀಯರಿವರು. ಕನ್ನಡವನ್ನು ಹಳಗನ್ನಡ, ನಡುಗನ್ನಡ, ಹೊಸ ಗನ್ನಡಗಳನ್ನಾಗಿ ವಿಂಗಡಿಸಿದ ಕೀರ್ತಿ ಕಿಟೆಲ್ ಸಾಹೇಬರದು. "ಕನ್ನಡ ಶಬ್ಧಕೋಶ" ಇವರ ಮಹಸ್ಸಾಧನೆಯೇ ಸರಿ. ಕನ್ನಡಕ್ಕಾಗಿ ಡಾಕ್ಟರೇಟ್ ಪಡೆದ ಎರಡನೆಯ ಕೀರ್ತಿ ಶೇಷ ಮಹನೀಯರು ಇವರು. ಕೇಶಿರಾಜನ ಶಬ್ಧಮಣಿ ದರ್ಪಣ, ನಾಗವರ್ಮನ ಛಂದೋಂಬುಧಿ, ಹಾಗೂ ಅಸಂಖ್ಯಾತ ಕನ್ನಡ ಲೇಖನಗಳನ್ನು ಬರೆದು "ಕ್ರಿಸ್ತ ಚರಿತೆ"ಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದರು. ಕರ್ನಾಟಕ ಕಾವ್ಯ ಮಾಲೆ, ಕನ್ನಡ ಭಾಷಾ ವ್ಯಾಕರಣ ಇವರ ಕನ್ನಡತನದ ಪ್ರೀತಿಗೆ ಸಾಕ್ಷಿಯಾಗಿದೆ. ಬಹುವಾಗಿ ಹೇಳಬೇಕಾದರೆ ಜಗತ್ತಿನಲ್ಲಿ ಎಲ್ಲಿಯವರೆಗೆ ಕನ್ನಡ ಇರುತ್ತೋ ಅಲ್ಲಿಯವರೆಗೆ ಡಾ. ಫರ್ಡಿನಾಂಡ್ ಕಿಟೆಲ್‌ರವರ ಹೆಸರು ಚಿರಸ್ಥಾಯಿಯಾಗಿ ಇರುತ್ತದೆ.

ಹಾಗೆಯೇ ಹೊಸಗನ್ನಡದ ಪ್ರಪ್ರಥಮ ಗ್ರಂಥಕಾರ, ಜೆಸುಯಿಟ್ ಸಂಘದ ಕಥೋಲಿಕ

ಧರ್ಮಗುರು 'ಲಿಯೊನಾರ್ಡೊ ಚಿನ್ನಮಿ' ಇವರು ಹೊಸಗನ್ನಡದ ಪ್ರಪ್ರಥಮ ಕನ್ನಡ ವ್ಯಾಕರಣ ಬರೆದ ಕೀರ್ತಿ ಇವರಿಗೆ ಸಲ್ಲಬೇಕು. ಇವರಂತೆಯೆ 'ವಂ. ಲೂಯಿಸ್ ಶರ್ಬಾನೊ' 'ಜೆ. ಬ್ಯಾರಿಲ್', 'ಎ. ಬೌತೆಲೂ', 'ಜಾನ್ ಹ್ಯಾಂಡ್ಸ್', 'ವಂ. ಅಬ್ಬೆದುಬೊಅ' (ಇವರು ಭಾರತೀಯ ಜಾನಪದ ಪಿತಾಮಹ ಎನಿಸಿಕೊಂಡರು' ಹಾಗೆಯೆ 'ಗ್ರೇಟರ್', 'ಜೆಮ್ಯಾಕ್ಸ್', 'ಥಿಯೋದೊರ್ ವಾಲ್ಜ್', 'ಜೆ. ಬೂಕರ್', 'ಜೆ. ಎಫ್. ವೈಲ್' ಹೀಗೆ ಹೆಸರಿಸುತ್ತಾ ಹೋಗುತ್ತಿರಬಹುದು. ಈ ಮಹನೀಯರೆಲ್ಲಾ ಕನ್ನಡದ ಹೆದ್ದೊರೆಗೆ ತಮ್ಮದೇ ಆದ ಕಿರುತೊರೆಗಳನ್ನು ಹರಿಸಿ ಅಮರರಾದರು. ಈ ಎಲ್ಲಾ ಪ್ರಾತಃಸ್ಮರಣೀಯ ಕ್ರೈಸ್ತ ವಿದ್ವಾಂಸರ ವಿಶೇಷವಾದ ಕೊಡುಗೆಯಿಂದ ಕನ್ನಡ ಭಾಷೆಯ ಸಾಹಿತ್ಯದ ಶ್ರೀಮಂತಿಕೆ ಕನ್ನಡಿಗರಿಗೆ ಪ್ರಾಪ್ತವಾದುದು ನಿಜಕ್ಕೂ ವರದಾನವೇ ಸರಿ..,

ಕೆಲವು ಕ್ರೈಸ್ತ ವಿದ್ವಾಂಸರು ಗೆಜೆಟಿಯರ್ ರಚಿಸಿದ್ದಾರೆ, ಇಲ್ಲಿಯ ಶಾಸನಗಳನ್ನು ಸಂಗ್ರಹಿಸಿ ಕನ್ನಡ ಶಾಸನಗಳ ಪಿತಾಮಹ ಎಂದೆನಿಸಿಕೊಂಡವರು 'ಬೆಂಜಮಿನ್ ಲೂಯಿಸ್ ರೈಸ್' ಎಂಬುವರು. ಹೀಗೆ ಸಾಧನೆಗೈದ ಮಹನೀಯರನ್ನೆಲ್ಲಾ ಹೆಸರಿಸುತ್ತಾ ಸಾಗಿದರೆ ನಮ್ಮೆಲ್ಲರ ದೀಪ್ತಿ 'ಸ್ನೇಹಜ್ಯೋತಿ' ಯ ಪುಟಗಳು ಸಾಲದೆ ಹೋದೀತು!

ಇನ್ನೂ ಕರ್ನಾಟಕದಲ್ಲಿ ಕನ್ನಡ ಉಳಿವಿಗಾಗಿ ಶ್ರಮಿಸಿದ ವಿದೇಶಿ ಕ್ರೈಸ್ತರನ್ನು ಸ್ಮರಿಸಲೇ ಬೇಕು. 'ಥಾಮಸ್ ಮನ್ರೊ' ಇವರು ಮದ್ರಾಸಿನ ಗವರ್ನರ್ ಆಗಿದ್ದವರು. ಇವರು ಬಳ್ಳಾರಿ ಮಂಗಳೂರುಗಳಲ್ಲೂ ಅಧಿಕಾರ ನೆಡೆಸಿದರು. ಇವರು ಸ್ಥಳೀಯ ಭಾಷೆಯನ್ನು ಅಭ್ಯಾಸ ಮಾಡಿದಲ್ಲದೆ ಪ್ರಾದೇಶಿಕ ಭಾಷೆಯಲ್ಲಿ ಆಡಳಿತ ನಡೆಸುವುದು ಅವಶ್ಯವೆಂದು ನಂಬಿದ್ದರು. ನ್ಯಾಯಾಲಯದ ಭಾಷೆ ಜನರ ಭಾಷೆಯೇ ಆಗಿರದಿದ್ದಾಗ ನಿರಪರಾಧಿಗಳು ಶಿಕ್ಷೆಗೆ ಗುರಿಯಾಗುವ ಅಪಾಯವುಂಟೆದು ಹೇಳಿ ಸ್ಥಳೀಯ ಭಾಷೆಗೆ ಪ್ರಾಶಸ್ತ್ಯ ನೀಡಿದ್ದು ಇವರ ಹೆಗ್ಗಳಿಕೆ.

'ಮೆಕೆರೆಲ್' ಇವರು ಪ್ರಾಂತೀಯ ಭಾಷೆಯ ಪರಿಜ್ಞಾನವಿಲ್ಲದ ಅಧಿಕಾರಿ. ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಾರನೆಂಬುದು ಇವರ ನಂಬಿಕೆ. ಆದುದರಿಂದ ಅಧಿಕಾರಿಗಳು ಸ್ಥಳೀಯ ಭಾಷಾ ಪ್ರವೀಣರಾಗಿರಬೇಕು ಎಂದು ಆಜ್ಞೆ ಇತ್ತವರು.

'ಕಬ್ಬನ್' ಇವರು ಮೈಸೂರಿನ ಕಮಿಷನರ್ ಆಗಿದ್ದು ಅನೇಕ ಸುಧಾರಣೆಗಳನ್ನು ತಂದವರು, 'ರಿಕೆಟ್ಸ್' ಇವರು ಮೈಸೂರು ಗೆಜೆಟ್‌ನ ಪ್ರಥಮ ಸಂಪಾದಕರು, ಇವರು ಸರ್ಕಾರದ ಆಗುಹೋಗುಗಗಳನ್ನು ಜನರಿಗೆ ಅವರ ಸ್ವಂತ ಭಾಷೆಯಲ್ಲಿ ತಿಳಿಸಬೇಕು ಎಂಬುದು ಇವರ ಅಭಿಲಾಷೆಯಾಗಿತ್ತು ಅದಕ್ಕಾಗಿ ಶ್ರಮಿಸಿದರು, 'ವಾಲ್ಟರ್ ವಿಲಿಯೆಟ್' ಇವರು ಧಾರವಾಡದಲ್ಲಿ ಮರಾಠಿ ಶಾಲೆಯೊಂದನ್ನು ಸ್ಥಾಪಿತವಾದಾಗ ಇದು ಕನ್ನಡ ಪ್ರದೇಶವಾದ್ದರಿಂದ ಇಲ್ಲಿಯ ಜನರ ಮಾತೃಭಾಷೆಯಾದ ಕನ್ನಡದಲ್ಲೇ ಶಿಕ್ಷಣ ನೀಡಬೇಕೆಂದು ಆಜ್ಞಾಪಿಸಿದರು. 'ಮೆಕಾರ್ಥಿ' ಇವರು ಬಳ್ಳಾರಿಯ ಜಿಲ್ಲಾಧಿಕಾರಿ ಆಗಿದ್ದವರು. ಅಲ್ಲಿಯ ಜನ ಕನ್ನಡದಲ್ಲಿ ಮಾತನಾಡುತ್ತಿದ್ದುದನ್ನೂ ಅಲ್ಲಿಯ ಅಧಿಕಾರಿ ತೆಲುಗು ನಾಗಿದ್ದುದನ್ನೂ ಗಮನಿಸಿ ಅಚ್ಚಗನ್ನಡದ ಪ್ರದೇಶದಲ್ಲಿ ಕನ್ನಡಿಗರೇ ಅಧಿಕಾರಿಗಳಾಗಿರಬೇಕು ತೆಲುಗರಲ್ಲ ಎಂದು ಘೋಷಿಸಿ ಕಾರ್ಯಪ್ರವರ್ತರಾದವರು. ಹೀಗೆ ಹಲವು ಪ್ರಾತಃಸ್ಮರಣೀಯ ವಿದ್ವತ್ತಿನ ಗಣಿಗಳಾದ ವಿದೇಶಿ ಕ್ರೈಸ್ತ ಪಂಡಿತ ಶಿರೋಮಣಿಗಳನ್ನು ನೆನೆದು ಮರೆತ ಅನೇಕಾನೇಕ ಕನ್ನಡ ಕಟ್ಟಿದ ಸ್ತುತ್ಯಾರ್ಹ ಮಾನ್ವಿತರ ಕ್ಷಮೆಕೋರಿ.

ಮರೆತೆನೆಂದರೆ ಮರೆಯಲಿ ಹ್ಯಾಂಗ..., ಪ್ರಸ್ತುತ ಕಾಲದ ಕನ್ನಡ ಕಲಿಗಳನ್ನು, ಮೊದಲು ನೆನೆದೇನು ದಿವಂಗತ ಶ್ರೇಷ್ಠರನ್ನು, ತಿರುಳುಗನ್ನಡದ ತಿರುಕ. ಅಭಿನವ ಸರ್ವಜ್ಞ. 'ರೆ. ಉತ್ತಂಗಿ ಚೆನ್ನಪ್ಪ'', ಕನ್ನಡ ಕಥೋಲಿಕ ಕ್ರೈಸ್ತರ ಎದೆಯೊಳಗಿನ ಹಣತೆ 'ವಂ. ಫಾ ಸ್ಟ್ಯಾನಿ ಬ್ಯಾಪ್ಟಿಸ್ಟ್, ಸಹೃದಯಿ ಚೇತನ ವಂ. ಫಾ. ಮೈಕಲ್, ಅತಿ. ವಂ. ಜೋಸೆಫ್ ರಾಯ್, ಅತಿ. ವಂ. ಮಿಕೇಲಪ್ಪ, ಮುಂತಾದ ಹಿರಿಯ ಸಂಚೇತನರನ್ನು ನೆನೆಯುತ್ತಾ... ಪ್ರಸ್ತಾಪಿಸಲೇ ಬೇಕಾದ ಪ್ರಸ್ತುತ ಕಾಲದ ಕನ್ನಡ ಕಲಿಗಳಿವರು. ಕೆಚ್ಚೆದೆಯ ದಾರ್ಶನಿಕನ ದರ್ಶಕ ವಂ. ಫಾದರ್ ಚಸರಾ, ಸಾಹಿತ್ಯ ದಿಗ್ಗಜ ವಂ. ಫಾಡಾವಿನ್, ವಿಸ್ ಮರಿಜೋ, ಭುವನ ಜ್ಯೋತಿಯ ವಂ. ಫಾ. ಡಾ. ದಯಾನಂದ ಪ್ರಭು, ಅಮರ ಜ್ಯೋತಿಯ ವಂ. ಫಾ. ಹೆನ್ರಿಮಾಡ್ತ, ಸ್ನೇಹಜ್ಯೋತಿಯ ವಂ. ಫಾ. ಡೇವಿಡ್‌ಪ್ರಕಾಶ್, ಅಮರ ಕಿರಣದ ಸಾಹಿತ್ಯ ಶ್ರೇಷ್ಠ ಪಿ. ಸಿ.ಅಂತೋಣಿ ಸ್ವಾಮಿ (ಶ್ರೀಸ್ವಾಮಿ), ಕನ್ನಡ ಲೋಕದ ಚಿಕೋವ್ 'ಡಾ. ನಾ. ಡಿಸೋಜ', ಕನ್ನಡ ಕ್ರೈಸ್ತ ಜಾನಪದ ಚಿಂತಕ ಡಾ. ಬಿ. ಎಸ್. ತಲ್ವಾಡಿ, ಕನ್ನಡದ ಅತ್ತಿಮಬ್ಬೆ ಡಾ. ಲೀಲಾವತಿ ದೇವದಾಸ್, ಹುಟ್ಟು ಹೋರಾಟಗಾರ್ತಿ ರೀಬಾರೀನಿ, ದೂತನ ಸಾರಥಿ ವಂ. ಫಾ. ಕೆ. ಎ. ವಿಲಿಯಂ ಹೆಸರಿಸುತ್ತಾ ಸಾಗಿದರೆ ಅಸಂಖ್ಯಾತ ಕನ್ನಡ ಕ್ರೈಸ್ತ ಹೋರಾಟಗಾರರು, ಬರಹಗಾರರು, ಸಾಹಿತಿಗಳು, ಚಿಂತಕರು, ಇದ್ದಾರೆ ಸ್ಥಳದ ಅಭಾವದಿಂದ ಸಮಸ್ತರಲ್ಲಿ ಕ್ಷಮೆಕೋರಿ ಕನ್ನಡ ತಾಯಿಯ ಜನ್ಮದಿನವನ್ನು ಆಚರಿಸುವ ಸಮಸ್ತ ಕನ್ನಡ ಪ್ರೇಮಿಗಳಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸ ಬಯಸುತ್ತಾ.

ನೆನಪಿಗೆ ಬರುತ್ತಿದೆ ಶ್ರೀಸ್ವಾಮಿಯವರ ಕವಿತೆ 'ನಾವು ನವೆಂಬರ್ ಕನ್ನಡಿಗರು' (ಈ ಕವನ ನಮ್ಮ ಸ್ನೇಹಜ್ಯೋತಿಯಲ್ಲಿ ಪ್ರಕಟವಾಗಿತ್ತು) ಹೌದು ನಾನಂತೂ ನವೆಂಬರ್ ಕನ್ನಡಿಗನೇ!! ಏಕೆಂದರೆ ನನ್ನ ಹುಟ್ಟುಹಬ್ಬ ನವೆಂಬರ್ 5 ರಂದು.

ಸಮಸ್ತ ಕ್ರೈಸ್ತ ಕನ್ನಡ ಕುಲವೇ ನಾವೆಲ್ಲರು ನವೆಂಬರ್ ಕನ್ನಡಿಗರಾಗದೆ ನಮ್ಮ ಧಮನಿ ಧಮನಿಯು ಕನ್ನಡವನ್ನು ಕೂಗಿ ಕರೆಯುತ್ತಿರಲಿ. ಹರಿಯುತ್ತಿರಲಿ, ಬೆಳೆಯುತ್ತಿರಲಿ, ಕನ್ನಡ ಕಟ್ಟಿದ ಬೆಳೆಸಿದ, ನಮ್ಮ ಹಿರಿಯ ಕನ್ನಡ ಕ್ರೈಸ್ತ ಕುಲದವರು ಬಾಳಿ ಬದುಕಿದ ರೀತಿ ನಮ್ಮೆಲ್ಲರಿಗೂ ಮಾರ್ಗದರ್ಶನವಾಗಲಿ.

ಕನ್ನಡ ಸ್ಮೃತಿ ಶಿಲ್ಪಿ ವಂ. ಫಾ. ಐ. ಅಂತಪ್ಪನವರ ಆಶೀರ್ವಾದ ಬೇಡುತ್ತಾ ಕನ್ನಡ ಕ್ರೈಸ್ತ ಕುಲಕ್ಕೆ ಕರುನಾಡಿನ ಕನ್ನಡಾಂಬೆಯ, ಕರ್ನಾಟಕದ 55ನೆಯ ಕನ್ನಡ ರಾಜ್ಯೋತ್ಸವದ ಹಾರ್ದಿಕ ಹಾಗೂ ಆನಂದದಾಯಕ ಶುಭಾಶಯಗಳು.

# ಚಿಕ್ಕಮಗಳೂರು ಧರ್ಮಕ್ಷೇತ್ರ ನಡೆದು ಬಂದ ದಾರಿ

**ಹಿನ್ನೆಲೆ:**

ಮಲೆನಾಡು ಮತ್ತು ಮೈದಾನ ಪ್ರದೇಶದಿಂದ ಕೂಡಿರುವ ಚಿಕ್ಕಮಗಳೂರು ಜಿಲ್ಲೆ ಕರ್ನಾಟಕದ ಜಿಲ್ಲೆಗಳಲ್ಲೇ ವಿಶಿಷ್ಟ ವಾದುದು. ಬೆಟ್ಟಗುಡ್ಡಗಳಿಂದಲೂ, ದಟ್ಟಕಾಡುಗಳಿಂದಲೂ ಕಂಗೊಳಿಸುವ ಈ ಜಿಲ್ಲೆಯಲ್ಲಿ ತುಂಗಾ, ಭದ್ರ, ಹೇಮಾವತಿ, ಸೋಮಾವತಿ, ಕಪಿಲ, ಯಗಚಿ ಮುಂತಾದ ನದಿಗಳು ಹುಟ್ಟಿ ಹರಿಯುತ್ತವೆ.

ಮುಳ್ಳಯನಗಿರಿ, ಬಾಬಾಬುಡನ್‌ಗಿರಿ, ಗಂಗಾಮೂಲ, ಮೈತ್ರಿ ಪರ್ವತ, ಕುದುರೆಮುಖ ಮುಂತಾದ ಪರ್ವತ ಶ್ರೇಣಿಗಳು ಇಲ್ಲಿವೆ.

ಹೊಯ್ಸಳರ ಮೂಲಪುರುಷನಿಗೆ ಜನ್ಮ ನೀಡಿದ ಹೆಗ್ಗಳಿಕೆ ಈ ಜಿಲ್ಲೆಯದು. ವಿಜಯನಗರದ ಅರಸರು ಈ ಪ್ರದೇಶವನ್ನು ಆಳಿದ್ದಾರೆ. ಶಿವಪ್ಪನಾಯಕ ಈ ಜಿಲ್ಲೆಯ ಬಹು ಭಾಗವನ್ನು ಗೆದ್ದು ಆಳ್ವಿಕೆ ನಡೆಸಿದ್ದಾನೆ. ಮೈಸೂರಿನ ಅರಸರುಗಳೂ ಈ ಪ್ರದೇಶವನ್ನು ಆಳಿದ್ದಾರೆ. 1893ರಲ್ಲಿ ಇದು ಪ್ರತ್ಯೇಕ ಜಿಲ್ಲೆಯಾಯಿತು. ಚಿಕ್ಕಮಗಳೂರು, ಕಡೂರು, ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ, ಶೃಂಗೇರಿ ಮತ್ತು ತರೀಕೆರೆ ಈ ಜಿಲ್ಲೆಯ ಏಳು ತಾಲೂಕುಗಳು. ಇಲ್ಲಿನ ಪೌರಸಭೆ 1830ರಲ್ಲಿ ಸ್ಥಾಪನೆಯಾಯಿತು.

ಚಿಕ್ಕಮಗಳೂರಿಗೆ ಈ ಹೆಸರು ಬಂದ ಬಗೆಗೆ ಒಂದು ಐತಿಹ್ಯವಿದೆ. ಮಹಾಭಾರತ ಕಥೆಯಲ್ಲಿ ಬರುವ ಹಾಗೂ ಸಕ್ಕರೆ ಪಟ್ಟಣದಲ್ಲಿದ್ದ ಎನ್ನಲಾದ ರುಕ್ಮಾಂಗದ ಚಿಕ್ಕಮಗಳೂರೊಳಗಿನ ಇದರ ಸಮೀಪವಿರುವ ಹಿರೇಮಗಳೂರನ್ನು ತನ್ನ ಕಿರಿಯ ಮತ್ತು ಹಿರಿಯ ಹೆಣ್ಣುಮಕ್ಕಳಿಗೆ ಬಳುವಳಿಯಾಗಿ ನೀಡಿದ್ದರಿಂದ, ಈ ಊರುಗಳಿಗೆ ಚಿಕ್ಕಮಗಳೂರು ಮತ್ತು ಹಿರಿಯ ಮಗಳ ಊರು ಎಂಬ ಹೆಸರು ಬಂದವಂತೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಲ್ಲಾ ಧರ್ಮದವರು ಸಾಮರಸ್ಯದಿಂದ ಬಾಳುತ್ತಿದ್ದಾರೆ. ಜಾಗತಿಕ ಧರ್ಮಗಳಾದ ಮುಸ್ಲಿಂ ಮತ್ತು ಕ್ರೈಸ್ತ ಧರ್ಮದವರೂ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡು ತಮ್ಮ ಧರ್ಮಕ್ಕೆ ಬದ್ಧರಾಗಿದ್ದಾರೆ.

**ಕ್ರೈಸ್ತಧರ್ಮ**

ಚಿಕ್ಕಮಗಳೂರಿಗೆ ಕ್ರೈಸ್ತಧರ್ಮ ಯಾವಾಗ ಬಂದಿರಬೇಕೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಹದನೇಳನೆ ಶತಮಾನದ ಮಧ್ಯಭಾಗದಲ್ಲಿ ಕ್ರೈಸ್ತರು ಅಧಿಕೃತವಾಗಿ ಇಲ್ಲಿ ಕಾಣಿಸಿಕೊಂಡಿರಬೇಕು. ಆನಂತರ ಬ್ರಿಟಿಷರ ಆಳ್ವಿಕೆಯಲ್ಲಿ ಕ್ರೈಸ್ತರು ಪ್ರಬಲವಾಗಿ ಎದ್ದು ಕಾಣುವಂತಾಗಿರಬೇಕು. 1830ರಲ್ಲಿ ಥಾಮಸ್ ಕ್ಯಾನಸ್ ಎಂಬಾತ ಚಿಕ್ಕಮಗಳೂರು ಬಳಿ ಆರಂಭಿಸಿದ ಮೈಲ್‌ಮನೆ ಕಾಫಿತೋಟದ ಸಂಬಂಧವನ್ನು ಇಲ್ಲಿನ ಕ್ರೈಸ್ತ ಧರ್ಮದ ಜೊತೆಗೆ ಸಮೀಕರಿಸಬಹುದು. ಶಿವಮೊಗ್ಗಕ್ಕೆ 1680ರಲ್ಲಿ ಕ್ರೈಸ್ತಧರ್ಮದ ಪ್ರವೇಶವಾಗಿತ್ತೆಂತಲೂ, ಮೋಕ್ಷವಾಸಿ ಜೋಸೆಫ್ ವಾಸ್ ಅಲ್ಲಿ ಇದ್ದನೆಂತಲೂ ಹೇಳುವುದಿದೆ. ಅಲ್ಲಿನ ಮೊದಲ ಚರ್ಚನ್ನು 1723ರಲ್ಲಿ ಕಟ್ಟಿದ ದಾಖಲೆ ಇದೆ. ಅಂದಮೇಲೆ ಚಿಕ್ಕಮಗಳೂರಿಗೂ ಅದೇ ಕಾಲದಲ್ಲಿ ಕ್ರೈಸ್ತಮತದ ಪ್ರವೇಶವಾಗಿರಬೇಕು. ಅಂದು ಶಿವಮೊಗ್ಗದ ಧರ್ಮಗುರುಗಳು ಚಿಕ್ಕಮಗಳೂರು ಜಿಲ್ಲೆಯ ಆಧ್ಯಾತ್ಮಿಕ ವಿಚಾರಗಳನ್ನು ನೋಡಿಕೊಳ್ಳುತ್ತಿದ್ದರು. 1864ರಲ್ಲಿ ಚಿಕ್ಕಮಗಳೂರಿನ ಕ್ರೈಸ್ತರಿಗೆ ಮೊದಲ ಸ್ನಾನದೀಕ್ಷೆ ನೀಡಿದ ದಾಖಲೆ ಇದೆ.

ಅಲ್ಲದೆ ಚಿಕ್ಕಮಗಳೂರು ಧರ್ಮಪ್ರಾಂತ್ಯಕ್ಕೆ ಸೇರಿದ ಹಾಸನ ಜಿಲ್ಲೆಗೆ 1690ರ ಹೊತ್ತಿಗೆ ಕ್ರೈಸ್ತಧರ್ಮ ನೆಲೆಯೂರಿರಬೇಕು. ಇದಕ್ಕೆ ದಾಖಲೆಗಳೂ ಇವೆ. ಈ ಕಾರಣದಿಂದ ಒಟ್ಟಾರೆ ಚಿಕ್ಕಮಗಳೂರು ಧರ್ಮಕ್ಷೇತ್ರ (Diocese) ಕ್ಕೆ ಕ್ರೈಸ್ತಧರ್ಮ 1680 -90ರ ಅವಧಿಯಲ್ಲಿ ಪ್ರವೇಶಿಸಿರಬೇಕು, ಇದರಲ್ಲಿ ಅನುಮಾನವಿಲ್ಲ.

ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಧರ್ಮಕ್ಷೇತ್ರವಾಗಿ

ಚಿಕ್ಕಮಗಳೂರು ಧರ್ಮಕ್ಷೇತ್ರ ಮೂರು ಜಿಲ್ಲೆಗಳನ್ನು ಒಳಗೊಂಡು ರಚನೆಯಾಗುವ ಮೊದಲು ಇದು ಮೈಸೂರು ಮತ್ತು ಕೆನರಾ ಮಿಷನ್‌ಗೆ ಸೇರಿದ್ದು ಗೋವಾದ (Ecclesiastical Jurisdiction) ಮಹಾಧರ್ಮ ಕ್ಷೇತ್ರದ ಆಡಳಿತಕ್ಕೆ ಒಳಪಟ್ಟಿತ್ತು. ಕ್ರೈಸ್ತರ ಸಂಖ್ಯೆ ಈ ಧರ್ಮಕ್ಷೇತ್ರದಲ್ಲಿ ಅಧಿಕಾವಾದಂತೆ ಇದನ್ನು ಒಂದು ಧರ್ಮಕ್ಷೇತ್ರವಾಗಿ ಮಾಡಬೇಕಾದ ಅಗತ್ಯ ಬಂದಿತು, ಬೇಡಿಕೆಯೂ ಇತ್ತು. 16-11-1963ರಲ್ಲಿ ವ್ಯಾಟಿಕನ್‌ನಿಂದ 'ಇಂದಿಚೆ ರೇಜಿಯೋನಿಸ್' ಎಂಬ ಪ್ರೇಷಿತ ಶಾಸನವನ್ನು ಹೊರಡಿಸಿ ಅಂದಿನ ಪೋಪ್ ವಿಶ್ವಗುರು ಆರನೇಪಾಲ್ ಅವರು ಮೈಸೂರು ಧರ್ಮಕ್ಷೇತ್ರದಿಂದ ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಬೇರ್ಪಡಿಸಿ "ಚಿಕ್ಕಮಗಳೂರು ಧರ್ಮಕ್ಷೇತ್ರ"ವನ್ನು ಸ್ಥಾಪಿಸಿದರು. ಅತಿ, ವಂ. ಡಾ. ಅಲ್ಫೋನ್ಸ್ ಮಥಾಯಸ್ ಅವರು ಇಲ್ಲಿ ಮೊದಲ ಧರ್ಮಾಧ್ಯಕ್ಷರಾಗಿ ನೇಮಕರಾದರು. ಕ್ರಮೇಣ ಚಿಕ್ಕಮಗಳೂರು ಧರ್ಮಕ್ಷೇತ್ರದ ಕಕ್ಷೆಯಿಂದ ಶಿವಮೊಗ್ಗ ಬೇರ್ಪಟ್ಟು 03-12-1988ರಲ್ಲಿ ಅದು ಚಿತ್ರದುರ್ಗವನ್ನೊಳಗೊಂಡು ಹೊಸ ಧರ್ಮಕ್ಷೇತ್ರವಾಗಿ, "ಶಿವಮೊಗ್ಗ ಧರ್ಮಕ್ಷೇತ್ರ"ವೆನಿಸಿತು.

ಪ್ರಸಕ್ತ ಚಿಕ್ಕಮಗಳೂರು ಧರ್ಮಕ್ಷೇತ್ರ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳನ್ನೊಳಗೊಂಡಿದೆ. ಇಬ್ಬರು


ಬಿ.ಎಸ್. ತಲ್ವಾಡಿ
ಬೆಂಗಳೂರು.


ಧರ್ಮಾಧ್ಯಕ್ಷರುಗಳು ಇಲ್ಲಿನ ಕ್ರೈಸ್ತರ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಜೀವನಕ್ರಮವನ್ನು ಆಡಳಿತಾತ್ಮಕವಾಗಿ ನೋಡಿಕೊಂಡು ಕ್ರೈಸ್ತರ ಪುರೋಭಿವೃದ್ಧಿಗೆ ಶ್ರಮಿಸಿದ್ದಾರೆ.

ಅತಿ. ವಂ. ಡಾ. ಅಲ್ಫೋನ್ಸ್ ಮಥಾಯಸ್

ಧರ್ಮಾಧ್ಯಕ್ಷ ಅಲ್ಫೋನ್ಸ್ ಮಥಾಯಸ್‌ರವರು ಸಮರ್ಥ ಆಡಳಿತಗಾರರೂ, ಖಚಿತವಾದ ನಿಲುವುಗಳುಳ್ಳವರೂ, ಆಳವಾದ ಆಧ್ಯಾತ್ಮಿಕ ಶ್ರದ್ಧೆಯುಳ್ಳವರೂ ಆಗಿದ್ದರು. ಆರಂಭದ ದಿನಗಳಲ್ಲಿ ಧರ್ಮಕೇಂದ್ರಗಳೂ ಹಾಗೂ ಯಾಜಕರ ಸಂಖ್ಯೆಯೂ ಕಡಿಮೆ ಇತ್ತು ಆದರೂ ಆರಂಭದಿಂದಲೇ ಅನೇಕ ಯೋಜನೆಗಳನ್ನು ರೂಪಿಸಿ, ನಿರ್ದಿಷ್ಟವಾದ ಧ್ಯೇಯ-ಧೋರಣೆಗಳನು ಅನುಸರಿಸಿ ಖಚಿತವಾದ ನಿಲುವುಗಳನ್ನು ತೆಗೆದುಕೊಂಡಿದ್ದರ ಫಲವಾಗಿ ಧರ್ಮಕ್ಷೇತ್ರವು ಹಂತಹಂತವಾಗಿ ಎಲ್ಲಾ ರಂಗಗಳಲ್ಲೂ ಮುನ್ನಡೆ ಸಾಧಿಸುತ್ತಾ ಬಂತು. ಶುಭಸಂದೇಶ ಪ್ರಸಾರವನ್ನು ಪ್ರಧಾನ ಗುರಿಯಾಗಿಟ್ಟುಕೊಂಡು ಅದಕ್ಕಾಗಿ ಹಲವಾರು ಕೇಂದ್ರಗಳನ್ನು ತೆರೆಯಲಾಯಿತು. ವಿವಿಧ ಮಾರ್ಗಗಳನ್ನು ಅನುಸರಿಸಲಾಯಿತು ಹಾಗೂ ಮೇಲ್ವಿಚಾರಕರನ್ನು ನೇಮಿಸಲಾಯಿತು. ಶುಭಸಂದೇಶ ಪ್ರಸಾರ ಕಾರ್ಯಕ್ಕಾಗಿಯೇ ಕಡೂರು, ಬೀರೂರು, ಗಂಡಸಿ, ಕಲ್ಲತ್ತಿಪುರ, ಸೊರಬ, ಬೇಲೂರು ಹಾಗೂ ತೆರೇಸಾಪುರ ಕೇಂದ್ರಗಳನ್ನು ತೆರೆಯಲಾಯಿತು. ಧರ್ಮಾಧ್ಯಕ್ಷ ಅಲ್ಫೋನ್ಸ್ ಮಥಾಯಸ್‌ರವರು ಅನೇಕ ಹೊಸ ಧರ್ಮಕೇಂದ್ರಗಳನ್ನು ಸ್ಥಾಪಿಸಿದರು.

ವರ್ಷವರ್ಷವೂ ನಿರ್ದಿಷ್ಟವಾದ ಕಾರ್ಯಯೋಜನೆಯನ್ನು ತುಂಬಾ ಮುತುವರ್ಜಿಯಿಂದ ಜಾರಿಗೆ ತರಲು ಪ್ರಯತ್ನಿಸಿದ್ದರಿಂದ ಭಕ್ತಾದಿಗಳ ಆಧ್ಯಾತ್ಮಿಕ ನವೀಕರಣ, ಮಕ್ಕಳ,

ವಿದ್ಯಾಭ್ಯಾಸ, ಯುವಜನರ ತರಬೇತಿ, ಹಿಂದುಳಿದವರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ, ಆರಾದನಾ ವಿಧಿಗಳ ಭಾರತೀಕರಣ, ಸಂಸ್ಥೆ ಹಾಗೂ ಧರ್ಮಕೇಂದ್ರಗಳ ಸ್ವಾವಲಂಬನೆ, ಪುಟ್ಟಮಕ್ಕಳ ಮತ್ತು ದುರ್ಬಲರ ಆರೋಗ್ಯ ಸೇವೆ ಇತ್ಯಾದಿಗಳನ್ನು ಸಾಧಿಸಲಾಯಿತು. ಧರ್ಮಾಧ್ಯಕ್ಷರ ದೀಕ್ಷೆಯ ಐದನೇ ವಾರ್ಷಿಕೋತ್ಸವದಂದು (05.02.1969) ಧರ್ಮಾಧ್ಯಕ್ಷರ ಕಛೇರಿ ಹಾಗೂ ನಿವಾಸವಾಗಿರುವ ಜ್ಯೋತಿನಿಲಯವನ್ನು ಉದ್ಘಾಟಿಸಲಾಯಿತು. ಅಂದಿನ ಕಥೆಡ್ರಲ್ ದೇವಾಲಯವನ್ನು ನಿರ್ಮಿಸಿ 8.12.1976 ರಂದು ಪವಿತ್ರೀಕರಿಸಲಾಯಿತು. ಕನ್ಯಾಸ್ತ್ರೀ ಮಠಗಳನ್ನೂ, ಶಾಲೆಗಳನ್ನೂ, ಇತರ ಕೇಂದ್ರಗಳನ್ನು ಸ್ಥಾಪಿಸಿ ಪ್ರತಿವರ್ಷವೂ ಒಂದೊಂದು ಎಂಬಂತೆ ದೇವಾಲಯಗಳ ನಿರ್ಮಾಣವನ್ನೂ ಮಾಡಲಾಯಿತು. ಧಾರ್ಮಿಕ ಮಾಸಿಕ ಪತ್ರಿಕೆ 'ನವಜ್ಯೋತಿ'ಯನ್ನು ಆರಂಭಿಸಲಾಯಿತು. ಧರ್ಮಕ್ಷೇತ್ರದ ಪ್ರಕಾಶನಾ ಸಂಸ್ಥೆ ಹಾಗೂ ಧಾರ್ಮಿಕ ಪುಸ್ತಕಗಳ ಮಾರಾಟ ಕೇಂದ್ರ 'ಅಮರವಾಣಿ'ಯನ್ನು ತೆರೆಯಲಾಯಿತು. ಧಾರ್ಮಿಕ ಹಾಗೂ ನೀತಿಭೋಧೆಗೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಈ ಕೇಂದ್ರವು ಹೊರತಂದಿದೆ. ನಿವೃತ್ತ ಹಾಗೂ ಖಾಯಿಲೆಯಲ್ಲಿರುವ ಯಾಜಕರ ನಿಧಿ, ಗೃಹ ಕಾರ್ಮಿಕರ ನಿಧಿ, ವ್ಯಾಟಿಕನ್ ಸಮ್ಮೇಳನ ಸ್ಮಾರಕ ವಿದ್ಯಾನಿಧಿ, ಧರ್ಮಾಧ್ಯಕ್ಷ ಮಥಾಯಸ್ ಜ್ಯೂಬಿಲಿ ಸ್ಮಾರಕ ಕಾಲೇಜು ವಿದ್ಯಾರ್ಥಿಗಲ ನಿಧಿ- ಇವುಗಳನ್ನು ಆರಂಭಿಸಲಾಯಿತು. ಇವು ಧರ್ಮಾಧ್ಯಕ್ಷರಿಗೆ ಬಡವರ ಮೇಲಿದ್ದ ಕಳಕಳಿಯನ್ನು ವ್ಯಕ್ತಪಡಿಸುತ್ತವೆ. ಧರ್ಮಕ್ಷೇತ್ರದ ಯಾಜಕರಿಗೆ ಶಿಕ್ಷಣಕೂಟಗಳನ್ನು ಆಗಿಂದಾಗ್ಗೆ ಏರ್ಪಡಿಸಿ ತರಬೇತಿಯನ್ನು ನೀಡಲಾಯಿತು. ದೇವಾಲಯಗಳ ನಿರ್ಮಾಣ, ಬಡವಿದ್ಯಾರ್ಥಿಗಳ ಶಿಕ್ಷಣ, ನಿರುದ್ಯೋಗಿ ಯುವಜನರ ತರಬೇತಿ, ವಿಧವೆಯರಿಗೆ ನೆರವು, ಬಡವರ ವಸತಿ ಸೌಕರ್ಯಕ್ಕಾಗಿ ಹೆಂಚುಗಳ ನೆರವು, ದೈವಕರೆಗೆ ಉತ್ತೇಜನ ನಿತ್ಯನಿರಂತರವಾಗಿ ಸಾಗಿದವು. ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಿ, ಧರ್ಮಾಧ್ಯಕ್ಷ ಅಲ್ಫೋನ್ಸ್ ಮಥಾಯಸ್‌ರವರು ಗೈದ ಸಾಧನೆಗಳು ಗಮನೀಯವಾದವು. 18.10.1986ರಂದು ಧರ್ಮಾಧ್ಯಕ್ಷ ಅಲ್ಫೋನ್ಸ್ ಮಥಾಯಸ್‌ರವರನ್ನು ಬೆಂಗಳೂರು ಮಹಾಧರ್ಮಕ್ಷೇತ್ರಕ್ಕೆ ಮಹಾಧರ್ಮಾಧ್ಯಕ್ಷರನ್ನಾಗಿ ವ್ಯಾಟಿಕನ್ ನೇಮಿಸಿತು. 1986 ನವೆಂಬರ್ ಕೊನೆಯವರೆಗೂ ಇವರು ಧರ್ಮಕ್ಷೇತ್ರದ ಆಡಳಿತವನ್ನೂ ನೋಡಿಕೊಂಡರು. ಅನಂತರ ಹೊಸ ಧರ್ಮಾಧ್ಯಕ್ಷರ ನೇಮಕ ಆಗುವವರೆಗೂ ಮೊನ್ಸಿಜ್ಞೊರ್ ಜೆ.ಪಿ.ದಾ.ಪಿ. ಸಿಕ್ವೇರಾರವರು ಧರ್ಮಕ್ಷೇತ್ರದ ಆಡಲಿತಾಧಿಕಾರಿಯಾಗಿದ್ದರು.

ಸಂತ ಪೇತ್ರರ ಗುರುವಿದ್ಯಾಲಯದ ರೆಕ್ಟರ್‌ರವರಾಗಿದ್ದ ಡಾ। ಜೆ.ಬಿ. ಸಿಕ್ವೇರಾರವರನ್ನು ಚಿಕ್ಕಮಗಳೂರು ಧರ್ಮಕ್ಷೇತ್ರದ ನೂತನ ಧರ್ಮಾಧ್ಯಕ್ಷರನ್ನಾಗಿ 26.01.1987ರಂದು ನೇಮಕ ಮಾಡಲಾಯಿತು. ಜೂನ್ 11, 1987ರಂದು ಇವರಿಗೆ ಧರ್ಮಾಧ್ಯಕ್ಷ ದೀಕ್ಷೆ ಪ್ರಾಪ್ತವಾಯಿತು.

**ಅತಿ ವಂ. ಡಾ।. ಜೆ.ಬಿ. ಸಿಕ್ವೇರಾ**

30.05.1989ರಂದು ಚಿಕ್ಕಮಗಳೂರು ಧರ್ಮಕ್ಷೇತ್ರದ ರಜತ ಮಹೋತ್ಸವವನ್ನು ಆಚರಿಸಲಾಯಿತು. ಆ ಸಂದರ್ಭದಲ್ಲಿ ಈ ಧರ್ಮಕ್ಷೇತ್ರದಲ್ಲಿ ದೇವರು ಮಾಡಿರುವ ಮಹಾತ್ಕಾರ್ಯಗಳಿಗಾಗಿ ಅವರಿಗೆ ಕೃತಜ್ಞತೆ ಸಲ್ಲಿಸಲಾಯಿತು. ಧರ್ಮಾಧ್ಯಕ್ಷ ಜೆ.ಬಿ. ಸಿಕ್ವೇರಾರವರು ತಮ್ಮ ಆಡಳಿತ ಸಾಮರ್ಥ್ಯ, ಬೌದ್ಧಿಕ, ಪ್ರೌಡಿಮೆಯಿಂದ ಪ್ರತಿಭೆಯಿಂದ ಹಾಗೂ ಆಳವಾದ ಆಧ್ಯಾತ್ಮಿಕ ಪ್ರತಿಭೆಯಿಂದ ಧರ್ಮಕ್ಷೇತ್ರವನ್ನು ಪ್ರಗತಿಯೆಡೆಗೆ ಕೊಂಡೊಯ್ದಿದ್ದಾರೆ. ಮರಿಯಾನಗರ, ಬೇಲೂರು, ರಂಗೇನಹಳ್ಳಿ, ಹೆಮ್ಮಕ್ಕಿ, ಜ್ಯೋತಿನಗರ, ಮಾಗುಂಡಿ, ವಿಜಯಪುರ, ಸಕಲೇಪುರ ಹಾಗೂ ಗಾಡೇನಹಳ್ಳಿಯಲ್ಲಿ ಹೊಸ ದೇವಾಲಯಗಳನ್ನು ನಿರ್ಮಿಸಲಾಗಿದೆ. ಹಾಸನಕ್ಕೆ ಕ್ಲಾಯಿಸ್ಟರ್ಡ್ ಹಾಗೂ ಹೋಲಿಕ್ರಾಸ್ ಕನ್ಯಾಸಹೋದರಿಯರು ಆಗಮಿಸಿದ್ದಾರೆ. ತೆರೇಸಾಪುರ, ದಾಸಾಪುರ ಹಾಗೂ ಜೋಸೆಫ್ ನಗರಗಳಲ್ಲಿ ಹೊಸ ಕನ್ಯಾಸಹೋದರಿ ಮಠಗಳು ಆರಂಭವಾಗಿವೆ. ಜ್ಯೋತಿನಗರದಲ್ಲಿ ಬ್ರಿಜಿಟಾಯ್ನ್ ಕನ್ಯಾಸಹೋದರಿಯರು ಮಠವನ್ನು ಸ್ಥಾಪಿಸಿರುತ್ತಾರೆ. ಹಾಸನದಲ್ಲಿ ಸಲೇಶಿಯನ್ ಗುರುಗಳು ತಾಂತ್ರಿಕ ಶಾಲೆಯನ್ನು ತೆರೆದಿದ್ದಾರೆ. ಕಣತಿಯಲ್ಲಿ ಮೌಂಟ್‌ಫೋರ್ಟ್ ಸಭೆಯವರು ತರಬೇತಿ ಕೇಂದ್ರವನ್ನು ಆರಂಭಿಸಿದ್ದಾರೆ. ಧರ್ಮಾಧ್ಯಕ್ಷರ ನಿವಾಸದ ಬಳಿ ಕಿರಿಯ ಗುರುವಿದ್ಯಾಲಯಕ್ಕಾಗಿ ವಿಶಾಲವಾದ ಕಟ್ಟಡವನ್ನು ನಿರ್ಮಿಸಲಾಗಿದೆ. ಹೀಗೆ ಧರ್ಮಾಧ್ಯಕ, ಜೆ.ಬಿ.ಸಿಕ್ವೇರಾರವರ ನೇತೃತ್ವದಲ್ಲಿ ಧರ್ಮಕ್ಷೇತ್ರವು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುತ್ತಾ ಮುನ್ನಡೆಯಿತು.



ಇಷ್ಟೆಲ್ಲಾ ಪ್ರಗತಿ ಸಾಧಿಸಿರುವ ಚಿಕ್ಕಮಗಳೂರು ಧರ್ಮಕ್ಷೇತ್ರಕ್ಕೆ ಈಗ ನೂತನವಾಗಿ ಅತಿ। ವಂ। ಡಾ। ತೋಮಸಪ್ಪ ಅಂತೋನಿ ಸ್ವಾಮಿಯವರು ಧರ್ಮಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಫೆಬ್ರವರಿ 6, 2007ರಂದು ಅಭಿಷಿಕ್ತರಾಗಿ ದೀಕ್ಷೆ ಪಡೆದಿದ್ದಾರೆ. ಇವರ ಆಡಳಿತದಲ್ಲಿ ಈ ಧರ್ಮಕ್ಷೇತ್ರ ಮತ್ತು ಉಚ್ಛಾಯಸ್ಥಿತಿಗೆ ತಲುಪಲಿ ಎಂಬುದು ನಮ್ಮ ಹಾರೈಕೆ.



# ಬೈಬಲ್ಲಿನ ವಿಶಿಷ್ಟ ವ್ಯಕ್ತಿಗಳು : ಒನೇಸಿಮ

ರೋಮನ್ನರು ತಮ್ಮ ದಾಸದಾಸಿಯರನ್ನು ಅತ್ಯಂತ ಘೋರವಾಗಿ ಹಿಂಸಿಸಿ, ವಿಕೃತಾನಂದವನ್ನು ಅನುಭವಿಸುತ್ತಿದ್ದ ಕಾಲ ಅದು. ಕೋಳಗಳನ್ನು ಹಾಕಿಸಿಕೊಂಡೇ ಕಠಿಣ ದುಡಿತ ಮಾಡಬೇಕಾಗಿತ್ತು. ಕಾಸಿ ಕೆಂಪಾದ ಕಬ್ಬಿಣದ ಸಲಾಕೆಗಳಿಂದ ಆ ಗುಲಾಮರನ್ನು ಸುಡುತ್ತಿದ್ದರು. ಹೊಡೆಯುತ್ತಿದ್ದರು. ಚಾಟಿಯೇಟುಗಳಂತೂ ನಿರಂತರ. ಸಣ್ಣ ಸಣ್ಣ ತಪ್ಪುಗಳಿಗೂ ಕ್ರೂರಮರಣ. ನರಭಕ್ಷಕ ಮೀನುಗಳು ತುಂಬಿರುವ ಕೊಳದಲ್ಲಿ ಅವರನ್ನು ಎಸೆದು ಅವು ಅದರ ದೇಹಗಳನ್ನು ಕಿತ್ತು ತಿನ್ನುವುದನ್ನು ನೋಡಿನೋಡಿ ಕೇಕೆ ಹಾಕುತ್ತಿದ್ದರು. ಅವರೇನಾದರೂ ವಿರೋಧ ಸೂಚಿಸಿದರೆ ಪ್ರತಿಭಟಿಸಿದರೆ, ಅಥವಾ ಓಡಿಹೋಗಿ ಸಿಕ್ಕಿಬಿದ್ದರೆ ಅವರ ಗತಿ ಊಹಿಸಲೂ ಅಸಾಧ್ಯ ! ಅಂಥವರ ಹಣೆಯ ಮೇಲೆ "F " (ಓಡಿ ಹೋಗಿದ್ದವನು) ಗುರುತನ್ನ ಬರೆ ಹಾಕುತ್ತಿದ್ದರು.

ಒನೇಸಿಮ ಕ್ರೈಸ್ತನಾದ ಫಿಲೆಮೋನನಿಗೆ ದಾಸನಾಗಿದ್ದವನು. ಈ ಫಿಲೆಮೋನ ಕೊಲೊಸ್ಸೆಯ ಅನುಕೂಲಸ್ಥ, ಪೌಲನ ಪ್ರಭಾವಕ್ಕೆ ಒಳಗಾಗಿ, ಕ್ರಿಸ್ತನ ಹಟ್ಟಿಗೆ ಸೇರಿಕೊಂಡನು. ಅಪ್ಪಿಯಳು ಈತನ ಪತ್ನಿ, ಇವರಲ್ಲಿ ಗುಲಾಮನಾಗಿದ್ದ ಒನೇಸಿಮ, ಒಮ್ಮೆ ಇವರ ಮನೆಯಲ್ಲಿ ಕಳ್ಳತನಮಾಡಿ ರೋಮಾಪುರಕ್ಕೆ ಓಡಿಬಂದು, ಅಲ್ಲಿ ಸೆರೆಯಲ್ಲಿದ್ದ ಪೌಲನನ್ನು ಹೇಗೋ ಸಂಧಿಸಿದ. ಪೌಲನ ಪ್ರವಚನ ಆತನ ಭಕ್ತಿ ನಿಷ್ಠೆಗಳು ಆತನ ವ್ಯಕ್ತಿತ್ವ, ಪಾಂಡಿತ್ಯಗಳಿಂದ ಪ್ರಭಾವಿತನಾಗಿ ಕ್ರಿಸ್ತನ ಹಿಂಬಾಲಕನೂ ಆದ, ಪೌಲನಿಗೆ ಬಹು ಅಚ್ಚು ಮೆಚ್ಚಾಗಿದ್ದು, ಆತನು ಒನೇಸಿಮನ ಸೇವೆಯ ಬಗ್ಗೆ ಬಹಳ ಸಂತೃಪ್ತನಾಗಿದ್ದನ್ನೂ ಕಾಣುತ್ತೇವೆ.

ಹೀಗಿರುವಾಗ ಪೌಲನ ಜೊತೆ ಸೆರೆಯಲ್ಲಿದ್ದ ಎಪಫ್ರನ ಒಮ್ಮೆ ಒನೇಸಿಯುನನ್ನು ನೋಡಿ (ಆತನೂ ಕೊಲೊಸ್ಸೆಯುವನೇ) ಇವನು ಫಿಲೆಮೋನನ ಗುಲಾಮ ಎಂದು ಗುರುತಿಸಿ, ಪೌಲನಿಗೆ ಈ ವಿಷಯವನ್ನು ತಿಳಿಸಿದಾಗ ಆತನಿಗೆ ಆಘಾತವೇ ಆಯಿತು. ಆತನಿಗೆ ಧರ್ಮೋ 23: 15-16 ವಚನಗಳು ನೆನಪಿಗೆ ಬಂದವು--

"ತಪ್ಪಿಸಿಕೊಂಡ ದಾಸನು ನಿಮ್ಮಲ್ಲಿರುವುದಕ್ಕೆ ಬಂದರೆ ಅವನನ್ನು ಅವನ ದಣಿಗೆ ತಿರುಗಿ ವಶಪಡಿಸಬಾರದು. ನಿಮ್ಮ ಊರುಗಳಲ್ಲಿ ಯಾವ ಸ್ಥಳವು ಅವನಿಗೆ ಇಷ್ಟವಾಗಿದಯೇ ಅಲ್ಲೆ ಅವನು ವಾಸಮಾಡಬಹುದು, ಅವನನ್ನು ನಿರ್ಬಂಧ ಪಡಿಸಬಾರದು'' ಆದರೆ, ಬೇರೊಬ್ಬರ ದಾಸನನ್ನು ತಾನು ಇಟ್ಟುಕೊಳ್ಳುವುದು ಹೇಗೆ? ಅದೂ ಅಪರಾದವಾಯಿತಲ್ಲಾ, ಪೌಲನಿಗೆ ಒಳ್ಳೇ ಬಿಕ್ಕಟ್ಟಿನಲ್ಲಿ ಸಿಕ್ಕಿ ಬಿದ್ದಂತಾಯಿತು! ಈಗಂತೂ ಒನೇಸಿಮನೂ ಕ್ರೈಸ್ತ, ಅವನ ಒಡೆಯ ಫಿಲೆಮೋನನು ಕ್ರೈಸ್ತ, ಹೀಗಾಗಿ ಅವರಿಬ್ಬರೂ ಕ್ರಿಸ್ತನಲ್ಲಿ ಸಹೋದರರೇ ಗಲಾತ್ಯ 4:28 ರಲ್ಲಿರುವಂತೆ "ಕ್ರಿಸ್ತಯೇಸುವಿನಲ್ಲಿ ಎಲ್ಲರೂ ಒಂದೇ ಯೆಹೂದ್ಯ, ಗ್ರೀಕ ಎಂದೂ ಆಳು ಒಡೆಯ ಎಂದೂ ಗಂಡು ಹೆಣ್ಣು ಎಂದೂ ಭೇದವಿಲ್ಲ''

ಜತೆಗೆ, ಕದ್ದು ಓಡಿಹೋದ ಗುಲಾಮ, ಮತ್ತೆ ಒಡೆಯನ ಬಳಿಗೆ ಹಿಂತಿರುಗುವುದು, ಆಗಿನ ದಿನಗಳಲ್ಲಿ ತೀವ್ರವಾದ ಶಿಕ್ಷೆಗಳಿಗೆ ಪಾತ್ರವಾಗಿತ್ತು. ಅದರಿಂದಲೇ ಪೌಲನು ಒನೇಸಿಮನನ್ನು ಬರಿಗೈಯಲ್ಲಿ ಕಳುಹಿಸಲಿಲ್ಲ. ಸಾಕಷ್ಟು ಕಾರಣಗಳನ್ನು ನೀಡಿ ಒನೇಸಿಮನು ಉಪಯುಕ್ತ (ಅವನ ಹೆಸರಿನ ಅರ್ಥವೂ ಅದೇ) ಇವನನ್ನು ಪ್ರೀತಿಯಿಂದ ಸಹೋದರನಂತೆ ಸ್ವೀಕರಿಸಬೇಕು ಎಂದು ಪರಿಣಾಮಕಾರಿಯಾಗಿ ವಕಾಲತ್ತು ವಹಿಸುತ್ತಾನೆ.

**ಪೌಲನು ಕೊಟ್ಟ ಕಾರಣಗಳಲ್ಲಿ ಕೆಲವು ಹೀಗಿವೆ.**

1. ಫಿಲೋಮೋನನು ಕ್ರೈಸ್ತನಾಗಿದ್ದೇ ತನ್ನಿಂದ. ಹಾಗಾಗಿ ಆತನು ತನಗೆ ಋಣಿಯಾಗಿದ್ದಾನೆ.

2. ಒನೇಸಿಮನು ತನಗೆ ಅತ್ಯಂತ ಪ್ರಿಯನಾಗಿದ್ದಾನೆ. ಲೋಕಸಂಬಂಧವಾಗಿ ಮಾತ್ರವಲ್ಲ, ಆತ್ಮಸಂಬಂಧವಾಗಿಯೂ ಅಷ್ಟೆ.

3. ಒನೇಸಿಮನು ಫಿಲೆಮೋನನಿಂದ ಏನನ್ನಾದರೂ ಕಳವುಮಾಡಿದ್ದಾನೋ? ಹಾಗಿದ್ದಲ್ಲಿ, ತಾನು ಅದನ್ನೆಲ್ಲಾ ತೀರಿಸುತ್ತೇನೆ.

4. ಈಗಂತು ಒನೇಸಿಮನು ಅನುಪಯುಕ್ತನಲ್ಲ, ಉಪಯುಕ್ತ ನನಗೆ ಬಹಳ ಸಹಾಯಕನಾಗಿದ್ದಾನೆ.

5. ನೀನು ನನ್ನನ್ನು ಸಂತೋಷಪಡಿಸುವಿ, ನನ್ನ ಮಾತನ್ನು ಕೇಳುವಿ, ಎಂಬ ಭರವಸೆ ನನ್ನಲ್ಲಿದೆ.

✍ ಡಾ. ಲೀಲಾವತಿ ದೇವದಾಸ್

6. ಇಲ್ಲಿ ಬಲಾತ್ಕಾರವಿಲ್ಲ. ಸ್ವೀಕಾರವು ಮನಃಪೂರ್ವಕವಾಗಿ ನೆರವೇರಿಲಿ.

7. ನಿನಗೆ ದಾಸನಾಗಿದ್ದ ಒನೇಸಿಮನು ನಿರಂತರವಾಗಿ ನಿನ್ನವನಾಗಿಯೇ ಇರಬೇಕು.

ಈ ಕಿರುಪತ್ರ, ನಮ್ಮಲ್ಲಿರುವ ಪೌಲನ ಏಕೈಕ ಖಾಸಗಿ ಪತ್ರ. ಇಲ್ಲಿ ಒನೇಸಿಮನ ಬಗ್ಗೆ ಪೌಲನಿಗಿರುವ ಪ್ರೀತಿ ಅವನನ್ನು ಮಗನಂತೆ ಕಾಣುವ ಮನೋಭಾವ, ಪೌಲನ ಕರ್ತವ್ಯಪ್ರಜ್ಞೆ - ಇವೆಲ್ಲವೂ ಪ್ರಕಾಶಿಸುತ್ತಿವೆ. ಪೌಲನು ಇಲ್ಲಿ ಗುಲಾಮಗಿರಿಯ ವಿರುದ್ಧವಾಗಿ ಮಾತಾಡಿಲ್ಲ ಕಾರಣ ಅದು ಆಗಿನ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ವ್ಯವಸ್ಥೆ ಆದರೆ, ಆಗಿದ್ದ ಕ್ರೌರ್ಯ, ಗುಲಾಮರನ್ನು ಅತ್ಯಂತ ಕೀಳಾಗಿ ಕಾಣುತ್ತಿದ್ದ ಧೋರಣೆ - ಇವೆಲ್ಲಾ ಕ್ರೈಸ್ತ ಸಹೋದರತ್ವ, ಸಮಾನತೆಗಳ ಹೊಳೆಯಲ್ಲಿ ಕೊಚ್ಚಿ ಹೋಗುತ್ತಿರುವುದನ್ನು ಕಾಣುತ್ತೇವೆ.

ಮುಂದೇನಾಗಿರಬಹುದು ಎಂಬುದು ನಮ್ಮ ಊಹೆಗೆ ಬಿಟ್ಟಿದ್ದು!


**ಜೀವನ ಸಂಗಾತಿಯ ಹುಡುಕಾಟದಲ್ಲಿರುವಿರಾ ?**

**ಯೋಗ್ಯ ವಧು-ವರರ ಅನ್ವೇಷಣೆಯಲ್ಲಿದ್ದಿರಾ ?**

**ಆಂತಕ - ಚಿಂತೆಗೊಳಗಾಗುವ ಅಗತ್ಯವಿಲ್ಲ.**

**ಇಗೋ ನಿಮ್ಮ ಸಹಾಯಕ್ಕೆ ನಿಮ್ಮ ಒತ್ತಡವನ್ನು ಹಗುರಗೊಳಿಸಲು**

**ನಿಮಗಿದೋ ಸುವರ್ಣವಕಾಶ**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ.

**COUPLE FOR CHRIST**

"Peace House", Gowri Caluve, Near Water Tank,
Vijayapura Extension, Chikmagalur - 577 101.



Contact :

**Mr. Sylvester Mascharenhas**

Mob. : +91 98804 05966, +91 94810 70028,
+91 90366 89356.

E-mail : coupleforchrist2@gmail.com


ಕೆಲಸದ ಆರಂಭದಲ್ಲಿ ತೋರುವ ಎಚ್ಚರ ಶ್ರದ್ಧೆಗಳನ್ನು ಕೊನೆಯಲ್ಲೂ ತೋರಿದರೆ ಎಂದೂ ಸೋಲು ಇರದು.

# ಯಶಸ್ವಿಯಲ್ಲ, ನಿಷ್ಠಾವಂತತೆಯಾಗಬೇಕು ನಮ್ಮ ಕಥೆ

ಎಲ್ಲಾ ಕಡೆಗಳಲ್ಲೂ ಒಳ್ಳೊಳ್ಳೆಯ ಮನೆಗಳನ್ನು ಕಟ್ಟುವ ದೊಡ್ಡ ಕಂಪೆನಿಯೊಂದರಲ್ಲಿ ಒಬ್ಬಾತ ಅನೇಕ ವರ್ಷಗಳಿಂದ ನಿಷ್ಠಾವಂತನಾಗಿ ದುಡಿಯುತ್ತಿದ್ದ. ಕಂಪೆನಿಯ ನಿರ್ವಾಹಕರು ಕಟ್ಟುವುದಕ್ಕಾತನಿಗೆ ದೊಡ್ಡ ದೊಡ್ಡ ಕಟ್ಟಡಗಳನ್ನೇ ವಹಿಸಿ ಕೊಡುತ್ತಿದ್ದರು. ಒಂದು ದಿನ ನಿರ್ವಾಹಕರು ಆತನನ್ನು ಕರೆದು, ಈ ಸಂಸ್ಥೆಯಲ್ಲಿ ಅನೇಕ ವರ್ಷಗಳಿಂದ ನೀನು ದುಡಿಯುತ್ತಿರುವೆ. ಈಗ ನಿನಗೆ ನಿವೃತ್ತಿಯಾಗುವ ಸಮಯ ಸಮೀಪಿಸಿತು. ಇದು ನಾನು ನಿನಗೆ ವಹಿಸಿಕೊಡುವ ಕೊನೆಯ ಕಾರ್ಯ. ಇದನ್ನು ಮಾಡಿ ಮುಗಿಸಿದ ನಂತರ ನೀನು ನಿವೃತ್ತನಾಗಬೇಕು. ಕೊನೆಯ ಕಾರ್ಯವಾಗಿ ನೀನೊಂದು ಬೃಹತ್ ಕಾರ್ಯವನ್ನೆಸಗಬೇಕು. ಎಂದರೆ ದೊಡ್ಡ ಕಟ್ಟಡವೊಂದನ್ನು ಕಟ್ಟಬೇಕು. ಅದರದ್ದು ಖರ್ಚು ಎಷ್ಟೇಯಾಗಲೀ ಪರ್ವಾಗಿಲ್ಲ. ಅದನ್ನೆಲ್ಲಾ ನಾನು ನಿನಗೆ ಕೊಟ್ಟು ಬಿಡುತ್ತೇನೆ, ಎಂದರು.

ಆಗ ಆ ಕಾರ್ಮಿಕ, 'ಇದು ನನ್ನ ಕೊನೆಯ ಕೆಲಸವಂತೆ, ಆಗಲಿ, ಇದರಲ್ಲಾದರೂ ನನ್ನ ಭವಿಷ್ಯಕ್ಕಾಗಿ ಸ್ವಲ್ಪ ಕಾಸು ಉಳಿಸಿಕೊಳ್ಳುತ್ತೇನೆ, ಎಂದುಕೊಂಡ ಅವನಿಗೆ ಆ ಮನೆ ಕಟ್ಟಲು ಕೇಳಿದ ದುಡ್ಡನ್ನೆಲ್ಲಾ ನಿರ್ವಾಹಕನು ಕೊಟ್ಟಾಗ ಆ ಕಟ್ಟಡಕ್ಕೆ ಬೇಕಾದ ಸಿಮೆಂಟು, ಮರಳು, ಕಲ್ಲು, ಬಣ್ಣ ಇಟ್ಟಿಗೆಯನ್ನೆಲ್ಲಾ ಆತ ಕೊಂಡು ಕೊಂಡ. ಆದರೆ ಕೊಂಡುಕೊಂಡ ವಸ್ತುಗಳೆಲ್ಲಾ ತೀರ ಅಗ್ಗ, ಕಡಿಮೆ ಬೆಲೆಯ ಹಾಗೂ ಕಳಪೆ ವಸ್ತುಗಳಾಗಿದ್ದವು. ಹೇಗಾದರೂ ಮಾಡಿ ಭವಿಷ್ಯಕ್ಕೆ ಹಣ ಉಳಿಸಬೇಕಲ್ವಾ! ಅವನು ನಿರ್ಮಾಣ ಮಾಡಿದ ಮನೆ ಹೆಚ್ಚು ದಿನ ಉಳಿಯುವಂತಿರಲಿಲ್ಲ. ಕೊನೆಗೆ ಮನೆ ಸಂಪೂರ್ಣಗೊಂಡಾಗ ಅದರ ಬೀಗದ ಕೈಗಳನ್ನು ಕಂಪೆನಿಯ ಮಾಲೀಕರಿಗೆ ಆತ ಹಸ್ತಾಂತರಿಸಿದ. ಮಾಲಿಕ ಆತನನ್ನು ಅಭಿನಂದಿಸುತ್ತಾ ಅಂತಿಮ ಮಾತನ್ನಾಡಿದ ''ನೋಡು, ನೀನು ನನ್ನ ಸಂಸ್ಥೆಯಲ್ಲಿ ಇಷ್ಟೊಂದು ವರ್ಷಗಳಿಂದ ಪ್ರಾಮಾಣಿಕ ದುಡಿದಿರುವ, ಹೆಚ್ಚೇನೂ ನಿನಗೆ ನಾನಿತ್ತಲ್ಲ. ಆದುದರಿಂದ ನೀನೂ ನಿನ್ನ ಕುಟುಂಬದವರೂ ನಿವೃತ್ತಿಯಾದ ಮೇಲೆ ಸುಖವಾಗಿ ಬಾಳಲೆಂದೇ ಈ ಮನೆಯನ್ನು ನಿನಗಾಗಿಯೇ ನಾನು ಕಟ್ಟಿಸಿದ್ದೇನೆ ಎಂದದ್ದೆ ಆ ಮನೆಯ ಬೀಗದ ಕೈಗಳನ್ನು ಅವನಿಗೆ ಹಿಂತಿರುಗಿಸಿದ. ಆದರೆ ಆತ ಪಶ್ಚಾತ್ತಾಪದಿಂದ ಕಣ್ಣೀರಿಡುತ್ತಾ ಮಾಲೀಕನ ಮುಂದೆ ಮೊಣಕಾಲೂರಿ ತನ್ನ ಅಪ್ರಾಣಿಕತೆಯನ್ನು ಒಪ್ಪಿಕೊಂಡ.

ನಾವು ಬಿತ್ತಿದ್ದನ್ನು ನಾವು ಕೊಯ್ಯುತ್ತೇವೆ. ಆದುದರಿಂದಲೇ ನಾನು ನಿಷ್ಠಾವಂತರೂ ಪ್ರಾಮಾಣಿಕರೂ ಆಗರಿಬೇಕೆಂದು ನಮ್ಮ ಆಗ್ರಹಪಡಿಸುತ್ತಾ ಯೇಸುಸ್ವಾಮಿ ಇಂತೆಂದರು: ''ಸಣ್ಣ ವಿಷಯಗಳಲ್ಲಿ ಪ್ರಾಮಾಣಿಕವಾಗಿ ನಡೆದುಕೊಳ್ಳುವವನು ದೊಡ್ಡ ವಿಷಯಗಳೆಲ್ಲಾ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಾನೆ. ಸಣ್ಣ ವಿಷಯಗಳಲ್ಲಿ ದ್ರೋಹ ಮಾಡುವವನು ದೊಡ್ಡ ವಿಷಯಗಳಲ್ಲೂ ದ್ರೋಹಮಾಡುತ್ತಾನೆ. ಲೌಕಿಕ ಆಸ್ತಿಪಾಸ್ತಿಗಳ ವಿಷಯದಲ್ಲಿ ನೀವು ಪ್ರಾಮಾಣಿಕವಾಗಿ ನಡೆದುಕೊಳ್ಳದೆ ಹೋದರೆ, ನಿಮ್ಮನ್ನು ನಂಬಿ ನೈಜ ಸಂಪತ್ತನ್ನು ನಿಮ್ಮ ವಶಕ್ಕೆ ಕೊಡುವವರಾರು? ಇನ್ನೊಬ್ಬರಿಗೆ ಸೇರಿದ ವಸ್ತುಗಳ ವಿಷಯದಲ್ಲಿ ನೀವು ಪ್ರಾಮಾಣಿಕರಾಗಿ ನಡೆದುಕೊಳ್ಳದೆ ಹೋದರೆ ನಿಮ್ಮ ಸ್ವಂತಕ್ಕೆ ಏನನ್ನಾದರೂ ಕೊಡುವವರಾರು?'' (ಲೂಕ 16:10-12) ಸಂಕ್ಷಿಪ್ತವಾಗಿ ಆಧ್ಯಾತ್ಮಿಕ ಬರಹಗಾರ ಆವೀ ಕಾರ್ಮೈಕಲ್ ಇಂತೆನ್ನುತ್ತಾರೆ. ''ಚಿಕ್ಕದೇನೋ ಚಿಕ್ಕದೇ ಆದರೆ ಚಿಕ್ಕಪುಟ್ಟ ವಿಷಯಗಳಲ್ಲೇ ನಿಷ್ಠಾವಂತರಾಗಿರುವುದು ಕಿರಿದಾದದೇನಲ್ಲ. ಅದು ಶ್ರೇಷ್ಠವೇ.

ಹಣದ ದುರಾಸೆ ಹಾಗೂ ಪ್ರಾಪಂಚಿಕ ಹಾಗೂ ಲೌಕಿಕ ವಸ್ತುಗಳ ಅತಿಯಾದ ಆಸೆ ನಾವು ಅಪ್ರಾಮಾಣಿಕರಾಗಿರುವಂತೆ ಹಾಗೂ ನಿಷ್ಠಾವಂತರಾಗಿರದಂತೆ ನಮ್ಮನ್ನು ಪ್ರಚೋದಿಸುತ್ತದೆ. ಬೈಬಲ್ ಶ್ರೀಗ್ರಂಥದಲ್ಲೇ ದೇವರು ನಮಗೆನ್ನುತ್ತಾರೆ. ''ಹಣದಾಸೆಗೆ ಬಲಿಯಾಗಬೇಡಿ ನಿಮಗೆ ಇರುವುದರಲ್ಲೇ ತೃಪ್ತರಾಗಿರಿ. ಎಂದೆಂದಿಗೂ ನಾನು ನಿನ್ನ ಕೈಬಿಡಲಾರೆ, ತ್ಯಜಿಸಲಾರೆ, ಎಂದು ನಾನೇ ನಿಮಗೆ ಹೇಳಿಲ್ಲವೇ?'' (ಹಿಬ್ರಿಯ 13:5)

ಯಾರನ್ನಾದರೂ ಸಂತಸಪಡಿಸಬೇಕೆಂದಿದ್ದರೆ ಪ್ರಾಪಂಚಿಕ ವಸ್ತುವನ್ನೇನನ್ನೂ ಅವನಿಗೆ ನೀಡಬೇಡ, ಬದಲಿಗೆ ಅವನ ಆಸೆ ಆಕಾಂಕ್ಷೆಗಳನ್ನೇ ಕಿತ್ತುಬಿಡು. ತನಗೆ ಬೇಕಾಗಿರುವುದನ್ನೆಲ್ಲಾ ಉಳ್ಳವನೇ ನಿಜವಾಗಿ ಭಾಗ್ಯವಂತ. ಅಸಂತುಷ್ಟ ಯಾರು ಗೊತ್ತಾ? ತನಗೆ ಬೇಕಾದುದೆಲ್ಲಾ ಸಿಕ್ಕಿದ ಮೇಲೆ ಇನ್ನೂ ಬೇಕೇ ಬೇಕೆಂದು ಆಸೆ ಪಡುವವನೇ. ಗ್ರೀಕ್ ತತ್ವಜ್ಞಾನಿ ಸಾಕ್ರೆಟಿಸನು ಸತ್ಯವಾಗಿ ನುಡಿದ ಏನೆಂದರೆ ಯಾರಾದರೂ ಜೀವಿಸುತ್ತಿದ್ದ ಸಾಕ್ರೆಟಿಸ್ ಕಾಲಿಗೆ ಪಾದರಕ್ಷೆಗಳನ್ನು ಧರಿಸುತ್ತಿರಲಿಲ್ಲ. ಆತ ಪ್ರತೀ ದಿನ ಮಾರುಕಟ್ಟೆಗೆ ಹೋಗಿ ಅಲ್ಲಿ ಮಾರಾಟಕ್ಕಿಟ್ಟಿದ್ದ ಸಾವಿರಾರು ವಸ್ತುಗಳನ್ನು ನೋಡಿಕೊಂಡು ಬರಿ ಗೈಯ್ಯಲ್ಲೆ ಮರಳಿ ಬರುತ್ತಿದ್ದ ಯಾಕೆಂದು ಕೇಳಿದ್ದಕ್ಕೆ ಆತ ನುಡಿದ '' ಅಲ್ಲಿದ್ದುದೆಲ್ಲವೂ ನನಗೇನು ಆಗತ್ಯವಿಲ್ಲವೆಂದು ಮನಗಂಡ ನಾನೆಂತಹ ಭಾಗ್ಯವಂತ!'' ಸತ್ಯವಲ್ಲವೇ?

✍ ಹೇಮಾ, ಚಿಕ್ಕಮಗಳೂರು

## ಮಲಯಾಳ ಬೈಬಲ್‌ಗೆ ಇನ್ನೂರು ವರ್ಷ

ಸಿರಿಯಾ ಭಾಷೆಯಿಂದ ಕೇರಳದ ಮಲಯಾಳಂಗೆ ಬೈಬಲ್ ಭಾಷಾಂತರಗೊಂಡು ಇನ್ನೂರು ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಇಲ್ಲಿಯ ಮಲಂಕರ ಆರ್ಥೋಡಕ್ಸ್ ಚರ್ಚ್ ದ್ವಿಶತಮಾನೋತ್ಸವ ಆಚರಿಸಲು ಸಿದ್ಧತೆ ಮಾಡಿಕೊಂಡಿದೆ.

ರಾಜ್ಯದ ಒಟ್ಟು ಜನಸಂಖ್ಯೆಯ ಶೇ. ಇಪ್ಪತ್ತರಷ್ಟಿರುವ ಕ್ರಿಶ್ಚಿಯನ್ ಸಮುದಾಯಕ್ಕೆ ಮಲಯಾಳ ಭಾಷೆಯಲ್ಲಿಯೇ ಬೈಬಲ್ ಓದಲು ಸಿಕ್ಕಿದ್ದು 1811ರಲ್ಲಿ. ದಕ್ಷಿಣ ಕೇರಳದ ಕಾಯಂಕುಳುಂನ ವಿದ್ವಾಂಸ ಫಿಲಿ ಪೋಸ್ ರ್‍ಯಾಂಬಾನ್ ಮಲಯಾಳಕ್ಕೆ ಬೈಬಲ್ ಅನ್ನು ಭಾಷಾಂತರ ಮಾಡಿದರು. ಯಾರ ಸಹಾಯ ಇಲ್ಲದೆಯೇ ಸಿರಿಯಾ ಭಾಷೆಯಿಂದ ಮಲಯಾಳಕ್ಕೆ ಬೈಬಲ್ ಅನ್ನು ಭಾಷಾಂತರಿಸಲು ರ್‍ಯಾಂಬಾನ್ ತುಂಬ ಕಷ್ಟಪಟ್ಟಿದ್ದು, ಹೀಗೆ ಭಾಷಾಂತರಿಸಿದ ಬೈಬಲ್ ಅನ್ನು ಮುಂಬೈ ಮುದ್ರಣಾ ಲಯವೊಂದರಲ್ಲಿ ಕಲ್ಲಚ್ಚು ಬಳಸಿ ಮುದ್ರಿಸಿ ಹೊರತರಲಾಯಿತು. ಆರಂಭದಲ್ಲಿ ಈ ಬೈಬಲ್ ಮಲಯಾಳ, ತಮಿಳು ಭಾಷೆಯ ಪ್ರಭಾವಕ್ಕೆ ಒಳಗಾಗಿತ್ತು. ಭಾಷಾಂತರ ಗೊಂಡ ಈ ಬೈಬಲ್ ರ್‍ಯಾಂಬಾನ್ ಬೈಬಲ್ ಎಂದೇ ಜನಪ್ರಿಯವಾಗಿತ್ತು ಎಂದು ಕ್ರೈಸ್ತ ಸಾಹಿತ್ಯದ ವಿದ್ವಾಂಸ ಡಿ. ಬಾಬು ಪಾಲ್ ತಿಳಿಸಿದ್ದಾರೆ.



ದುರಾಸೆಯು ನಮ್ಮಲ್ಲಿನ ಒಳ್ಳೆಯ ಗುಣಗಳನ್ನೆಲ್ಲಾ ಅಳಿಸಿ ಹಾಕುತ್ತದೆ.

## ಮಾತೆ ಮರಿಯ ಅಂತಿಮ ಗುರಿ ತಲುಪಲು ಕಾರಣ ಒಲಂಪಿಕ್ ಸ್ವರ್ಣ ಪದಕ ವಿಜೇತಯ ನಂಬಿಕೆ

ಇತ್ತೀಚೆಗೆ ನಡೆದ ಲಂಡನ್ ಒಲಂಪಿಕ್ಸ್‌ನ ಐದು ಸಾವಿರ ಮೀಟರ್ ಓಟದಲ್ಲಿ ಸ್ವರ್ಣ ಪದಕ ವಿಜೇತ ಇಥಿಯೋಪಿಯಾದ ಅಥ್ಲೀಟ್ ಮೆಸರೆಟ್ ಡೆಫಾರ್ ತನ್ನ ಈ ಸಾಧನೆಗೆ ಮಾತೆ ಮರಿಯ ಕಾರಣ ಎಂದು ಬಲವಾಗಿ ನಂಬಿದ್ದಾಳೆ. ತನ್ನ ಬಳಿ ಇರಿಸಿಕೊಂಡಿದ್ದ ಮಾತೆ ಮರಿಯ ಮತ್ತು ಯೇಸುವಿನ ಚಿತ್ರವನ್ನು ತೋರಿಸುತ್ತಾ ಆನಂದಭಾಷ್ಪ ಸುರಿಸಿದ ಮೆಸರೆಟ್, ತನ್ನ ಪ್ರಬಲ ಸ್ಪರ್ಧಿ ತನ್ನ ದೇಶದವರೇ ಆದ ತಿರುನೇಶ ಡಿಬಾಬ ಅವರನ್ನು ಹಿಂದಿಕ್ಕಿ ಜಯದ ಗೆರೆಯನ್ನು ದಾಟಿದಾಗ ತನ್ನ ಬಳಿಯಿದ್ದ ಮಾತೆ ಮರಿಯಳ ಚಿತ್ರವನ್ನು ಎತ್ತಿ ತೋರಿಸಿದಳು.

## ನಾಯಿಗೆ ಪರಮಪ್ರಸಾದ - ಆರ್ಚ್‌ಬಿಷಪ್ ಕೆಂಡಾಮಂಡಲ

ಆಸ್ಟ್ರೇಲಿಯಾದ ಮೆಲ್ಬೋರ್ನ್ ಮಹಾಧರ್ಮಕ್ಷೇತ್ರದಿಂದ 2011 ರಲ್ಲಿ ಹೊರನಡೆದ ಯಾಜಕರೋರ್ವರು ಬಲಿಪೂಜೆ ಅರ್ಪಿಸಲು ಹಾಗೂ ಇನ್ನಿತರ ಸೇವಾಕಾರ್ಯಗಳನ್ನು ಕೈಗೊಳ್ಳಲು ನಿಷೇಧಕ್ಕೊಳಗಾದರೂ ಬಲಿಪೂಜೆಯನ್ನರ್ಪಿಸಿ ಪರಮ ಪ್ರಸಾದವನ್ನು ನಾಯಿಗೆ ನೀಡಿ ಕಥೋಲಿಕ ನಂಬಿಕೆಯನ್ನು ಗೇಲಿ ಮಾಡಲು ಮುಂದಾದ ಈ ಮಾಜಿ ಯಾಜಕನನ್ನು ಅಲ್ಲಿನ ಮಹಾಧರ್ಮಾಧ್ಯಕ್ಷ ತರಾಟೆಗೆ ತೆಗೆದುಕೊಂಡ ಘಟನೆ ವರದಿಯಾಗಿದೆ.

## ಒಲಂಪಿಕ್ ಆಟಗಳನ್ನು ನಿಷೇಧಿಸಿದ ಕಥೋಲಿಕ ಚಕ್ರವರ್ತಿ :

ಇದು ಕ್ರಿ.ಶ. 390 ರಲ್ಲಿ ನಡೆದ ಘಟನೆ. ತನ್ನ ವಿರುದ್ಧ ದಂಗೆಯೆದ್ದ ಜನರನ್ನು ಮಣಿಸುವ ಸಲುವಾಗಿ ಥೆಸ್ಸಲೋನಿಯನ್ ಸರ್ಕಸ್‌ನ್ನು ವೀಕ್ಷಿಸುತ್ತಿದ್ದ ಪ್ರೇಕ್ಷಕರ ಮಾರಣ ಹೋಮಕ್ಕೆ ಆದೇಶ ನೀಡಿದ ಕಾರಣಕ್ಕಾಗಿ ಕಥೋಲಿಕ ರೋಮನ್ ಚಕ್ರವರ್ತಿಯನ್ನು ಗಡೀಪಾರು ಮಾಡುವ ಬೆದರಿಕೆಯನ್ನು ಇಟಲಿಯ ಮಿಲಾನ್‌ನ ಅಂದಿನ ಮಹಾಧರ್ಮಾಧ್ಯಕ್ಷ ಸಂತ ಅಂಬ್ರೋಸ್ ಒಡ್ಡಿದ್ದರು. ಆದರೆ ಮನಮರುಗಿದ ಚಕ್ರವರ್ತಿಗೆ ಮತ್ತೊಮ್ಮೆ ಆತ ಪರಮಪ್ರಸಾದ ಸ್ವೀಕರಿಸಬೇಕಾದರೆ ಒಂದು ತಿಂಗಳ ಪ್ರಾಯಶ್ಚಿತ ಅನಿವಾರ್ಯ ಎಂದು ತೀರ್ಪಿತ್ತರು. ಶಿಕ್ಷಾವಧಿ ಮುಗಿದ ನಂತರ ಚಕ್ರವರ್ತಿ ಥಿಯೋಡೋಸಿಯಸ್ ಅನ್ಯ ಧರ್ಮೀಯರ ಎಲ್ಲಾ ಆಚರಣೆಗಳನ್ನು ನಿಷೇಧಿಸಿದ. ಅದರಲ್ಲಿ ಒಲಂಪಿಕ್ ಕ್ರೀಡೆಗಳು ಒಂದಾಗಿತ್ತು. ಕ್ರಿಶ್ಚಿಯನ್ ಆಡಳಿತಾವಧಿಯಲ್ಲಿ ಸುಮಾರು ಸಾವಿರ ನಾಲ್ಕೂರು ವರ್ಷಗಳ ಕಾಲ ಒಲಂಪಿಕ್ಸ್ ಎಲ್ಲರಿಂದಲೂ ಮರೆಯಾಗಿತ್ತು.

## ಧಾರ್ಮಿಕ ಪರ ರಾಜ್ಯಗಳು ದಾನದಲ್ಲೂ ಮೇಲುಗೈ

ಅಮೇರಿಕಾದ ಧಾರ್ಮಿಕ ಹಿನ್ನೆಲೆ ಹಾಗೂ ಪರ ಇರುವ ರಾಜ್ಯಗಳು ದಾನ ನೀಡುವುದರಲ್ಲಿ ಇತರ ರಾಜ್ಯಗಳಿಗಿಂತ ಮುಂದಿದೆ ಎಂದು ಸಮೀಕ್ಷೆಯೊಂದು ವರದಿ ಮಾಡಿದೆ. ಅದರಲ್ಲೂ ವಿಶೇಷವಾಗಿ ಈಶಾನ್ಯ ಭಾಗದ ರಾಜ್ಯಗಳಂತೂ ಧಾರ್ಮಿಕತೆಯಲ್ಲೂ ದಾನ ನೀಡುವುದರಲ್ಲೂ ಬಲು ಹಿಂದಿವೆ ಎಂದಿರುವ ಸಮೀಕ್ಷೆ, ಮಿಸಿಸಿಪ್ಪಿ, ಅಲಬಾಮ, ಟೆನ್ನೆಸ್ಸಿ ಹಾಗೂ ದಕ್ಷಿಣ ಕರೊಲಿನಾ ಧಾರ್ಮಿಕತೆಯ ವಿಷಯದಲ್ಲಿ ಹಾಗೂ ದಾನ ನೀಡುವ ವಿಚಾರದಲ್ಲಿ ಎತ್ತಿದ ಕೈ ಎಂದು ಬಣ್ಣಿಸಿದೆ.

## ಪೋಪ್ ರಿಂದ ನೂತನ ಪರಿಪತ್ರ

ಪೋಪ್ 16ನೇ ಬೆನೆಡಿಕ್ಟ್ ಅತೀ ಶೀಘ್ರದಲ್ಲಿಯೇ "ವಿಶ್ವಾಸದ ವರ್ಷ"ದ ಅಂಗವಾಗಿ ನೂತನ ಪರಿಪತ್ರವನ್ನು ಹೊರತರುವ ಉತ್ಸುಕದಲ್ಲಿದ್ದಾರೆ ಎಂದು ವ್ಯಾಟಿಕನ್ನಿನ ವಿದೇಶಾಂಗ ಕಾರ್ಯದರ್ಶಿ ಕಾರ್ಡಿನಲ್ ಟರ್ಸಿಸಿಯೋ ಬಹಿರಂಗ ಪಡಿಸಿದ್ದಾರೆ. ಈಗಾಗಲೇ "ಜೀಸಸ್ ಆಫ್ ನಜರೇತ್" ಪುಸ್ತಕದ 3ನೇ ಭಾಗವನ್ನು ಸಂಪೂರ್ಣಗೊಳಿಸಿರುವ ಪೋಪ್‌ರ ಮುಂದಿನ ಕಾರ್ಯ ನೂತನ ಪರಿಪತ್ರ ಎಂದು ಕಾರ್ಡಿನಲ್ ತಿಳಿಸಿದ್ದಾರೆ.

## ಒಲಂಪಿಕ್ ಪದಕಗಳನ್ನು ಮಾತೆ ಮರಿಯಮ್ಮನವರಿಗೆ ಸಮರ್ಪಿಸಿದ ಈಜುಗಾರ್ತಿ.

ಸ್ಪೇನ್‌ನ ಈಜುಗಾರ್ತಿ 21 ವರ್ಷದ ಮಿರೇಯಾ ಬೆಲ್ಮೊಂಟೆ ತಾನು ಎಂಟುನೂರು ಮೀ. ಫ್ರೀ ಸ್ಟೈಲ್ ಹಾಗೂ ಇನ್ನೂರು ಮೀ ಬಟರ್ ಫ್ಲೈ ವಿಭಾಗದಲ್ಲಿ ಗಳಿಸಿದ ಬೆಳ್ಳಿ ಪದಕಗಳನ್ನು ಮಾತೆ ಮರಿಯಮ್ಮನವರಿಗೆ ಸಮರ್ಪಿಸಿದ್ದಾಳೆ.

## ಬ್ರೆಜಿಲ್ ಮಹಿಳಾ ವಾಲಿಬಾಲ್ ಆಟಗಾರ್ತಿಯರ ದೇವರ ನಾಮ ಸ್ಮರಣೆ

ಬ್ರೆಸಿಲ್ ಮಹಿಳಾ ವಾಲಿಬಾಲ್ ಆಟಗಾರ್ತಿಯರು ತಮ್ಮ ಕೋಚ್ ಜೊತೆಗೂಡಿ, ತಾವು ಗೆದ್ದ ಸ್ವರ್ಣ ಪದಕಕ್ಕಾಗಿ ದೇವರಿಗೆ ವಂದಿಸುತ್ತಾ 'ಕರ್ತರ ಪ್ರಾರ್ಥನೆ' ಯೊಂದಿಗೆ ತಮ್ಮ ಸಂತಸವನ್ನು ಹಂಚಿಕೊಂಡರು,

## ಪೋಪ್ ಅಂಗದಾನ ಮಾಡಲಾಗದು : ವ್ಯಾಟಿಕನ್ ಉವಾಚ

ಪೋಪ್ ಅವರ ದೇಹ ವಿಶ್ವಧರ್ಮಸಭೆಯ ಸೊತ್ತಾಗಿರುವುದರಿಂದ ಅವರ ಬಳಿ ದೇಹದಾನಿಯ ಕಾರ್ಡ್ ಇದ್ದರೂ ಅವರು ತಮ್ಮ ಮರಣದ ನಂತರ ತಮ್ಮ ದೇಹದ ಅಂಗಾಂಗಗಳನ್ನು ದಾನ ಮಾಡಲಾಗದು ಎಂದು ವ್ಯಾಟಿಕನ್ ತಿಳಿಸಿದೆ. ಪೋಪ್ 16ನೇ ಬೆನೆಡಿಕ್ಟ್, ಕಾರ್ಡಿನಲ್ ಜೋಸೆಫ್ ರಾತ್ಸಿಂಗರ್ ಆಗಿದ್ದಾಗ ದೇಹದಾನಿಯ ಕಾರ್ಡ್ ಹೊಂದಿದ್ದರಿಂದ ಅವರಿಗೆ ದೇಹದಾನ ಅಥವಾ ದೇಹದ ಅಂಗಾಂಗಗಳ ದಾನ ಮಾಡಲು ಅವಕಾಶವಿತ್ತು. ಆದರೆ ಪೋಪ್ ಆಗಿ ಆಯ್ಕೆಯಾದ ಕ್ಷಣದಿಂದಲೇ ಆ ಕಾರ್ಡ್ ಅಸಿಂಧುಗೊಂಡಿದೆ. ಜರ್ಮನಿಯ ವೈದ್ಯರೊಬ್ಬರು ದೇಹದಾನದ ವಿಚಾರವಾಗಿ ಪೋಪ್ ಅವರ ಆದರ್ಶ ಪಾಲಿಸಬೇಕೆಂದು ಕರೆ ನೀಡಿದ ಹಿನ್ನೆಲೆಯಲ್ಲಿ ಪೋಪ್ 16ನೇ ಬೆನೆಡಿಕ್ಟ್ ಅವರ ಆಪ್ತ ಕಾರ್ಯದರ್ಶಿ ಮೊನ್ಸಿಜ್ಞೋರ್ ಜಾರ್ಜ್ ಗೇಸ್ವೆನ್ ಪೋಪ್ ಅವರ ಮರಣದ ನಂತರ ಅವರ ದೇಹವನ್ನು ಸಂಪೂರ್ಣವಾಗಿ ಸಮಾಧಿ ಮಾಡಬೇಕು ಎಂದು ಹೇಳಿಕೆ ನೀಡಿದ್ದಾರೆ. ಪೋಪ್ ಇಡೀ ಕಥೋಲಿಕ ಸಮುದಾಯಕ್ಕೆ ಸೇರಿದವರು; ಅವರ ದೇಹವನ್ನು ಎಂದೂ ಊನ ಮಾಡಲಾಗದು; ಪ್ರಥಮ ಪೋಪ್ ಸಂತ ಪೇತ್ರ ಅವರ ಉತ್ತರಾಧಿಕಾರಿಯಾಗಿರುವ ಪೋಪ್ ಅಖಿಲ ವಿಶ್ವಕ್ಕೆ ಕಥೋಲಿಕ ಚರ್ಚ್‌ನ ಮುಖಂಡರಾಗಿರುವುದರಿಂದ ಅವರು ಪೂರ್ಣ ಆತ್ಮ ಹಾಗೂ ಶರೀರವಾಗಿ ವಿಶ್ವ ಧರ್ಮಸಭೆಗೆ ಸೇರಿದವರಾಗಿದ್ದಾರೆಂದು ಮೊನ್ಸಿಜ್ಞೋರ್ ಜಾರ್ಜ್ ತಿಳಿಸಿದ್ದಾರೆ.

ಜಿಪುಣನನ್ನು ದಾನದಿಂದಲೂ ಕಳ್ಳನನ್ನು ಸತ್ಯದಿಂದಲೂ ಜಯಿಸಬೇಕು.

# ವಿಶ್ವಾಸದ ವರ್ಷ ಮತ್ತು ಧರ್ಮಕ್ಷೇತ್ರದ ಉದ್ಘಾಟನೆ

ದಿನಾಂಕ 11.10.2012 ರಂದು ಹಾಸನದ ಸಂತ ಅಂತೋಣಿಯವರ ದೇವಾಲಯದಲ್ಲಿ ವಿಶ್ವಾಸದ ವರ್ಷ ಮತ್ತು ಚಿಕ್ಕಮಗಳೂರು ಧರ್ಮಕ್ಷೇತ್ರದ ಉದ್ಘಾಟನೆಯನ್ನು ವಿಜೃಂಭಣೆಯ ಬಲಿಪೂಜೆಯ ಮೂಲಕ ನೆರವೇರಿಸಲಾಯಿತು.

ಪ್ರಪ್ರಥಮವಾಗಿ ಧರ್ಮಾಧ್ಯಕ್ಷರನ್ನು ಧರ್ಮಗುರುಗಳು ಮತ್ತು ಭಕ್ತಾದಿಗಳು ಮೆರವಣಿಗೆಯ ಮೂಲಕ ದೇವಾಲಯಕ್ಕೆ ಬರಮಾಡಿಕೊಂಡರು. ನಂತರ ಬಲಿಪೂಜೆಯ ಪ್ರಾರಂಭದಲ್ಲಿ ವಂ.ಸ್ವಾಮಿ ಡೇವಿಡ್ ಅಂತೋಣಪ್ಪನವರು ಕಾರ್ಯಕ್ರಮದ ಉದ್ದೇಶವನ್ನು ನಿರೂಪಿಸಿದರು. ಧರ್ಮಾಧ್ಯಕ್ಷರು ಪ್ರಬೋಧನೆಯಲ್ಲಿ ಜಗದ್ಗುರು ಪೋಪ್ 16 ನೇ ಬೆನೆಡಿಕ್ಟ್ ಆದೇಶದಂತೆ ವಿಶ್ವಾಸದ ವರ್ಷದ ಮಹತ್ವವನ್ನು ಮತ್ತು ವಿಶ್ವಾಸವನ್ನು ತಮ್ಮ ಧರ್ಮಕೇಂದ್ರ ವ್ಯಾಪ್ತಿಯಲ್ಲಿ ವೈಯ್ಯಕ್ತಿಕ ಮತ್ತು ಸಮುದಾಯದೊಂದಿಗೆ ಹೆಚ್ಚಿಸಲು 11 ಅಂಶಗಳ ವಿವಿಧ ಕಾರ್ಯಕ್ರಮಗಳನ್ನು ಅಳವಡಿಸಲು ತಿಳಿಸಿದರು. ಬಲಿಪೂಜೆಯ ನಂತರ ಉದ್ಘಾಟನೆ ಕಾರ್ಯಕ್ರಮವನ್ನು ಆಯೋಜಿಸಲಾುತು. ಈ ಪ್ರಯುಕ್ತ ಧರ್ಮಾಧ್ಯಕ್ಷರುಗಳು ವಿಶ್ವಾಸ ವರ್ಷ ಮತ್ತು ಧರ್ಮಕ್ಷೇತ್ರದ ಲಾಂಛನದ ಪರದೆಯನ್ನು ಸರಿಸುವ ಮೂಲಕ ವಿಧ್ಯುಕ್ತವಾಗಿ ಉದ್ಘಾಟನೆಯನ್ನು ಮಾಡಿದರು. ನಂತರ ವಂ.ಸ್ವಾಮಿ ರೋನಾಲ್ಡ್ ಕಾರ್ಡೋಜರವರು ಲಾಂಛನದ ಮಹತ್ವವನ್ನು ಈ ರೀತಿಯಾಗಿ ವಿವರಿಸಿದರು.

ಈ ಲಾಂಛನದಲ್ಲಿ ಒಂದು ನಾವೆಯ ಚಿತ್ರವಿದೆ, ನಾವೆಯ ಮೇಲೊಂದು ವೃತ್ತ, ವೃತ್ತದೊಳಗೆ ಒಂದು ಶಿಲುಬೆ. ನಾವೆಯ ಚಿತ್ರ ಯಾತ್ರಿಕ ಧರ್ಮಸಭೆಯನ್ನು ಸಂಕೇತಿಸುತ್ತದೆ. ಸರ್ವಸದಸ್ಯರೊಂದಿಗೆ ಒಂದು ಕುಟುಂಬವಾಗಿ ಇಡೀ ಧರ್ಮಸಭೆಯು ಐಹಿಕ, ತಾತ್ಕಾಲಿಕ ಲೋಕದೊಂದಿಗೆ ಶಾಶ್ವತ ಪರಲೋಕದ ತನ್ನ ನಿತ್ಯ ನಿವಾಸದೆಡೆ ಸತತ ಪಯಣದಲ್ಲಿರುವುದನ್ನು ಸೂಚಿಸುತ್ತದೆ. ವೃತ್ತವು ಪರಮಪ್ರಸಾದವನ್ನು ಸೂಚಿಸುತ್ತಾ, ಇಡೀ ಧರ್ಮಸಭೆಯು ಪರಮ ಪ್ರಸಾದದ ಸುತ್ತ ನೆರೆದಿರುವ ಸಮುದಾಯುವಾಗಿದೆ ಎಂದು ನೆನಪಿಸುತ್ತದೆ.

ವೃತ್ತದೊಳಗಿನ ಶಿಲುಬೆ ಪ್ರಭು ಯೇಸುಕ್ರಿಸ್ತರ ರಕ್ಷಣಾ ಚರಿತ್ರೆಯನ್ನು ನಮೂದಿಸುವಂತೆಯೇ IHS ಚಿಹ್ನೆ ಪ್ರಭು ಯೇಸು ಇಡೀ ಲೋಕದ ಏಕೈಕ ರಕ್ಷಕರು, ಅವರ ನೇತೃತ್ವದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಭಕ್ತ ವಿಶ್ವಾಸಿಗಳೆಲ್ಲರೂ ಪರಮ ಪ್ರಸಾದದ ಸುತ್ತ ವಿಶ್ವಾಸ ನಿವೇದನೆಯಲ್ಲಿ ನಿರತರಾದವರಾಗಿ ಜೀವನ ಪಯಣದಲ್ಲಿ ಅದನ್ನು ಇತರರಿಗೂ ಸಾರುತ್ತಾ ಸ್ವರ್ಗ ಸಾಮ್ರಾಜ್ಯದೆಡೆ ಸಾಗುವ ನಮ್ಮ ಕರ್ತವ್ಯವನ್ನು ನೆನಪಿಸುತ್ತದೆ.

**ಜ್ಯೂಬಿಲಿ ಲಾಂಛನ:**

**ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ ಭೌಗೋಳಿಕ ಪಟ್ಟಿ. ನಾವು ನೆಲೆಸಿ ಜೀವಿಸುವ ನಮ್ಮ ಊರು, ಧರ್ಮಕೇಂದ್ರ, ಸಮುದಾಯಗಳಲ್ಲಿ ಕ್ರಿಸ್ತರ ಶುಭಸಂದೇಶ, ದೇವರ ವಾಕ್ಯದ ಹರಡುವಿಕೆ ಪಟದ ಮೇಲಿರುವ ಶುಭ ಸಂದೇಶ ತಿಳಿಸುತ್ತದೆ. ಬೈಬಲ್ಲಿನ ಮೇಲೆ ಉರಿಯುತ್ತಿರುವ ದೀಪ ಕ್ರಿಸ್ತ ಜ್ಯೋತಿಯನ್ನು ಬಿಂಬಿಸುತ್ತದೆ. ಶಿಲುಬೆ ಕ್ರಿಸ್ತರನ್ನು ಹಾಗೂ ಕ್ರೈಸ್ತ ಸಮುದಾಯವನ್ನು ಸೂಚಿಸುತ್ತದೆ. ಕ್ರಿಸ್ತರಿಗೆ ಯೋಗ್ಯ ನೈಜ ಸಾಕ್ಷಿಗಳಾಗಿ ಬಾಳಲು, ಕ್ರಿಸ್ತ ಜ್ಯೋತಿಯನ್ನು ಪಸರಿಸಲು, ದೇವರ ವಾಕ್ಯವನ್ನು ಪ್ರಕಟಪಡಿಸಲು ಪರಿ ಶುದ್ದಾತ್ಮರು ಸದಾ ಸತ್ಪ್ರೇರಣೆಯಾಗಿ ನಮ್ಮನ್ನು ಸತ್ಫಲಗಳಿಂದ ಸಾರ್ಥಕ ವ್ಯಕ್ತಿಗಳನ್ನಾಗಿ, ಕುಟುಂಬಗಳಾಗಿ, ಸಮುದಾಯವಾಗಿ ಮಾಡಲೆಂದು ಪವಿತ್ರಾತ್ಮರ ಸಂಕೇತವಾಗಿ ಪಾರಿವಾಳ ಅದನ್ನು ಸೂಚಿಸುತ್ತದೆ.**

ತದನಂತರ ವಿಶ್ವಾಸವನ್ನು ಧರ್ಮಪ್ರಾಂತ್ಯಾದ್ಯಂತ ಪ್ರಸರಿಸುವ ಸಂಕೇತವಾಗಿ ಧರ್ಮಾಧ್ಯಕ್ಷರುಗಳು ಜ್ಯೂಬಿಲಿ ಮೇಣದ ಬತ್ತಿಯನ್ನು ಬೆಳಗಿಸಲಾಯಿತು.

ಝುಗ ಝುಗನೇ ಬೆಳಗುತ್ತಿದೆ, ವಿಶ್ವಾಸದ ದೀಪ
ಅದರಲ್ಲಿ ಕಾಣುತ್ತಿದೆ, ಶ್ರೀ ಯೇಸು ರೂಪ
ವಿಶ್ವಾಸದಿ ಸಾಗೋಣ, ಬೆಳಕಿನ ದಾರಿಯಲಿ
ಪ್ರೀತಿಯಲಿ ಬಾಳೋಣ, ಪ್ರಭು ದೇವನ ಆಶೀರ್ವಾದದಲಿ

ಬಂಗಾರದ ವರುಷ ತರಲಿ ಸರ್ವರಿಗೂ ನಿತ್ಯ ಹರುಷ ಎಂದು ತಮ್ಮ ಚಿನ್ನದಂಥ ನುಡಿಗಳಿಂದ ಹಾರೈಸಿದ ಧರ್ಮಾಧ್ಯಕ್ಷರು ವಿಶ್ವಾಸದ ಸಂಕೇತವಾಗಿ ಬೆಳಗಿಸಿದ ಜ್ಯೂಬಿಲಿ ಜ್ಯೋತಿಯಿಂದ ಮೇಣದ ಬತ್ತಿಗಳನ್ನು ಹೊತ್ತಿಸಿ ಎಲ್ಲಾ ಧರ್ಮಕೇಂದ್ರಗಳ ಗುರುಗಳಿಗೆ ಹಸ್ತಾಂತರಿಸಿದರು. ನಂತರ ಭಕ್ತ ಸಮೂಹದೊಂದಿಗೆ ವಿಶ್ವಾಸದ ನಿವೇದನೆ ಮತ್ತು ಸಮರ್ಪಣಾ ವಾಗ್ದಾನವನ್ನು ಮಾಡಲಾಯಿತು. ಗಾಯನ ವೃಂದವು "ಉತ್ಸಾಹ ಉತ್ಸಾಹ ಸುವರ್ಣ ಮಹೋತ್ಸವ" ಎಂಬ ಜ್ಯೂಬಿಲಿ ಗೀತೆ ಹಾಡಿ ಕಾರ್ಯಕ್ರಮಕ್ಕೆ ಮೆರುಗನ್ನು ನೀಡಿದರು.

**ಆಧುನಿಕ ಯುಗ ಎಲ್ಲವೂ ಕಂಪ್ಯೂಟರೀಕರಣ.**

**ಎಲ್ಲೆಲ್ಲೂ ಅಂತರ್ಜಾಲದ ಅನಾವರಣ ಧರ್ಮಕ್ಷೇತ್ರದ ನೂತನ ಪಾದಾರ್ಪಣೆ ಅಂತರ್ಜಾಲ ತಾಣದ ಲೋಕಾರ್ಪಣೆ**

ಈ ಸಮಾರಂಭವನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಘಟನೆಯೆಂದರೆ ಚಿಕ್ಕಮಗಳೂರು ಧರ್ಮಕ್ಷೇತ್ರದ ಅಂತರ್ಜಾಲ ತಾಣದ ಉದ್ಘಾಟನೆಯನ್ನು ಅತೀ ಪೂಜ್ಯ ಧರ್ಮಾಧ್ಯಕ್ಷರು ನೆರವೇರಿಸಿದರು. ಈ ಸಂಭ್ರಮದ ಸಮಗ್ರ ವಿವರ ಮತ್ತು ನಿರೂಪಣೆಯನ್ನು ಧರ್ಮಕ್ಷೇತ್ರದ ಸಮೂಹ ಮಾಧ್ಯಮ ಆಯೋಗದ ಮುಖ್ಯಸ್ಥರಾದ ವಂ.ಸ್ವಾಮಿ ಪ್ಯಾಟ್ರಿಕ್ ಜೋನ್ಸಾಸ್‌ರವರು ನೆರವೇರಿಸಿದರು. ಅಂತರ್ಜಾಲ ತಾಣ ಉದ್ಘಾಟನ ಮುಂದುವರೆದು ವಂ.ಸ್ವಾಮಿ ಪ್ಯಾಟ್ರಿಕ್ ಜೋನ್ಸಾಸ್‌ರವರು ಅಂತರ್ಜಾಲ ತಾಣದ ವಿಳಾಸವನ್ನು ನೀಡುತ್ತಾ www.chikmagalurdiocese.com ಇದರ ಅಡಿಯಲ್ಲಿ ಧರ್ಮಕ್ಷೇತ್ರದ ಧರ್ಮಕೇಂದ್ರದ ಧರ್ಮಗುರುಗಳು, ಧಾರ್ಮಿಕ ಸಂಘ ಸಂಸ್ಥೆಗಳ ಸಮಗ್ರ ಮಾಹಿತಿಯನ್ನು ಸಾರ್ವಜನಿಕರು ಪಡೆಯಬಹುದಾಗಿದೆ ಎಂದರು. ಅಂತರ್ಜಾಲ ತಾಣವನ್ನು ತಯಾರಿಸಲು ಶ್ರಮಿಸಿದ ತಂತ್ರಜ್ಞರಾದ ಶ್ರೀಯುತ ನವೀನ್ ಡಿ'ಸೋಜರವರ ಸೇವೆಯನ್ನು ಸ್ಮರಿಸಿ ಪೂಜ್ಯ ಧರ್ಮಾಧ್ಯಕ್ಷರಿಂದ ಸನ್ಮಾನಿಸಲಾಯಿತು. ಹಾಗೆಯೇ ಸ್ವಾಮಿ ಪ್ಯಾಟ್ರಿಕ್‌ರವರು ಮುಂದಿನ ದಿನಗಳಲ್ಲಿ ಧರ್ಮಪ್ರಾಂತ್ಯದ ಧರ್ಮಕೇಂದ್ರಗಳು ಮತ್ತು ವಿವಿಧ ಧಾರ್ಮಿಕ ಸಂಘ ಸಂಸ್ಥೆಗಳಲ್ಲಿ ಆಯೋಜಿಸುವ ಕಾರ್ಯಯೋಜನೆಗಳ ಮಾಹಿತಿಯನ್ನು ಆಗಾಗ ಅಂತರ್ಜಾಲ ತಾಣದಲ್ಲಿ ಸೇರಿಸಲು ಮನವಿ ಮಾಡಿದರು ಮತ್ತು ಇದರ ಜವಾಬ್ದಾರಿ ಹಾಸನ ವಲಯದಲ್ಲಿ ವಂ.ಸ್ವಾಮಿ ಆರೋಗ್ಯರಾಜ್, ಡಾನ್ ಬೋಸ್ಕೋ ಮತ್ತು ಶ್ರೀ.ಪ್ರಶಾಂತ್, ಸಿ.ಎಂ.ಎಸ್.ಎಸ್.ಎಸ್., ಬಾಳೆಹೊನ್ನೂರು ವಲಯದಲ್ಲಿ ವಂ.ಸ್ವಾಮಿ ಮಾರ್ಸೆಲ್ ಪಿಂಟೋ, ಚಿಕ್ಕಮಗಳೂರು ಮಲಯದಲ್ಲಿ ವಂ.ಸ್ವಾಮಿ. ಪ್ಯಾಟ್ರಿಕ್ ಜೊನ್ಸಾಸ್, ಕಡೂರು ಮತ್ತು ವಂ.ಸ್ವಾಮಿ ಡೇವಿಡ್ ಪ್ರಕಾಶ್‌ರವರಿಗೆ ನೀಡಿರುತ್ತಾರೆ. ಉದ್ಘಾಟನೆಯ ಕಾರ್ಯಕ್ರಮವನ್ನು ಸ್ವಾಮಿ ರೋನಾಲ್ಡ್ ಕಾರ್ಡೋಜಾರವರು ಸುಂದರವಾಗಿ ನಿರೂಪಿಸಿಕೊಟ್ಟರು. ವಂ.ಸ್ವಾಮಿ ಜಾರ್ಜ್ ಅಂದ್ರಾದೆಯವರು ವಂದಿಸಿ ಸಹ ಭೋಜನದೊಂದಿಗೆ ಸಮಾರಂಭ ಮುಕ್ತಾಯವಾಯಿತು. ವಿವಿಧ ಧರ್ಮಕೇಂದ್ರಗಳಿಂದ ಭಕ್ತಾದಿಗಳು ಆಗ"ಸಿದ್ದು ಸುಮಾರು 1500 ಸಾವಿರದಷ್ಟು ಭಕ್ತಾದಿಗಳು ಭಾಗವಹಿಸಿದ್ದರು.

ಧರ್ಮಕ್ಷೇತ್ರದ ಅಂತರ್ಜಾಲ ತಾಣಕ್ಕೆ (Web site) ಮಾಹಿತಿ ನೀಡಲು ದಯಮಾಡಿ ಸಂಪರ್ಕಿಸಿ:

| | ಹೆಸರು | ಪೋನ್.ನಂ. | ಇಮೇಲ್ ಐ.ಡಿ. |
|---|---|---|---|
| ಹಾಸನ ವಲಯ | ವಂ.ಸ್ವಾಮಿ ಆರೋಗ್ಯರಾಜ್, ಡಾನ್ ಬೋಸ್ಕೋ, ಹಾಸನ | 9480471502 | arogyarajsdb2006@rediffmail.com |
| ಶ್ರೀ.ಪ್ರಶಾಂತ್, ಸಿ.ಎಂ.ಎಸ್.ಎಸ್.ಎಸ್., ಹಾಸನ | | 9902485485 | pachchuhj@gmail.com |
| ಬಾಳೆಹೊನ್ನೂರು ವಲಯ | ವಂ.ಸ್ವಾಮಿ ಮಾರ್ಸೆಲ್ ಪಿಂಟೋ, ಕಳಸ | 9448657274 | marcelpinto4@gmail.com |
| ಚಿಕ್ಕಮಗಳೂರು ಮಲಯ | ವಂ.ಸ್ವಾಮಿ. ಪ್ಯಾಟ್ರಿಕ್ ಜೊನ್ಸಾಸ್, ಕಡೂರು | 9448421860 | frpatrickjones@gmail.com |
| ವಂ.ಸ್ವಾಮಿ ಡೇವಿಡ್ ಪ್ರಕಾಶ್, ಚಿಕ್ಕಮಗಳೂರು | | 9448200977 | frdavidprakash@yahoo.com |

ವರದಿ : ವಿನ್ಸಿ ಸಿಕ್ವೇರಾ, ಹಾಸನ.



ಅನೇಕರು ಗೆದ್ದಾಗ ಸೋಲುತ್ತಾರೆ, ಕೆಲವರು ಸೋತಾಗ ಗೆಲ್ಲುತ್ತಾರೆ.